
ಸಂಚಿಕೆ - 18, ಏಪ್ರಿಲ್ 26, ಮೇ 2 - 1999 ರೂ. 3/- ದುಡಿವ ಜನರ ಪ್ರಾಣಮಿತ್ರ

ಐಕ್ಯರಂಗ



ಜಾತಿ, ಅಸ್ಪೃಶ್ಯತೆಯ ಶಾಪ

ಜೆ. ಹೆಚ್. ಪಟೇಲ್ ದೊಂಬರಾಟ

ಕಾದು ನಿಂತಿದೆ ಮೇ ದಿನ

ಜಾತ್ಯಾತೀತ ಸರ್ಕಾರಕ್ಕಾಗಿ ಸಾಗಿದೆ ಸಮರ

ಬೆಂಗಳೂರಿಗೆ 20 ಸಾವಿರ ಆಟೋ ?

ಸಂಪುಟ 22 ಸಂಚಿಕೆ 18 ಏಪ್ರಿಲ್ 26-ಮೇ 2, 1999

ಜೆ.ಹೆಚ್.ಪಟೇಲ್ ದೊಂಬರಾಟ

ದಣಿಲಿಯಿಂದ ಹಾರಿದ ಮುಖ್ಯಮಂತ್ರಿ ಜೆ.ಹೆಚ್.ಪಟೇಲರು ಬೆಂಗಳೂರು ತಲುಪುತ್ತಿದ್ದಂತೆ ಕೇಂದ್ರದಲ್ಲಿ ಪರ್ಯಾಯ ಸರ್ಕಾರದ ರಚನೆಯಲ್ಲಿ ಜನತಾದಳ ತಾಟಸ್ಥ ಧೋರಣೆ ಅನುಸರಿಸಬೇಕೆಂದು ಪುನರುಚ್ಚರಿಸಿದ್ದಾರೆ. ಪರ್ಯಾಯ ಸರ್ಕಾರದ ರಚನೆಗಾಗಿ ಕಾಂಗ್ರೆಸ್‌ಗೆ ಬೆಂಬಲ ನೀಡುವುದು ಅನಿವಾರ್ಯವೆಂದಿರುವ ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡ ಹಾಗೂ ಜನತಾದಳದ ರಾಜ್ಯ ಅಧ್ಯಕ್ಷ ಸಿದ್ಧರಾಮಯ್ಯನವರ ಹೇಳಿಕೆ ಅವರ ವೈಯಕ್ತಿಕವೆಂದು ತಿಳಿಸಿದ್ದಾರೆ. ಆದರೆ ಕೋಮುವಾದಿ ಬಿಜೆಪಿ ಸರ್ಕಾರದ ವಿರುದ್ಧ ನಿರ್ಣಾಯಕವಾದ ಮತದಾನದಲ್ಲಿ ಜನತಾದಳದ ಸಂಸತ್ ಸದಸ್ಯರು ಸ್ಪಷ್ಟವಾಗಿ ಭಾಗಿಯಾಗಿದ್ದಾರೆಂಬುದು ಗಮನಿಸಬೇಕಾದ ಅಂಶ. ವಾಜಪೇಯಿ ಮಂಡಿಸಿದ ವಿಶ್ವಾಸಮತ ನಿರ್ಣಯವು ತಿರಸ್ಕೃತವಾಗುವಲ್ಲಿ ಮತಗಳ ಅಂತರವನ್ನು ಗಮನಿಸಿದರೆ (ಕೇವಲ ಒಂದು ಮತ) ಪಟೇಲರ ತಟಸ್ಥ ಧೋರಣೆಯ ಸಕ್ರಿಯ ರಾಜಕಾರಣದ ಹೂರಣ ಅರ್ಥ ವಾಗುವಂತಹುದೇ. ಅವರ 'ಖ್ಯಾತ ಸಮಾಜವಾದಿ' ಗೆಳೆಯ ಜಾರ್ಜ್ ಫರ್ನಾಂಡೀಸ್ ಮತ್ತು ಮೌಲ್ಯಾಧಾರಿತ ರಾಜಕಾರಣಿ ರಾಮಕೃಷ್ಣ ಹೆಗಡೆಯವರೊಂದಿಗೆ ಬೆಸಗೊಂಡು ಅಧಿಕಾರದಲ್ಲುಳಿಯಲು ಬಿಜೆಪಿಯ 'ಕಮಲ'ದೊಂದಿಗೆ ಕೈಜೋಡಿಸುವ ದಾವ್ಪಟದ ಅಂಚನ್ನು ಹಿಡಿಯಲು ದಣಿವರಿಯದ ಪ್ರಯತ್ನ ನಡೆಸಿರುವುದು ಗುಟ್ಟಿನ ವಿಷಯವೇನಲ್ಲ. ಬಿಜೆಪಿಯು ಜನತಾದಳದ ಸರ್ಕಾರದ ವಿರುದ್ಧ ಭೀಕರ ಧಾಳಿ ನಡೆಸುತ್ತಾ 'ಸಂಕಟ ಯಾತ್ರೆ' ಮುಂದುವರಿಸಿರುವಾಗ ಇದರ ಬಗ್ಗೆ ಚಕಾರವೆತ್ತದ ಪಟೇಲರ ತಾಟಸ್ಥ ನಿಲುವಿನಲ್ಲಿ ಲೋಹಿಯಾವಾದದ ಸಮಾಜವಾದದ ಸೊಗಡಿದೆಯೇ ಎಂದು ಪರಿಶೀಲಿಸಬೇಕು.

ರಾಜ್ಯದಲ್ಲಿ ರೈತರು ಆತ್ಮಹತ್ಯೆ ಮಾಡಿಕೊಳ್ಳುತ್ತಿರುವಾಗ, ಅಲ್ಪಸಂಖ್ಯಾತರ ಮೇಲೆ ಸಂಘ ಪರಿವಾರ ಭೀಕರ ಧಾಳಿ ನಡೆಸುತ್ತಿರುವಾಗ ತಮ್ಮ ಹರಿತ ನಾಲಗೆಯಿಂದ ಹಾಸ್ಯಚಟಾಕಿಗಳನ್ನು ಹಾರಿಸುತ್ತಾ ವಿಧಾನಸಭೆಯಲ್ಲಿ ಕಾಲ ತಳ್ಳಿದ ಪಟೇಲರ 'ಮುತ್ಸದ್ದಿ' ತನ ಸ್ಮರಣಾರ್ಹ.

ಸ್ವತಃ ಲೋಹಿಯಾರವರು ಮತ್ತು ಶಾಂತವೇರಿಗೋಪಾಲಗೌಡರ ಶಿಷ್ಯರೆಂದು ಫೋಟೋ ತೋರಿಸುವ ಪಟೇಲರು ತಾವೇ ಪ್ರಕಟಿಸಿದ ಪುಸ್ತಕಗಳನ್ನು ತಿರುಗಿ ನೋಡಬೇಕು.

ಸಂಪಾದಕೀಯ

'ಲೋಹಿಯಾರವರು ಈ ಫ್ಯಾಸಿಸ್ಟ್ ಮನೋಭಾವದ ಸಂಘ ಪರಿವಾರದ ಹಿಂದುತ್ವದ ಬಗ್ಗೆ - "....... ಈ ರಾಷ್ಟ್ರೀಯತೆ ವಿಭಜಿಸುವ, ವಿನಾಶಗೊಳಿಸುವ ಕಷ್ಟ ಸಂಕಟಗಳನ್ನು ಬಿತ್ತುವ, ವಿಷಹಾಕುವ ಮತ್ತು ಒಂದು ರಾಷ್ಟ್ರವೆಂಬಲ್ಲಿ ಎರಡನ್ನು ಕಲ್ಪಿಸುವಂಥ ಕ್ಷುಲ್ಲಕ ಸ್ವಾರ್ಥ ಮನಸ್ಸುಗಳಿಗೆ ಕುಮ್ಮಕ್ಕು ಕೊಡುವ ವಿಸ್ಮಯಕಾರಿ ಶಕ್ತಿಯಾಗುತ್ತದೆ....." "ಇದಕ್ಕೊಂದು ಕರಾಳ ಮುಖವಿದೆ...." ಎಂದಿದ್ದಾರೆ.

ಈ ನಡುವೆ ಗುಲ್ಬರ್ಗಾದಲ್ಲಿ ಉಡುಪಿಯ ಪೇಜಾವರ ಮಠಾಧೀಶರೂ, ವಿಶ್ವಹಿಂದು ಪರಿಷತ್‌ನ ಕಟ್ಟಾಳುವೂ ಸಕ್ರಿಯ ಧರ್ಮರಾಜಕಾರಣಿಯೂ ಆಗಿರುವ ವಿಶ್ವೇಶ್ವರ ತೀರ್ಥರು "ಕೇಂದ್ರದಲ್ಲಿ ಪದೇ ಪದೇ ಸರ್ಕಾರ ಬದಲಿಸುವುದರಿಂದ ದೇಶದ ಸಮಗ್ರತೆ ಹಾಗೂ ಅಭಿವೃದ್ಧಿಗೆ ಧಕ್ಕೆ ಬರಲಿದೆ. ಆದ್ದರಿಂದ ಸರ್ವಪಕ್ಷಗಳನ್ನೊಳಗೊಂಡ ರಾಷ್ಟ್ರೀಯ ಸರಕಾರವನ್ನು ರಚಿಸಿ, ಅತೀ ಹೆಚ್ಚಿನ ಸಂಸದರನ್ನು ಹೊಂದಿರುವ ಪಕ್ಷದ ನಾಯಕನಿಗೆ ಪ್ರಧಾನ ಪಟ್ಟ ವಹಿಸಿಕೊಡುವುದು ಸೂಕ್ತ" ಎಂದು ಅಪ್ಪಣೆ ಕೊಡಿಸಿದ್ದಾರೆ. ಭಾರತದೇಶದ ರಾಜಕೀಯ ವ್ಯವಸ್ಥೆ ಹಾಗೂ ಸಂಸದೀಯ ಪ್ರಜಾಪ್ರಭುತ್ವ ಹೊರಳು ದಾರಿಯಲ್ಲಿರುವ ಸನ್ನಿವೇಶಗಳನ್ನು ಸರಿಯಾಗಿ ಗ್ರಹಿಸದೇ ಸಿನಿಕತನದ ಗೊಂದಲದವರಿಗೆ ಇದು ಅಮೂಲ್ಯ 'ಮಾರ್ಗದರ್ಶನ' ಎನ್ನಿಸಬಹುದು. ಆದರೆ ಮುಚ್ಚಿಟ್ಟ ಅಜೆಂಡಾದ ಎರಡು ಅಂಶಗಳಿವೆ. ದೇಶದ ಸಮಗ್ರತೆ, ಐಕ್ಯತೆಗೆ ಹಾಗೂ ಅಭಿವೃದ್ಧಿಗೆ ಅಪಾರ ಹಾನಿ ಮಾಡಿರುವ ಬಿಜೆಪಿ ಸರ್ಕಾರ ಬದಲಾಗಬಾರದು. ಆದರೀಗ ಬಿಜೆಪಿ ವಿಶ್ವಾಸಮತದಲ್ಲಿ ಸೋತಿದೆ..... ಪರ್ಯಾಯ ಸರ್ಕಾರವೊಂದು ರೂಪುಗೊಳ್ಳುವ ಪ್ರಕ್ರಿಯೆ ನಡೆದಿದೆ. ಈ ಹಂತದಲ್ಲಿ ಮತ್ತೆ ವಾಜಪೇಯಿಯವರನ್ನು ಪ್ರಧಾನಿ ಪಟ್ಟಕ್ಕೇರಿಸಿ ಉಳಿದ ಎಲ್ಲಾ ಪಕ್ಷಗಳು ಅವರಿಗೆ ಜಯಘೋಷ ಹಾಕುತ್ತಾ, 'ರಾಷ್ಟ್ರೀಯ' ಕರ್ತವ್ಯ ನೆರವೇರಿಸಬೇಕೆಂಬುದು ಇನ್ನೊಂದು ಅಂಶ. ಹೇಗಿದೆ ಖಾವಿ ರಾಜಕಾರಣ!

ಪಟೇಲರು, ಯಡಿಯೂರಪ್ಪನವರು, ಫರ್ನಾಂಡೀಸ್, ಹೆಗಡೆ ಹಾಗೂ ಶ್ರೀಪಾದಂಗಳ ಗಂಟಲಿನ ಗಂಟೆಯ ನಾದ ಒಂದೇ ಒಂದು.

ಇರಲಿ, ಬಿಜೆಪಿ ಅದೆಷ್ಟೇ ವೀರಾವೇಶದಿಂದ ತನ್ನ ತೋಳ್ಬಲವನ್ನು ಮಾಧ್ಯಮಗಳಲ್ಲಿ ಹಿಗ್ಗಿಸಿ ತೋರಿಸುತ್ತಿದ್ದರೂ, ತನ್ನ ಆದರ ಅಳಿದುಳಿದ ಮಿತ್ರಪಕ್ಷಗಳ ಸದಸ್ಯರು ಒಬ್ಬೊಬ್ಬರಾಗಿ ಕಳಚಿಕೊಳ್ಳತೊಡಗಿದ್ದಾರೆ. ತೆಲುಗುದೇಶಂನ ಸದಸ್ಯನೊಬ್ಬ ಪಕ್ಷದಿಂದ ಹೊರಬಂದ ಮಾತ್ರವಲ್ಲ ಸ್ವತಃ ತೆಲುಗುದೇಶಂ ಸ್ವತಂತ್ರ ನಿಲುಮೆಯ ಮಾತನ್ನಾಡುತ್ತಿದೆ. ರಾಜ್ಯದಲ್ಲಿ ಲೋಕಶಕ್ತಿಯ ಸಂಸದರಾಗಿರುವ ರಮೇಶ್ ಜಿಗಜಿಣಗಿ, ಅಜಯ್ ಸರನಾಯಕರು ಕಾಂಗ್ರೆಸ್‌ಗೆ ಬೆಂಬಲ ಸೂಚಿಸುತ್ತಿದ್ದಾರೆನ್ನಲಾಗಿದೆ. ಇನ್ನು ಕೆಲವು ಸಂಸದರು ಅವರನ್ನು ಸೇರಿಕೊಳ್ಳಲಿದ್ದಾರೆಂಬ ಗುಲ್ಲಿದ್ದಿದೆ. ಈಗಾಗಲೇ ಹೆಗಡೆಯವರ ನೆಚ್ಚಿನಬಂಟರಾಗಿದ್ದ ಆರ್.ವಿ.ದೇಶಪಾಂಡೆ ಮತ್ತು ಅವರ ಗುಂಪು ಕಾಂಗ್ರೆಸ್ಸಿಗರೆಂದು ಅಧಿಕೃತ ಘೋಷಿಸಿಕೊಳ್ಳಬೇಕಷ್ಟೆ. ಜನತಾದಳದ ಕೆಲವರು ಕಾಂಗ್ರೆಸ್‌ಗೆ ಹಾರುವ ಸಿದ್ಧತೆಯಲ್ಲಿದ್ದಾರೆಂದು ಸುದ್ದಿ ಸ್ಫೋಟಿಸಿದೆ. ರಾಜ್ಯದಲ್ಲಿಯೂ ರಾಜಕೀಯ ಹೊಂದಾಣಿಕೆ - ಮರು ಹೊಂದಾಣಿಕೆಗಳ ಯತ್ನ ಸಾಗಿದೆ. ಈ ಮೊದಲು ಮುಂಬರುವ ವಿಧಾನಸಭಾ ಚುನಾವಣೆಯಲ್ಲಿ ತಾನು ಏಕಾಂಗಿ ಯಾಗಿ ಅಧಿಕಾರಕ್ಕೆ ಬರುತ್ತೇನೆಂದು ಸಾರುತ್ತಿದ್ದ ಬಿಜೆಪಿ ಕೇಂದ್ರದಲ್ಲಿ ಸರ್ಕಾರ ಪತನಗೊಂಡ ನಂತರ ಲೋಕಶಕ್ತಿಯೊಂದಿಗೆ ಮೈತ್ರಿಗೆ ಹಂಬಲಿಸಿ ಸಮ್ಮಿಶ್ರ ಸರ್ಕಾರ ರಚಿಸುವ ಮಾತನಾಡತೊಡಗಿದೆ.

ವಿಧಾನಸಭೆಯ ಚುನಾವಣೆಗಳು ಸಹ ಸಮೀಪಿಸುತ್ತಿರುವ ಸಂದರ್ಭದಲ್ಲಿ ಕರ್ನಾಟಕದ ರಾಜಕೀಯ ಧರ್ಮನಿರಪೇಕ್ಷಿತ ಶಕ್ತಿಗಳು ಮೇಲುಗೈ ಪಡೆಯಬೇಕು. ಕಾಂಗ್ರೆಸ್ ಬಿಜೆಪಿ ಎಂದು ಎರಡು ಧ್ರುವಗಳಲ್ಲೇ ರಾಜಕೀಯ ಶಕ್ತಿ ಹಂಚಿಹೋಗದೇ ಇಂದಿನ ಐತಿಹಾಸಿಕ ಅಗತ್ಯವಾಗಿರುವ ಮೂರನೇ ಪರ್ಯಾಯ ರೂಪುಗೊಳ್ಳಬೇಕು. ಬಲಗೊಳ್ಳಬೇಕು. ಇಂತಹ ಸಂದಿಗ್ಧ ಸನ್ನಿವೇಶದಲ್ಲಿ ಜನತಾದಳದಲ್ಲಿನ ಧರ್ಮನಿರಪೇಕ್ಷ ಶಕ್ತಿಗಳು ಸಹ ಪಟೇಲರ ದೊಂಬರಾಟಗಳಿಗೆ ಕಡಿವಾಣ ಹಾಕಿ ತಕ್ಕ ಪಾಠ ಕಲಿಸಬೇಕು.

ಐಕ್ಯರಂಗಕ್ಕೊಂದು ಹೊಸರೂಪ
ಕನ್ನಡ ಪತ್ರಿಕಾರಂಗದಲ್ಲಿ ಹೊಸ ಸವಾಲುಗಳು

ಕನ್ನಡದ ಪತ್ರಿಕಾರಂಗದಲ್ಲಿ ಅದರಲ್ಲಿಯೂ ವಾರಪತ್ರಿಕೆಗಳ ವಿಷಯದಲ್ಲಿ ಹಲವು ಆತಂಕಕಾರಿ ಬೆಳವಣಿಗೆಗಳು ಕಾಣುತ್ತಿವೆ. ಒಂದು ಕಡೆ ಅಶ್ಲೀಲ ಭಾಷೆ ಬಳಸಿ ಕೀಳು ಅಭಿರುಚಿ, ಕೊಲೆ, ದರೋಡೆಗಳನ್ನು ವಿಜೃಂಭಿಸುವ ಪತ್ರಿಕೆಗಳು ಮತ್ತೊಂದು ಕಡೆ ಮಹಿಳಾ ಓದುಗರ ಕಡೆ ಕಣ್ಣಿಟ್ಟು ಕುಟುಂಬ ಪತ್ರಿಕೆಗಳೆನ್ನಿಸಿಕೊಂಡ ವಾರಪತ್ರಿಕೆಗಳಲ್ಲಿ ಓದುಗರನ್ನು ಶತ ಶತಮಾನ ಹಿಂದಕ್ಕೆ ನೂಕುವ ಲೇಖನ, ಕಥೆ, ಕಾದಂಬರಿಗಳು. ಒಂದು ಪತ್ರಿಕೆ ಓದುಗರನ್ನು ಸ್ವಕಾಯ ಬಿಡಿಸಿ ಪರಕಾಯ ಪ್ರವೇಶ ಮಾಡಲು ಪ್ರಯತ್ನಿಸಿದರೆ ಮತ್ತೊಂದು ಪತ್ರಿಕೆ ಮಂತ್ರ ಶಕ್ತಿ ಕಡೆಗೆ ಓದುಗರನ್ನು ದೂಡುತ್ತದೆ.

ಒಂದು ಕಡೆ ನಿರುದ್ಯೋಗಿ ಯುವಜನರಲ್ಲಿ ಮಾನವೀಯತೆ, ನಾಗರೀಕತೆಗಳನ್ನು ನಾಶಮಾಡಿ ಸಮಾಜ ಕಂಟಕ ಪ್ರವೃತ್ತಿಯನ್ನು ಬೆಳೆಸುವ ಪ್ರಯತ್ನ, ಮತ್ತೊಂದು ಕಡೆ ಕೋಮುವಾದಿ, ದೇಶ ಧ್ವಂಸಕ ಚಿಂತನೆಯ ಅಡಿಪಾಯವಾಗಿ ಜ್ಞಾನ ವಿಜ್ಞಾನ ವಿರೋಧಿ ಅವಿಚಾರಗಳನ್ನು ತುಂಬುವ ಪ್ರಯತ್ನ.

ದಿನ ದಿನಕ್ಕೂ ಸಾವಿರಾರು ರೈತರನ್ನು ಆತ್ಮಹತ್ಯೆಯತ್ತ ದೂಡುವ, ಕಾರ್ಮಿಕರನ್ನು ನಿರುದ್ಯೋಗಿಗಳನ್ನಾಗಿ ಮಾಡುವ ಐ.ಎಂ.ಎಫ್-ವಿಶ್ವಬ್ಯಾಂಕ್-ವಿಶ್ವ ವಾಣಿಜ್ಯ ಸಂಸ್ಥೆಗಳ ನೀತಿಗಳ ಬಗ್ಗೆ ಮೋಹ.

ನಮ್ಮ ನೆರೆಯ ದೇಶಗಳಿಗೆ ಥೈಲ್ಯಾಂಡ್, ಇಂಡೋನೇಷಿಯ ಮಲೇಷಿಯಾಗಳಿಗೆ ಹಬ್ಬಿದ ಕಾಡುಕಿಚ್ಚು ನಮ್ಮ ಮನೆಯನ್ನು ಸುಟ್ಟೀತು ಎಂಬ ಅರಿವೇ ಇಲ್ಲದ ಕುರುಡುತನ ಎಲ್ಲ ಪತ್ರಿಕೆಗಳನ್ನು ವಿವಿಧ ಪ್ರಮಾಣದಲ್ಲಿ ಭಾಧಿಸುತ್ತಿದೆ.

ಐಕ್ಯರಂಗದ ಸತ್ವ

ಕರ್ನಾಟಕದ ಈ ಗೊಂದಲಕಾರಿ ಪರಿಸ್ಥಿತಿಯನ್ನು ವಿವರಿಸಲು ವಿಶ್ಲೇಷಿಸಲು ಬೇಕಾದ ಸ್ಪಷ್ಟ ಮತ್ತು ಆಳ ತಿಳುವಳಿಕೆಯನ್ನು, ಈ ಸವಾಲನ್ನು ಎದುರಿಸಲು ಬೇಕಾದ ಧೃಡತೆಯನ್ನು ಕೆಚ್ಚನ್ನು ಪಡೆದ ಪತ್ರಿಕೆ 'ಐಕ್ಯರಂಗ'.

ಎಲ್ಲಾ ಕನ್ನಡ ಪತ್ರಿಕೆಗಳು ಮನಮೋಹನಸಿಂಗರ ಬಜೆಟ್‌ಗಳ ಮನಮೋಹಕತೆಗೆ ಮಾರು ಹೋಗಿದ್ದಾಗ ಅದರ ಹೂರಣವನ್ನು ಬಿಚ್ಚಿಟ್ಟಿದ್ದು, ಗ್ಯಾಟ್-ಡಂಕೆಲ್‌ಗಳನ್ನು ಕನ್ನಡದಲ್ಲಿ ಪ್ರಪ್ರಥಮ ಬಾರಿಗೆ ಹಾಗೂ ವಿವರವಾಗಿ ಬಿಚ್ಚಿಟ್ಟಿದ್ದು 'ಐಕ್ಯರಂಗ' ಪತ್ರಿಕೆ. ದೊಡ್ಡ ದೊಡ್ಡ ಪತ್ರಿಕೆಗಳಲ್ಲಿ ಅವಿತು ಕೊಂಡಿರುವ ಕಾವಿ ಮನಸ್ಸುಗಳು ಬಾಬರಿಮಸೀದಿಯ ನಾಶದ ನಂತರದ ಪರಿಸ್ಥಿತಿಯನ್ನು ಅರೆ ಮನಸ್ಸಿನಿಂದ ವಿವರಿಸುತ್ತಿದ್ದಾಗ "ಅಯೋಧ್ಯಾ ಕಾಂಡ"ಕ್ಕೆ ವಾರ ವಾರವೂ ವಿಶೇಷ ಪುಟಗಳನ್ನು ಮೀಸಲಿಟ್ಟು ವಿಶೇಷ ಪುರವಣಿಯನ್ನು ಪ್ರಕಟಿಸಿದ ಕೀರ್ತಿ ಐಕ್ಯರಂಗಕ್ಕೆ ಮಾತ್ರ ಸಲ್ಲುತ್ತದೆ. ಆದ್ದರಿಂದ ಈ ಸವಾಲನ್ನು 'ಐಕ್ಯರಂಗ'ವಲ್ಲದೆ ಮತ್ಯಾರು ಎದುರಿಸಲು ಸಾಧ್ಯ?

ಕನ್ನಡ ಜನತೆಯ ಮಾನವೀಯತೆ, ವೈಚಾರಿಕ ಶಕ್ತಿ, ಜಾತ್ಯಾತೀತ ಮನೋಭಾವನೆಯ ಮೇಲೆ ಎರಗಿದ ಧಾಳಿಯ ಸವಾಲನ್ನು ಎದುರಿಸಲು 'ಐಕ್ಯರಂಗ' ಸಜ್ಜಾಗಬೇಕಾಗಿದೆ. ಈ ಪ್ರಯತ್ನದಲ್ಲಿ 'ಐಕ್ಯರಂಗ' ಮೇ 1 ರಿಂದ ಹೊಸರೂಪು ತೊಟ್ಟು ನಿಮ್ಮ ಬಳಿ ಸಾರುತ್ತಿದೆ. ಕರ್ನಾಟಕದ ದುಡಿಯುವ ಜನರ ಮನಗೆಲ್ಲುವ ಅಭಿಲಾಷೆಯೊಂದಿಗೆ ಹೊಸ ಮುಖಪುಟದೊಂದಿಗೆ 12 ಪುಟಗಳ ವಿಸ್ತಾರ ಪಡೆದು ನಿಮ್ಮ ಕೈಸೇರುತ್ತಿದೆ. ಕರ್ನಾಟಕದ ಎಲ್ಲೆಡೆಯ ಜನಜೀವನದ ದು:ಖ ದುಮ್ಮಾನಗಳು, ನೋವು ನಲಿವುಗಳನ್ನು ನಿಮ್ಮದೇ ಭಾಷೆಯಲ್ಲಿ ನಿಮಗೆ ಮುಟ್ಟಿಸುವ ಪ್ರಯತ್ನ ಅದು. ಜನತೆಯ ಹೋರಾಟಗಳು, ಪ್ರತಿಭಟನೆಗಳು, ಅದರ ಹಿಂದಿನ ಕಿಚ್ಚು ಕೆಚ್ಚುಗಳೊಂದಿಗೆ ನಿಮ್ಮನ್ನು ತಟ್ಟಿ ಎಚ್ಚರಿಸುವ ಬಯಕೆಯೊಂದಿಗೆ ನಿಮ್ಮನ್ನು ಸೇರುತ್ತಿದೆ. 'ಐಕ್ಯರಂಗ'ದ ಹೊಸ ಸ್ವರೂಪ-ವಿಷಯ ವಿಸ್ತಾರ ನಿಮ್ಮನ್ನು ಸೆಳೆಯಲಿ. 'ಐಕ್ಯರಂಗ' ಬಿತ್ತುವ ಅರಿವು ಕರ್ನಾಟಕದ ಎಲ್ಲೆಡೆಗೆ ಪಸರಿಸಲಿ.

ಜಿ.ಎನ್.ನಾಗರಾಜ್
ಸಂಪಾದಕರು

ಐಕ್ಯರಂಗ ಕಮ್ಮಟದಲ್ಲಿ ಕೇಳಿಬಂದದ್ದು....

"ಯಾವ ಅಂಗಡಿಯವರೂ ಇಲ್ಲ ಎನ್ನಲಿಲ್ಲ"

ತರಕಾರಿ ಅಂಗಡಿಯ ಮುಂದೆ ದಿನಸಿ ಅಂಗಡಿಗಳ ಮುಂದೆ, ಹಾಲು ಮೊಸರು ಅಂಗಡಿಗಳಲ್ಲಿ, ಹೋಗಿ ಜೋಳಿಗೆ ಹಿಡಿದದ್ದೇ ತಡ - 'ಇಲ್ಲ' ಎಂಬ ಮಾತೇ ಇಲ್ಲ. ನೋಡು ನೋಡುತ್ತಿದ್ದಂತೆಯೇ ತರಕಾರಿ ದಿನಸಿ ಎಲ್ಲವೂ ಸಂಗ್ರಹವಾಗಿ ಹೋಯಿತು.

ಶಿರಸಿಯಲ್ಲಿ ಹಮ್ಮಿಕೊಂಡಿದ್ದ ಐದನೆಯ ಭಾರತ ವಿದ್ಯಾರ್ಥಿ ಫೆಡರೇಷನ್ (ಎಸ್.ಎಫ್.ಐ.)ನ ರಾಜ್ಯ ಸಮ್ಮೇಳನ ಸಾಮಗ್ರಿಗಳನ್ನು ಕೂಡಿಸಿದ ರೀತಿಯನ್ನು ಕಾಂ|| ಸಿ.ಆರ್. ಶಾನ್‌ಭಾಗ್ ಬಣ್ಣಿಸಿದರು.

"ನೋಡ ನೋಡುತ್ತಿದ್ದಂತೆಯೆ ಹತ್ತು ಸಾವಿರ ರೂ ಸಾಮಗ್ರಿ ಸಂಗ್ರಹವಾಯ್ತು ಇಷ್ಟೆಲ್ಲಾ ಸಾಮಗ್ರಿ ಸಂಗ್ರಹವಾದದ್ದಕ್ಕೆ ಮುಖ್ಯ ಕಾರಣ 'ಐಕ್ಯರಂಗ' ಎಂದರು".

ಬೆಟ್ಟದ ಮೇಲಿನ ನೆಲ್ಲಿಕಾಯಿಗೂ ಸಮುದ್ರದೊಳಗಿನ ಉಪ್ಪಿಗೂ ಎಲ್ಲಿಂದೆಲ್ಲಿಯ ಸಂಬಂಧ? ಇದೇ 'ಐಕ್ಯರಂಗ'ದ ಶಕ್ತಿ.

ಕಾ.ಸಿ. ಆರ್. ಶಾನ್‌ಬಾಗ್ ಅದನ್ನು ವಿವರಿಸಿದ್ದು ಹೀಗೆ - ಶಿರಸಿಗೆ ನೂರೈವತ್ತು ಐಕ್ಯರಂಗ ಬರುತ್ತಿದೆ. ಈ ಪೈಕಿ 32 ಐಕ್ಯರಂಗವನ್ನು ಅಂಗಡಿಗಳ ಬಳಿ ಹೋಗಿ ಅವರಿಗೆ ಮಾರಾಟ ಮಾಡಲಾಗುತ್ತಿದೆ. ಪ್ರತೀಬಾರಿ 'ಐಕ್ಯರಂಗ' ಮಾರಾಟಕ್ಕೆ ಹೋದಾಗ ಎಸ್.ಎಫ್.ಐ. ಚಟುವಟಿಕೆಗಳ ಬಗ್ಗೆ ಕೇಳುತ್ತಿದ್ದರು. ಪ್ರತೀಬಾರಿ ಚರ್ಚೆ.

ಈ ಎಲ್ಲಾ ಸಂವಾದ ಕೊನೆಗೂ ಫಲ ಕೊಟ್ಟಿತು. ಐಕ್ಯರಂಗ ಓದಿ ಪಕ್ಷದ ಬಗ್ಗೆ ಸಾಮೂಹಿಕ ಸಂಘಟನೆಗಳ ಬಗ್ಗೆ ಅರಿತವರು ಎಸ್.ಎಫ್.ಐ. ಸಮ್ಮೇಳನಕ್ಕೆ ಸಹಾಯ ಕೋರಿ ಹೋದಾಗ ಇಲ್ಲ ಎನ್ನಲಿಲ್ಲ. ನೂರು, ನೂರೈವತ್ತು ಹೀಗೆ ತಮ್ಮ ಕೈಲಾದಷ್ಟು ಬೆಲೆಯ ಸಾಮಗ್ರಿಗಳನ್ನು ನೀಡಿದರು. 'ಐಕ್ಯರಂಗ' ಈ ಶಕ್ತಿ ನೀಡಿತು. ಎಷ್ಟೋ ಜನರನ್ನು ರಾಜಕೀಯ ಪ್ರಜ್ಞಾವಂತರನ್ನಾಗಿ ಮಾಡಿತು' ಎಂದರು.

ಶಿರಸಿಯ ಬಸ್ ಸ್ಟಾಂಡ್‌ನಲ್ಲಿ ಐಕ್ಯರಂಗ ಮಾರಲಾಗುತ್ತಿದೆ. ಇನ್ನೂ 5 ತಾಲ್ಲೂಕುಗಳಲ್ಲಿ ಇದೇ ರೀತಿಯ ವ್ಯವಸ್ಥೆ ಮಾಡಲಾಗುವುದು ಎಂಬ ಆಶ್ವಾಸನೆಯನ್ನು ನೀಡಿದರು.

'ಐಕ್ಯರಂಗ' ಬಳಗದ ಸಭೆ

ರಾಜ್ಯದ ದುಡಿಯುವ ಜನರ ದನಿಯಾಗಿ ಪ್ರಕಟವಾಗುತ್ತಿರುವ 'ಐಕ್ಯರಂಗ' ಈಗಿನ ಸನ್ನಿವೇಶದ ಸವಾಲುಗಳನ್ನು ಇನ್ನೂ ಸಮರ್ಥವಾಗಿ ಪರಿಣಾಮಕಾರಿಯಾಗಿ ಎದುರಿಸುವಂತೆ ಸಜ್ಜುಗೊಳ್ಳುವ ನಿಟ್ಟಿನಲ್ಲಿ ಐಕ್ಯರಂಗ ಬಳಗದ ರಾಜ್ಯಮಟ್ಟದ ಸಭೆ ಏಪ್ರಿಲ್ 18 ರಂದು ಬೆಂಗಳೂರಿನಲ್ಲಿ ನಡೆಯಿತು. ರಾಜ್ಯದ ಹಲವು ಜಿಲ್ಲೆಗಳಿಂದ ಬಂದ ಸುಮಾರು 50 ಸಂಗಾತಿಗಳು ಇದರಲ್ಲಿ ಭಾಗವಹಿಸಿದ್ದರು. ದಿನವಿಡೀ ವಿಚಾರ-ವಿಮರ್ಶೆ ನಡೆಸಿದರು. ಪತ್ರಿಕೆಯ ಸಂಪಾದಕರಾದ ಜಿ.ಎನ್.ನಾಗರಾಜ್, ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಹಾಗೂ ಪತ್ರಿಕೆಯ ಪ್ರಕಾಶಕರಾದ ಎಸ್.ಸೂರ್ಯನಾರಾಯಣ ರಾವ್, ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಎಸ್.ವೈ.ಗುರುಶಾಂತ್ ಹಾಗೂ ಅಧ್ಯಕ್ಷತೆ ವಹಿಸಿದ್ದ ಇನ್ನೋರ್ವ ರಾಜ್ಯಕಾರ್ಯದರ್ಶಿ ಮಂಡಳಿ ಸದಸ್ಯ ನಿತ್ಯಾನಂದ ಸ್ವಾಮಿ ಮಾರ್ಗದರ್ಶನ ನೀಡಿದರು.



ಜಾತ್ಯಾತೀತ ಸರ್ಕಾರಕ್ಕಾಗಿ ಸಾಗಿದೆ ಸಮರ

ಹೇಳಿ ನೀವು ಯಾರ ಕಡೆ?



ಅಬು ಅಬ್ರಾಹಂ ಅವರ ವ್ಯಂಗ್ಯ

ನಿರಂತರ ಸಮರಸಾಗಿದೆ ದೇಶದ ರಾಜಕೀಯ ರಂಗದಲ್ಲಿ. 1996ರ ಲೋಕಸಭಾ ಚುನಾವಣೆಯ ನಂತರದಲ್ಲಿ ಮತ್ತೆ ಮತ್ತೆ ಈ ಪ್ರಶ್ನೆ ಎದುರಾಗುತ್ತಿದೆ. ದೇಶದ ವಿವಿಧ ರಾಜಕೀಯ ಪಕ್ಷಗಳು, ವ್ಯಕ್ತಿಗಳನ್ನು ರಾಷ್ಟ್ರಹಿತವೆಂಬ ಅಗ್ನಿ ಪರೀಕ್ಷೆಗೆ ಒಡ್ಡುತ್ತಿದೆ. ಕೋಮುವಾದ ಮತ್ತು ಜಾತ್ಯಾತೀತತೆ (ಧರ್ಮನಿರಪೇಕ್ಷತೆ)ಯ ನಡುವೆ ಸಾಗಿದೆ ಸಮರ. ಮತ್ತೆ ಮತ್ತೆ ಪ್ರತಿಯೊಂದು ರಾಜಕೀಯ ಬಿಕ್ಕಟ್ಟಿನ ಪ್ರಸಂಗಗಳೂ ರಾಜಕೀಯ ವ್ಯಕ್ತಿ, ಶಕ್ತಿಗಳ ಮುಂದೆ ಸವಾಲನ್ನೊಡ್ಡುತ್ತಿವೆ. ಇತಿಹಾಸ ಕೇಳುತ್ತಿರುವ ಪ್ರಶ್ನೆಯದು - **ಹೇಳಿ ನೀವು ಯಾರ ಕಡೆ?** ಒಂದೊಂದು ಪರೀಕ್ಷೆಯಲ್ಲಿ ಕೆಲವು ಪಕ್ಷಗಳು ವ್ಯಕ್ತಿಗಳು ಕಳಚಿ ಬೀಳುತ್ತಿದ್ದಾರೆ. ಅಧಿಕಾರ, ಹಣ, ದ್ವೇಷ, ತಮ್ಮ ಪಕ್ಷ, ಪ್ರದೇಶಗಳ ಹಿತವೆಂದು ನೆಪವೊಡ್ಡಿ ದೇಶಹಿತವನ್ನು ಮಾರುತ್ತಿದ್ದಾರೆ.

1996 ರಲ್ಲಿ ಬಿಜೆಪಿಯೇ ಹೆಚ್ಚು ಸಂಸತ್ ಸದಸ್ಯರನ್ನು ಪಡೆದ ಪಕ್ಷವೆಂದು ಸರ್ಕಾರ ರಚಿಸಿದಾಗ 13 ದಿನಗಳ ಕಾಲ ತಿಪ್ಪರಲಾಗ ಹೊಡೆದರೂ ಹಣದ ಥೈಲಿಗಳೊಂದಿಗೆ ಸಂಸದರನ್ನು ಕೊಳ್ಳಲು ಓಡಾಡಿದರೂ ಒಬ್ಬನೇ ಎಂಪಿ, ಒಂದು ಪಕ್ಷವೂ ಮಾರಿಕೊಳ್ಳಲಿಲ್ಲ. ಆದರೆ ಗುಜ್ರಾಲರ ಸಂಯುಕ್ತರಂಗ ಸರ್ಕಾರ ಉರುಳಿತು, ಅನೇಕ ವ್ಯಕ್ತಿಗಳ ಬಣ್ಣ ಬಯಲಾಗತೊಡಗಿತು. 60 ರಷ್ಟು ಕಾಂಗ್ರೆ ಸಂಸದರು ಬಿಜೆಪಿಯನ್ನು ಸೇರಲು ಮುಂದಾದರು. ಬಿಜೆಪಿಯ ನಾಯಕ ಯಾವುದೇ ನಾಚಿಕೆಯಿಲ್ಲದೆ ಸಾರಿದರು - ಇನ್ನೂ ಕೇವಲ ಏಳು ಕಡಿಮೆ ಇದೆ! ಇವರೆಲ್ಲರೂ ಕಾಂಗ್ರೆ ಪಕ್ಷದವರೇ. ಸಿಪಿಐ(ಎಂ) ಪಕ್ಷ ಹೇಳಿತು - ಕಾಂಗ್ರೆ ಪಕ್ಷ ಹಲವು ವರ್ಷಗಳ ಕಾಲ ಕೋಮುವಾದದ ಬಗ್ಗೆ ರಾಜೀ ಮನೋಭಾವವನ್ನು ತಳೆದು ಅವಕಾಶವಾದಿಗಳಾದದ್ದರ ಫಲ ಇದು ಎಂದು ಸಾರಿತು. ನಿಜ ಕಾ. ೧ ಬಗ್ಗೆ ನಿಷ್ಠೆ, ಸ್ವಾತಂತ್ರ್ಯ ಹೋರಾಟ ಕಾಲದ ಮತ್ತು ನಮ್ಮ ಸಂವಿಧಾನದ ಮೂಲಭೂತ ಲಕ್ಷಣವಾದ ಈ ತತ್ವಕ್ಕಾಗಿ ಪ್ರಜಾಪ್ರಭುತ್ವದ ಅಳಿವು ಉಳಿವನ್ನು, ದೇಶದ ಐಕ್ಯತೆಯನ್ನು ದೇಶದೊಳಗೆ ಕೋಮುಸೌಹಾರ್ದತೆಯನ್ನು ನಿರ್ಧರಿಸುವ ಈ ತತ್ವಕ್ಕಾಗಿ ಹೋರಾಡುವ ನಿಷ್ಠೆ ಕಡಿಮೆಯಾಗಿತ್ತು.

ಇನ್ನು ಲೋಕಸಭಾ ಚುನಾವಣೆಗಳು ಘೋಷಿತವಾದುವು. ಹಲವಾರು ದಶಕಗಳ ಕಾಲ ದೇಶದೆಲ್ಲಾ ರಾಜಕೀಯ ಪಕ್ಷಗಳಿಗೆ ಮುಟ್ಟಬಾರದ ಪಕ್ಷವಾಗಿದ್ದ ಬಿಜೆಪಿ ತನ್ನನ್ನು ಮುಟ್ಟಿಸಿಕೊಳ್ಳುವವರ, ಅಪ್ಪಿಕೊಳ್ಳುವವರ ಸಲುವಾಗಿ ಹಂಬಲಿಸತೊಡಗಿತ್ತು.

ಎಐಎಡಿಎಂಕೆ, ತೃಣಮೂಲ ಕಾಂಗ್ರೆಸ್ ತಮ್ಮ ಅಧಿಕಾರ ಕಾಲದಲ್ಲಿ ದಿನವೂ ಕೋಮುವಾದದ ವಿರುದ್ಧ ಗುಟುರು ಹಾಕುತ್ತಿದ್ದವರು ಶರಣಾದರು. 1979 ರಲ್ಲಿ ಸಂಘ ಪರಿವಾರದ ದ್ವಿಸದಸ್ಯತ್ವ ನೀತಿಗೆ ವಿರುದ್ಧವಾಗಿ ಗರ್ಜಿಸಿದ ಅಪ್ರತಿಮ ಹೋರಾಟಗಾರ, ಬಂಡುಕೋರ ಜಾರ್ಜ್‌ಫರ್ನಾಂಡೀಸ್ ದೇಶಕ್ಕೆ, ಅವರು ಅಲ್ಲಿಯವರೆಗೆ ನಂಬಿದ್ದ ತತ್ವಗಳಿಗೆಲ್ಲಾ ತಿಲಾಂಜಲಿಕೊಟ್ಟು ಸಂಘ ಪರಿವಾರದ ಗುಲಾಮರಾದರು. ನಂತರ ನಮ್ಮ ರಾಜ್ಯದ ಮತ್ತೊಬ್ಬ 'ಮಹಾನಾಯಕ' ರಾಮಕೃಷ್ಣ ಹೆಗ್ಗಡೆಯವರ ಸರದಿ. ಜಾತ್ಯಾತೀತತೆಯ ಬಗ್ಗೆ ಆಡುತ್ತಿದ್ದ ಮಾತುಗಳೆಲ್ಲಾ ಜೊಳ್ಳಾಗಿ ಅಧಿಕಾರದ ಹಂಬಲವೊಂದೇ ಗಟ್ಟಿಯಾಯಿತು. ಬಿಜೆಪಿ ಇದ್ದಕ್ಕಿದ್ದಂತೆ ಸ್ಪೃಶ್ಯವಾಯಿತು. ಇಲ್ಲಿಯವರೆಗೆ ಸಂಯುಕ್ತ ರಂಗ ಸೇರಿದ್ದ ಪಕ್ಷಗಳು ಯಾವುದೇ ಆಮಿಷಕ್ಕೆ ಬಲಿಯಾಗಲಿಲ್ಲ. ದೇಶದ ಪತ್ರಿಕೆಗಳು, ಟಿ.ವಿ. ಛಾನೆಲ್‌ಗಳು ಒಂದರೊಡನೊಂದು ಸ್ಪರ್ಧಿಸಿದುವು. ತಾವೇ ತೆಗಳುತ್ತಿದ್ದ ಬಿಜೆಪಿ ಮತ್ತು ಅದರ ಕೋಮುವಾದವನ್ನು ವಾಚಾಮಗೋಚರ ಹೊಗಳಲಾರಂಭಿಸಿದುವು. ದೇಶದ ತುಂಬೆಲ್ಲಾ ಘೋಷಣೆ - 'ಸಮರ್ಥ ಪ್ರಧಾನಿ - ಸುಭದ್ರ ಸರ್ಕಾರ'

ಚುನಾವಣಾ ಫಲಿತಾಂಶ ಬಂತು. ದೇಶದ ಶೇ 67 ರಷ್ಟು ಮತದಾರರು ಬಿಜೆಪಿಯ, ಅದರ ಮಿತ್ರ ಪಕ್ಷಗಳ ವಿರುದ್ಧ ಮತ ಚಲಾಯಿಸಿದ್ದರು. ಈ ಮೈತ್ರಿ ಕೂಟಕ್ಕೆ ಬಹುಮತ ಇರಲಿಲ್ಲ.

ಮತ್ತೊಂದು ಅಗ್ನಿ ಪರೀಕ್ಷೆ. ಈ ಬಾರಿ ತೆಲುಗುದೇಶಂ ಮತ್ತು ನ್ಯಾಷನಲ್ ಕಾನ್ಫರೆನ್ಸ್‌ಗಳು ರಾಷ್ಟ್ರದ ಹಿತವನ್ನು ಬಲಿಕೊಟ್ಟು ಬಿಜೆಪಿ ಬೆಂಬಲದ ಪಾಳಯ ಸೇರಿದುವು.

ಇದೇ ವರ್ಷ ಕೋಮುವಾದಿಗಳನ್ನು ಅಧಿಕಾರದಲ್ಲಿ ಮುಂದುವರೆಯಲು ದೇಶದ ಆಡಳಿತ ಯಂತ್ರವನ್ನು ಕೋಮುವಾದೀಕರಣಗೊಳಿಸಲು ಬಿಡಬಾರದೆಂಬ ಸಂಘರ್ಷ, ಪರ್ಯಾಯ ಜಾತ್ಯಾತೀತ ಸರ್ಕಾರ ರಚನೆಗಾಗಿ ಸಂಘರ್ಷ. ಸಿಪಿಐ(ಎಂ) ಪಕ್ಷದ, ಎಡರಂಗದ ನೇತೃತ್ವ. ಮತ್ತೆ ಮತ್ತೆ ಸವಾಲು ಎದುರಾಯಿತು. ಕ್ರಿಶ್ಚಿಯನ್ನರ ಮೇಲೆ ಧಾಳಿ, ಕೊಲೆ - **ಹೇಳಿ ನೀವು ಯಾರ ಕಡೆ ?**

ಅಣು ಬಾಂಬ್ ಸ್ಫೋಟ ದೇಶದ ಶಾಂತಿ ನೀತಿ ಭಗ್ನ, ಶಸ್ತ್ರಾಸ್ತ್ರ ಸ್ಪರ್ಧೆ - **ಹೇಳಿ ನೀವು ಯಾರ ಕಡೆ?**

ಗಗನಕ್ಕೇರಿದ ಬೆಲೆಗಳು, ಹೆಚ್ಚಿದ ಬಡತನ, ಬೆಳವಣಿಗೆ ಕುಂಠಿತ, ಸ್ವದೇಶಿ ಹೋಗಿ ವಿದೇಶಿ, ಅಮೇರಿಕನ್ ಒತ್ತಡಕ್ಕೆ ಭಾರತದ ಸ್ವತಂತ್ರ ವಿದೇಶ ನೀತಿ ಅಲುಗಾಡುತ್ತಿದೆ - **ಹೇಳಿ ನೀವು ಯಾರ ಕಡೆ?**

ಈ ಸವಾಲುಗಳು ಒಂದು ವರ್ಷದ ಇತಿಹಾಸದ ಸವಾಲುಗಳು. ಸವಾಲುಗಳನ್ನು ಸ್ವೀಕರಿಸಿದ್ದು ಕೆಲವೇ ಪಕ್ಷಗಳು.

ಈ ನಡುವೆ ಸಮರ್ಥ ಪ್ರಧಾನಿ - ಸುಭದ್ರ ಸರ್ಕಾರದ ಕಟ್ಟಿದ ಬಣ್ಣ ದಿನದಿನವೂ ಬಯಲಾಗುತ್ತಿತ್ತು. ಮತ್ತೆ ರಾಜಕೀಯ ಬಿಕ್ಕಟ್ಟು ಕೋಮುವಾದಿಗಳನ್ನು ಉರುಳಿಸುವ ದೇಶದ ಹಿತ ಕಾಪಾಡುವ ಅವಕಾಶ - **ಹೇಳಿ ನೀವು ಯಾರ ಕಡೆ?** ನಿನ್ನೆ ಮೊನ್ನೆಯವರೆಗೆ ಕೋಮುವಾದದ ವಿರುದ್ಧ ಪ್ರಚಾರಾಂದೋಲನದಲ್ಲಿ ಭಾಗಿಯಾಗಿದ್ದ ಡಿಎಂಕೆ ಈಗಿನ ಬಲಿಪಶು. ಕೋಮುವಾದಕ್ಕಿಂತ ಒಬ್ಬ ವ್ಯಕ್ತಿಯ ಭ್ರಷ್ಟಾಚಾರವೇ ದೊಡ್ಡದು, ತಮ್ಮ ರಾಜ್ಯದಲ್ಲಿ ತಮ್ಮ ಅಧಿಕಾರದ ಅವಕಾಶವೇ ದೊಡ್ಡದು! ಮತ್ತೊಂದು ಬಲಿ - ಮತ್ತೊಬ್ಬ ಸಮಾಜವಾದಿ ನಾಯಕ ಜೆ.ಹೆಚ್.ಪಟೇಲರು.

ಮತ್ತೆ ಪರ್ಯಾಯ ಜಾತ್ಯಾತೀತ ಸರ್ಕಾರ ರಚನೆಯ ಸಂದರ್ಭದಲ್ಲಿ ಮತ್ತೆ ಎದುರಾಗಿದೆ ಇತಿಹಾಸದ ಸವಾಲು - **ಹೇಳಿ ನೀವು ಯಾರ ಕಡೆ?**

ಭಾಗವತ್‌ರವರ ಸವಾಲಿಗೆ ಉತ್ತರ ಹೇಳಲಾಗದ ಸರ್ಕಾರ, ಮೋಹನ್‌ಗುರುಸ್ವಾಮಿ ಬಯಲು ಮಾಡಿದ ಆರೋಪಗಳಿಗೆ ತಲೆ ತಗ್ಗಿಸಿದ ಸರ್ಕಾರ, ದೇಶದ ಭದ್ರತೆಯನ್ನು ರಾಜಕೀಯದ ಬಲಿಪಶು ಮಾಡಿದ ಸರ್ಕಾರ ಲೋಕಸಭೆಯಲ್ಲಿ ಸೋತು ಮತ್ತೆ ಯಾವುದೇ ನಾಚಿಕೆ, ರಾಜಕೀಯ ನಡೆವಳಿಕೆಯ ಜ್ಞಾನವಿಲ್ಲದೆ ಮತ್ತೆ ಅಧಿಕಾರ ಪೀಠಕ್ಕೇರಲು ಹಾತೊರೆಯುತ್ತಿದೆ. ಈ ದುರಾಸೆಗೆ ಇಂಬುಗೊಡುತ್ತಿದೆ ರಾಜಕೀಯ ಅನಿಶ್ಚಯತೆ. ಅದಕ್ಕೆ ಜಾತ್ಯಾತೀತ ಪಕ್ಷಗಳು ಅಧಿಕಾರಕ್ಕಾಗಿ ಕೊಸರಾಡುತ್ತಾ ಮೂರನೆಯ ರಂಗದ ಸರ್ಕಾರದ ಬಗ್ಗೆ ಜ್ಯೋತಿ ಬಸುರವರಿಗೆ ಒಲ್ಲದ ಪ್ರಧಾನಿ ಪೀಠದ ಮಾತಾಡುತ್ತಿದೆ. ತಮ್ಮ ತಮ್ಮ ಅಧಿಕಾರದ ಆಕಾಂಕ್ಷೆಗಳೇ ಕೈಮೇಲಾಗಿ ರಾಷ್ಟ್ರವನ್ನು ಮತ್ತೆ ಕೋಮುವಾದದ ಹುಲಿಯ ಬಾಯಿಗೆ ದೂಡುತ್ತಿವೆ. ಕಾತುರದಿಂದ ಕಾಯುತ್ತಿದ್ದಾರೆ ದೇಶದ ಅಸಂಖ್ಯಾತ ಅಲ್ಪಸಂಖ್ಯಾತ ಬಂಧು, ಭಗಿನಿಯರು - ಅದರಲ್ಲಿಯೂ ಕ್ರಿಶ್ಚಿಯನ್ನರು. ಕಾಯುತ್ತಿದ್ದಾರೆ ಬೆಲೆ ಏರಿಕೆಯಿಂದ ತತ್ತರಿಸುತ್ತಿರುವ ಕೂಲಿಕಾರರು ಅಸಂಘಟಿತ ಕಾರ್ಮಿಕರು, ಕಾಯುತ್ತಿದ್ದಾರೆ ಕೈಗಾರಿಕೆ, ಕೃಷಿಗಳ ನಾಶದ ಭಯದಿಂದ ಬೆಂಡಾಗಿರುವ ಕಾರ್ಮಿಕರು, ರೈತರು ಬಿಜೆಪಿಯ ಬಗ್ಗೆ ಅಪಾರ ಆಸೆಯಿಟ್ಟು ನಿರಾಶರಾದ ಯುವಕರು, ವಿದ್ಯಾರ್ಥಿಗಳು ಮಹಿಳೆಯರು.

ಗಲ್ಲಿ ಗಲ್ಲಿಯಲ್ಲಿ ಚರ್ಚೆ ನಡೆದಿದೆ. ಈ ಚರ್ಚೆಯಲ್ಲಿ - **ಹೇಳಿ ನೀವು ಯಾರ ಕಡೆ?** ಬರುತ್ತಿರುವ ಪತ್ರಿಕೆ, ಟಿ.ವಿ. ಪ್ರಚಾರಕ್ಕೆ ಮರುಳಾಗಿ ಕೋಮುವಾದದ, ಸಂಘ ಪರಿವಾರದ, ಬಿಜೆಪಿಯ ಅಪಾಯ ಅಸಾಮರ್ಥ್ಯವನ್ನು ಮರೆಯುವವರೋ? ದೇಶದ, ದೇಶದ ಜನಸಾಮಾನ್ಯರ ಹಿತಕ್ಕೆ ನಿಮ್ಮ ಜೀವನದ ಹಿತಕ್ಕೆ ಗಮನ ನೀಡುವವರೋ?

ಈ ರಾಜಕೀಯ ಅನಿಶ್ಚಯತೆ ಕೊನೆಗೊಳ್ಳಬೇಕು. ಲೋಕಸಭೆಯಲ್ಲಿ ಎರಡನೇ ಪಕ್ಷವಾದ ಕಾಂಗ್ರೆಸ್ ಸರ್ಕಾರ ರಚಿಸಿ ಜನಪರ ಧೋರಣೆಯ, ಅಲ್ಪಸಂಖ್ಯಾತರಿಗೆ ಭಯ ನಿವಾರಣೆಯ, ಕೋಮುವಾದದ ವಿರುದ್ಧ ಸೆಣಸುವ ಕಾರ್ಯಕ್ರಮ ಹಾಕಿಕೊಳ್ಳಬೇಕು. ಸರ್ಕಾರ ಜನತೆಯ ಬದುಕನ್ನು ಅಸ್ಥಿರಗೊಳಿಸದೆ ಜನಬೆಂಬಲ ಪಡೆಯುವುದೇ ಸ್ಥಿರ, ಸುಭದ್ರ ಸರ್ಕಾರ ನೀಡುವ ಮಾರ್ಗ ಎಂದು ಅರಿತುಕೊಳ್ಳಬೇಕು. ಬಿಜೆಪಿಯಿಂದ ಪಾಠ ಕಲಿಯಬೇಕು.

- ಜಿ.ಎನ್.ನಾಗರಾಜ್



ಆರ್ಥಿಕ ಸ್ವಾವಲಂಬನೆ, ಸಾರ್ವಭೌಮತೆ, ಸಮಗ್ರತೆಯ ರಕ್ಷಣೆಗೆ ಕಟಿಬದ್ಧರಾಗೋಣ

ಇದು ಈ ಸಹಸ್ರಾಬ್ದದ ಕೊನೆಯ ಮೇ ದಿನದ ಪಣವಾಗಲಿ

ಸಿಐಟಿಯು ಕರೆ

'ದೇಶದ ಕಾರ್ಮಿಕ ವರ್ಗ ಎಲ್ಲಾ ಜನಸಮೂಹಗಳ- ಕೃಷಿಕಾರ್ಮಿಕರು, ರೈತರು, ಮಹಿಳೆಯರು, ಯುವಜನ, ವಿದ್ಯಾರ್ಥಿಗಳು ಹಾಗೂ ಎಲ್ಲಾ ದೇಶಪ್ರೇಮಿ ಶಕ್ತಿಗಳು - ಐಕ್ಯತೆಯನ್ನು ಕಟ್ಟಿ, ಕ್ರೋಢೀಕರಿಸಿ ವಿನಾಶಕಾರಿ ಆರ್ಥಿಕ ನೀತಿಗಳು ಮತ್ತು ವಿಚ್ಛಿದ್ರಕಾರಿ ಕೋಮುವಾದವನ್ನು ಸೋಲಿಸಲು ಬಲಿಷ್ಠ ಹೋರಾಟಗಳನ್ನು ಹರಿಯ ಬಿಡಬೇಕು. ನಮ್ಮ ಈ ಮಹಾನ್ ದೇಶದ ಮತ್ತು ಸಮಾಜದ ಆರ್ಥಿಕ ಸ್ವಾವಲಂಬನೆ, ಸಾರ್ವಭೌಮತೆ ಮತ್ತು ಸಮಗ್ರತೆಯ ರಕ್ಷಣೆಗೆ ಮತ್ತೊಮ್ಮೆ ಪಣ ತೊಡೋಣ. ಹೆಚ್ಚೆಚ್ಚು ಜನ ವಿಭಾಗಗಳನ್ನು ಅಣಿನೆರೆಸಿ ಹೋರಾಟವನ್ನು ಉನ್ನತ ಮಟ್ಟಕ್ಕೆ ಒಯ್ಯೋಣ' ಇದು ಈ ವರ್ಷದ ಮೇ ದಿನದ ತನ್ನ ಪ್ರಣಾಳಿಕೆಯಲ್ಲಿ ದೇಶದ ಪ್ರಮುಖ ಕಾರ್ಮಿಕ ಸಂಘಟನೆ ಸಿಐಟಿಯು ನೀಡಿರುವ ಕರೆ.

ಈ ಬಾರಿಯ ಮೇ ದಿನ ಈ ಶತಮಾನದ ಅಷ್ಟೇ ಅಲ್ಲ, ಈ ಸಹಸ್ರಾಬ್ದದ ಕೊನೆಯ ಮೇ ದಿನ. ಇದನ್ನು ನೆನಪಿಸಿಕೊಂಡಿರುವ ಸಿಐಟಿಯು ಮೇ ದಿನದ ಪ್ರಣಾಳಿಕೆ ವಿಶ್ವಾದ್ಯಂತ ಸಾಮ್ರಾಜ್ಯಶಾಹಿಯ ಜಾಗತಿಕ ಧಾಳಿಗಳ ವಿರುದ್ಧ ಹೋರಾಡುತ್ತಿರುವ ಕಾರ್ಮಿಕ ವರ್ಗದ ಬಾಂಧವರಿಗೆ ಕ್ರಾಂತಿಕಾರಿ ಶುಭಾಶಯಗಳನ್ನು ಕೋರಿದೆ. ಈಗ ಯುಗೋಸ್ಲಾವಿಯದ ಮೇಲೆ ನಾಟೋ ಧಾಳಿ, ಇದರ ಮೊದಲು ಇರಾಕ್ ಮೇಲೆ ಧಾಳಿ ಹಾಗೂ ಕ್ಯೂಬಾಕ್ಕೆ ದಿಗ್ಬಂಧನ - ಹೀಗೆ ವಿಶ್ವ ಸಂಸ್ಥೆಯನ್ನೇ ಮೂಲೆಗೊತ್ತುವ ಸಾಮ್ರಾಜ್ಯಶಾಹಿ ಉಲ್ಲಂಘನೆಗಳ ವಿರುದ್ಧ ವಿಶ್ವದ ಎಲ್ಲಾ ಸಾಮ್ರಾಜ್ಯಶಾಹಿ-ವಿರೋಧಿ ಶಕ್ತಿಗಳು ತಕ್ಕ ಉತ್ತರ ನೀಡಬೇಕು ಎಂದು ಸಿಐಟಿಯು ಪ್ರಣಾಳಿಕೆ ಆಶಯ ವ್ಯಕ್ತಪಡಿಸಿದೆ.

ಈ ಬಾರಿಯ ಮೇ ದಿನದಂದು ದೇಶದ ರಾಜಕೀಯ ಹೊಸದೊಂದು ತಿರುವು ಪಡೆದಿದೆ. ಒಂದು ಕೋಮುವಾದಿ ಪಕ್ಷದ ನೇತೃತ್ವದಲ್ಲಿ ಕೇಂದ್ರದ ಸಮ್ಮಿಶ್ರ ಸರಕಾರ ತಲೆ ತಗ್ಗಿಸಿಕೊಂಡು ಕೆಳಗಿಳಿದಿದೆ. ಆದರೂ ದೇಶದ ಐಕ್ಯತೆಗೆ, ಸಮಗ್ರತೆ ಹಾಗೂ ಬಹುಮುಖೀ ಸ್ವರೂಪಕ್ಕೆ ಬಂದಿರುವ ಅಪಾಯ ಮಾಯವಾಗಿಲ್ಲ. ಈ ಸರಕಾರದ ಹದಿಮೂರು ತಿಂಗಳ ಆಳ್ವಿಕೆ ಸರ್ವತೋಮುಖ ವಿಫಲತೆಯ ಅವಧಿ. ನಮ್ಮ ಸಮಾಜದ ಪ್ರತಿಯೊಂದು ವಿಭಾಗವೂ ಅತೃಪ್ತಿಯಿಂದ ಕುದಿಯುತ್ತಿತ್ತು. ಈಗ ಕೋಮುವಾದಿ ಮತ್ತು ಮೂಲಭೂತವಾದಿ ಶಕ್ತಿಗಳನ್ನು ದೂರವಿಡಲು ಸಾಧ್ಯವಾಗಬಹುದು ಎಂದು ಧರ್ಮನಿರಪೇಕ್ಷ ವಿಚಾರದ ನಾಗರೀಕರು ನಿರೀಕ್ಷಿಸಿದರೂ ಬಿಜೆಪಿ ಆಳ್ವಿಕೆಯ ನಂತರದ ಮುಂದಿನ ದಿನಗಳಲ್ಲಿ ಆರ್ಥಿಕ ರಂಗದಲ್ಲಂತೂ ಸಂತೋಷ ಪಡುವಂತಾದ್ದು ಏನೂ ಇಲ್ಲ ಎಂದು ಸಿಐಟಿಯು ಪ್ರಣಾಳಿಕೆ ಅಭಿಪ್ರಾಯ ಪಟ್ಟಿದೆ.

13 ತಿಂಗಳ ಬಿಜೆಪಿ ಆಳ್ವಿಕೆಯಲ್ಲಿ ಪ್ರಮುಖ ಪ್ರತಿಪಕ್ಷವಾದ ಕಾಂಗ್ರೆಸ್‌ನ ಶಾಮೀಲಿನೊಂದಿಗೆ ಸರಕಾರ ಪೇಟೆಂಟ್ ತಿದ್ದುಪಡಿ ಮಸೂದೆಯನ್ನು ಪಾಸು ಮಾಡಿಕೊಂಡಿದೆ, ವಿಮಾ ಮಸೂದೆಯ ಅಂಗೀಕಾರಕ್ಕೆ ರಂಗ ಸಿದ್ಧಗೊಳಿಸಿದೆ, ಇವೆಲ್ಲಾ ಬಹುರಾಷ್ಟ್ರೀಯ ಕಂಪನಿಗಳ ಲೂಟಿಗೆ ಹಾದಿ ತೆರೆದುಕೊಟ್ಟ ಕ್ರಮಗಳು ಎಂಬುದನ್ನು ಕಾರ್ಮಿಕ ವರ್ಗ ಮರೆಯಬಾರದು. ಅತ್ತ ಇದುವರೆಗೆ ಅಧಿಕಾರಕ್ಕೆ ಸಂಚಕಾರ ಬರದಿರಲಿ ಎಂದು ಸ್ವಲ್ಪವಾದರೂ ಹಿಡಿತವಿದ್ದ ಕೋಮುವಾದಿ ಶಕ್ತಿಗಳು ಕೋಮುವಾದಿ ಗಲಭೆಗಳನ್ನು ಸೃಷ್ಟಿಸಲು ಪ್ರಯತ್ನಿಸುತ್ತವೆ ಎಂದೂ ಸಿಐಟಿಯು ಮೇ ದಿನದ ಪ್ರಣಾಳಿಕೆ ಎಚ್ಚರಿಸಿದೆ.

ಕಳೆದ ಒಂದು ವರ್ಷದ ಅವಧಿಯಲ್ಲಿ ಹುಚ್ಚಾಪಟ್ಟೆ ಖಾಸಗೀಕರಣದಿಂದ ಇನ್ನೂ ಲಕ್ಷಾಂತರ ಕಾರ್ಮಿಕರು ಕೆಲಸ ಕಳಕೊಂಡರು. 'ರಾಷ್ಟ್ರೀಯ ನವೀಕರಣ ನಿಧಿ'ಯನ್ನು ಬಳಸಿದ್ದು ಕಾರ್ಮಿಕರನ್ನು ರಿಟ್ರೆಂಚ್ ಮಾಡಲಿಕ್ಕೆ ಮಾತ್ರ. ಈ ಮೂಲಕ ನಮ್ಮ ಆರ್ಥಿಕದ ಒಂದು ಮೂಲಭೂತ ಶಕ್ತಿಮೂಲವನ್ನು ಕಳಚಿಹಾಕಲಾಯಿತು. ವಿದೇಶಗಳಿಂದ ಬಂಡವಾಳ ಆಕರ್ಷಿಸಲು ಏನೆಲ್ಲಾ ಮಾಡಿದರೂ ಕೈಗಾರಿಕಾ ಬೆಳವಣಿಗೆ ನಿಧಾನಗೊಳ್ಳುತ್ತಿರುವುದನ್ನು ತಡೆಯಲಾಗಿಲ್ಲ. ಅಂದರೆ ಹೊಸ ಉದ್ಯೋಗವಕಾಶಗಳೂ ಇಲ್ಲ, ಇದ್ದ ಉದ್ಯೋಗವಕಾಶಗಳಿಗೆ ರಕ್ಷಣೆಯೂ ಇಲ್ಲ. ಕಾರ್ಮಿಕ ಶಾಸನಗಳು ಸಂಪೂರ್ಣ ಕುಸಿದು ಬೀಳುವ ಸ್ಥಿತಿಯಿದೆ. ದುಡಿಯುವ ಜನಗಳ ಹೆಚ್ಚೆಚ್ಚು ವಿಭಾಗಗಳನ್ನು ಕಾರ್ಮಿಕ ಶಾಸನಗಳ ವ್ಯಾಪ್ತಿಯಿಂದ ಹೊರಗಿಡುವ ಪ್ರಯತ್ನ ನಡೆದಿದೆ. ಜಾಗತೀಕರಣದ ಯುಗಕ್ಕೆ ಕಾರ್ಮಿಕ ಶಾಸನಗಳನ್ನು ಸರಿಹೊಂದಿಸಬೇಕೆಂಬ ಹೆಸರಿನಲ್ಲಿ ಶ್ರಮ ಶಕ್ತಿ ಅಥವಾ ದುಡಿಮೆಗಾರರನ್ನು ಸಾಮಾಜಿಕ ಪಾಲುದಾರರು ಎಂದು ಕಾಣುವ ಬದಲು ಕೇವಲ ಇನ್ನೊಂದು ಸರಕೆಂಬಂತೆ ಕಾಣಲಾಗುತ್ತಿದೆ.

ಈ ಬಗ್ಗೆ ದುಡಿಯುವ ಜನಗಳು ಹಾಗೂ ಕಾರ್ಮಿಕ ಆಂದೋಲನ ಸತತ ಎಚ್ಚರದಿಂದಿರಬೇಕು, ಐಎಂಎಫ್-ವಿಶ್ವಬ್ಯಾಂಕ್ ಹೇರಿದ ಆರ್ಥಿಕ ನೀತಿಗಳು ಮತ್ತು ಕೋಮುವಾದದ ಈ ಅವಳಿ ಅಪಾಯಗಳ ವಿರುದ್ಧ ನಿರಂತರ ಹೋರಾಟವನ್ನು ಮುಂದೊಯ್ಯಬೇಕು ಎಂದು ಸಿಐಟಿಯುನ ಮೇ ದಿನದ ಪ್ರಣಾಳಿಕೆ ಕರೆ ನೀಡಿದೆ.



ಬೆಂಗಳೂರು ಆಟೋಚಾಲಕರ ಯಶಸ್ವೀ ಮುಷ್ಕರ

ಇನ್ನಷ್ಟು ಆಟೋಗಳು ಚಾಲಕರ ಬದುಕಿಗೆ ಮಾರಕ

80 ಸಾವಿರಕ್ಕೂ ಅಧಿಕ ಸಂಖ್ಯೆಯಲ್ಲಿರುವ ಬೆಂಗಳೂರಿನ ಆಟೋ ಚಾಲಕರು ಸಿ.ಐ.ಟಿ.ಯು ಸಂಘಟನೆಯ ನೇತೃತ್ವದಲ್ಲಿ ಈಗ ಹೋರಾಟದ ಕಣದಲ್ಲಿದ್ದಾರೆ. ಸರ್ಕಾರ ಮತ್ತೆ 15 ಸಾವಿರ ಆಟೋಗಳಿಗೆ ಪರವಾನಗಿ ಕೊಡುತ್ತಿರುವುದು ಚಾಲಕರನ್ನು ಸಿಟ್ಟಿಗೆಬ್ಬಿಸಿದೆ.

ಕೇಂದ್ರ ಸರ್ಕಾರದ ಆರ್ಥಿಕ ನೀತಿ ಮತ್ತು ಉದಾರೀಕರಣ ನೀತಿಗಳು ದೇಶದ ಸಾಮಾನ್ಯ ಜನರನ್ನು ಬಾಧಿಸತೊಡಗಿದೆ. ಕರ್ನಾಟಕದಲ್ಲಿ ಆಡಳಿತ ನಡೆಸುತ್ತಿರುವ ಜನತಾದಳ ಸರ್ಕಾರವೂ ಕೇಂದ್ರ ಸರ್ಕಾರಕ್ಕೆ ಪೈಪೋಟಿಯೆಂಬಂತೆ ಉದಾರೀಕರಣ ನೀತಿಯನ್ನು ವೇಗವಾಗಿ ಜಾರಿಗೊಳಿಸ ತೊಡಗಿದೆ. ಕಂಪನಿ ಮಾಲೀಕರ, ಬಂಡವಾಳಷಾಹಿಗಳ ಪರವಾದ ಧೋರಣೆಗಳನ್ನು ಯಾವುದೇ ಎಗ್ಗಿಲ್ಲದೆ ಅನುಸರಿಸತೊಡಗಿದೆ. ಇದರಿಂದಾಗಿ ಜನಸಾಮಾನ್ಯರ ಮತ್ತು ಕಾರ್ಮಿಕರ ಬವಣೆಗಳನ್ನು ಕೇಳುವವರೇ ಇಲ್ಲದಂತಾಗಿದೆ. ಈ ಸರ್ಕಾರಗಳ ನೀತಿಗಳ ಕೆಟ್ಟ ಪರಿಣಾಮ ಬಡ ಆಟೋ ಚಾಲಕರನ್ನೂ ಬಿಟ್ಟಿಲ್ಲ, ಅಗತ್ಯ ವಸ್ತುಗಳ ಬೆಲೆ ಏರಿಕೆ, ಮುಚ್ಚುತ್ತಿರುವ ಕಾರ್ಖಾನೆಗಳು, ಏರುತ್ತಿರುವ ನಿರುದ್ಯೋಗಿಗಳ ಸಂಖ್ಯೆ, ಈ ಎಲ್ಲಾ ಕಾರಣಗಳಿಂದಾಗಿ ಜನರ ಕೊಳ್ಳುವ ಶಕ್ತಿ ಕಡಿಮೆಯಾಗತೊಡಗಿದೆ. ಇದರಿಂದಾಗಿ ಆಟೋಗಳಲ್ಲಿ ಸಂಚರಿಸುವ ಪ್ರಯಾಣಿಕರ ಸಂಖ್ಯೆ ಕಡಿಮೆಯಾಗತೊಡಗಿದೆ. ಸಮಯಕ್ಕೆ ಸರಿಯಾಗಿ ಬಾರದ ಬಸ್‌ಗಳು, ಉಸಿರು ಕಟ್ಟಿಸುವಂತೆ ಅತ್ಯಧಿಕವಾಗಿ ಪ್ರಯಾಣಿಕರನ್ನು ತುಂಬಿ ಚಲಿಸುವ ಮತ್ತು ಸದಾ ಅಪಘಾತಗಳ ಸುದ್ದಿ ಮಾಡುತ್ತಿರುವ ಮ್ಯಾಕ್ಸಿಕ್ಯಾಬ್‌ಗಳಲ್ಲೇ ಅನಿವಾರ್ಯವಾಗಿ ಪ್ರಯಾಣಿಸುವಂತೆ ಸರ್ಕಾರ ಜನತೆಯನ್ನು ದೂಡಿದೆ.

ಸರ್ಕಾರದ ಖಾಸಗೀಕರಣ ನೀತಿಯ ಫಲವಾಗಿ ಸರ್ಕಾರವೇ ಸಾರಿಗೆ ಸೌಲಭ್ಯ ಒದಗಿಸುವ ಬದಲಾಗಿ ಖಾಸಗೀಯವರಿಗೆ ಆ ಜವಾಬ್ದಾರಿಯನ್ನು ವಹಿಸತೊಡಗಿದೆ, ಇದರಿಂದಾಗಿ ಮ್ಯಾಕ್ಸಿಕ್ಯಾಬ್‌ಗಳ ಹಾವಳಿ ದಿನೇ ದಿನೇ ಹೆಚ್ಚಾಗುತ್ತಿದೆ. ಗುತ್ತಿಗೆ ಆಧಾರದಲ್ಲಿ ಮಾತ್ರ ಸೇವೆ ಸಲ್ಲಿಸಲು ಪರವಾನಗಿ ಪಡೆದಿರುವ ಈ ವಾಹನಗಳು ಈಗ ನಗರದ ಎಲ್ಲಾ ಪ್ರದೇಶಗಳಲ್ಲೂ ಚಲಿಸಿ ಪ್ರಯಾಣಿಕರನ್ನು ಕರೆದೊಯ್ಯ ತೊಡಗಿವೆ. ಇದೂ ಸಾಲದೆಂಬಂತೆ ಖಾಸಗೀ ಸೇವೆಗಾಗಿ ಪರವಾನಗಿ ಪಡೆದು ಕಾರ್ಮಿಕರನ್ನು ಕರೆದೊಯ್ಯಬೇಕಾದ ಕಾರ್ಖಾನೆ ಬಸ್ಸುಗಳೂ ಸಾರ್ವಜನಿಕರನ್ನು ಕರೆದೊಯ್ಯ ತೊಡಗಿವೆ. ಇದರಿಂದಲೂ ಸಹಾ ಆಟೋ ಚಾಲಕರ ಆದಾಯಕ್ಕೆ ಧಕ್ಕೆ ಒದಗಿದೆ. ಆಟೋ ಚಾಲಕರ ಬಡತನವೂ ದಿನೇ ದಿನೇ ಹೆಚ್ಚಾಗುತ್ತಿದೆ.

ನಗರದಲ್ಲಿ ಆಟೋಗಳ ಸಂಖ್ಯೆ ಸರ್ಕಾರಿ ವರದಿಗಳ ಪ್ರಕಾರ 55 ಸಾವಿರ. ಆದರೆ, ಅನಧಿಕೃತವಾಗಿ ಚಲಿಸುವ ಆಟೋಗಳೂ ಸೇರಿದರೆ 65 ಸಾವಿರ ಮೀರುತ್ತದೆ. ಇದು ನಗರದ ಜನತೆಯ ಅವಶ್ಯಕತೆಗಿಂತ ಅಧಿಕವಾಗಿದೆ. ಆದಾಗ್ಯೂ ಸರ್ಕಾರ ತನ್ನ ಬಂಡವಾಳಷಾಹಿ ನೀತಿಯಿಂದಾಗಿ ಬಜಾಜ್ ಕಂಪೆನಿ ಮಾಲೀಕನಿಗೆ ಲಾಭ ಮಾಡಿ ಕೊಡಲು ಮುಂದಾಗಿ ಮತ್ತೆ 15 ಸಾವಿರ ಆಟೋಗಳಿಗೆ ಪರ್ಮಿಟ್ ಕೊಡಲು ಆಜ್ಞೆ ಹೊರಡಿಸಿದೆ. ಸರ್ಕಾರದ ಈ ನಿರ್ಧಾರ ಚಾಲಕರನ್ನು ಸಿಟ್ಟಿಗೆಬ್ಬಿಸಿದೆ. ಚಾಲಕರ ಜೀವನದ ಬಗ್ಗೆ ಅವರ ಬವಣೆಗಳ ಬಗ್ಗೆ ಕಿಂಚಿತ್ತೂ ಗಮನ ಹರಿಸದೇ ಮತ್ತೆ ಸಾವಿರಾರು ಚಾಲಕರ ಪಡೆಯನ್ನು ಈ ವೃತ್ತಿಗೆ ಸೇರಿಸಲು ಮುಂದಾಗಿದೆ.

ಎಲ್ಲಾ ಸರ್ಕಾರಿ ನೌಕರರಿಗೂ ಮತ್ತು ಸಂಘಟಿತ ಕಾರ್ಮಿಕರಿಗೆ ಬೆಲೆ ಏರಿಕೆಗೆ ಅನುಗುಣವಾಗಿ ತುಟ್ಟಿ ಭತ್ಯೆಯ ಸೌಲಭ್ಯ ಇದೆ. ಆಟೋ ಚಾಲಕರಿಗೆ ಈ ಸೌಲಭ್ಯವಿಲ್ಲ. ಪೆಟ್ರೋಲ್ ಬೆಲೆ ಏರಿಕೆಯಾದಾಗ ಮಾತ್ರ ಚಾಲಕರು ಹೋರಾಟ ನಡೆಸಿದರೆ, ಮೀಟರ್ ಏರಿಕೆ ಮಾಡುವುದು ವಾಡಿಕೆಯಾಗಿದೆ. ಹೀಗಾಗಿ ಅಗತ್ಯವಸ್ತುಗಳ ಬೆಲೆ ಎಷ್ಟೆ ಹೆಚ್ಚಾದರೂ ಚಾಲಕರ ವೇತನ(ಆದಾಯ) ಹೆಚ್ಚಾಗುವುದಿಲ್ಲ.

ಚಾಲಕರು ತಮ್ಮ ಸಮಸ್ಯೆಗಳ ವಿರುದ್ಧ ಹೋರಾಟ ನಡೆಸಲು ಮುಂದಾಗಿದ್ದಾರೆ ಮೊದಲ ಹಂತದಲ್ಲಿ ಸಹಿ ಸಂಗ್ರಹ ಚಳುವಳಿ ನಡೆಸಿ 15 ಸಾವಿರಕ್ಕೂ ಅಧಿಕ ಚಾಲಕರ ಸಹಿ ಸಂಗ್ರಹಿಸಲಾಗಿದೆ. ಕೆ.ಆರ್.ವೃತ್ತದಲ್ಲಿ ಏಪ್ರಿಲ್ 12 ರಿಂದ 20ರ ವರೆಗೆ ಸರದಿ ಉಪವಾಸ ಸತ್ಯಾಗ್ರಹದ ನಂತರ ಏಪ್ರಿಲ್ 20 ರಂದು ಒಂದು ದಿನದ ಆಟೋ ಮುಷ್ಕರ ಅತ್ಯಂತ ಯಶಸ್ವಿಯಾಗಿ ನಡೆದಿದೆ.

ಸರ್ಕಾರ ಮತ್ತು ಪೋಲಿಸರು ಈ ಮುಷ್ಕರವನ್ನು ಹತ್ತಿಕ್ಕಲು ಸತತ ಪ್ರಯತ್ನ ಮಾಡಿದರು. ಪೋಲಿಸ್ ಇಲಾಖೆ ಪ್ರಜಾಪ್ರಭುತ್ವ ವಿರೋಧಿ ಕ್ರಮಗಳನ್ನು ತೆಗೆದುಕೊಂಡಿತು. ಮೆರವಣಿಗೆಗೆ ಅನುಮತಿ ನೀಡಲು ನಿರಾಕರಿಸಿದರು. ಮುಷ್ಕರದ ಬಗ್ಗೆ ಧ್ವನಿವರ್ಧಕದ ಮೂಲಕ ಆಟೋಗಳಲ್ಲಿ ಪ್ರಚಾರ ಮಾಡಲು ಅನುಮತಿ ಕೊಡುವುದಿಲ್ಲವೆಂದು ಬರವಣಿಗೆ ಮೂಲಕ ಬರೆದು ತಿಳಿಸಿದರು. ಮುಷ್ಕರಕ್ಕೆ ಇನ್ನು ಮೂರು ದಿನಗಳು ಬಾಕಿ ಇರುವಾಗ ಮನಸ್ಸು ಬದಲಾಯಿಸಿದ ಪೋಲಿಸರು ನಾಲ್ಕು ಆಟೋಗಳಲ್ಲಿ ಪ್ರಚಾರ ಮಾಡಲು ಅನುಮತಿ ನೀಡಿದರು. ನಂತರ ಪೋಲಿಸ್ ಕಮೀಷನರ್, ಆಟೋರಿಕ್ಷಾ ಚಾಲಕರು ನಡೆಸಲು ಉದ್ದೇಶಿಸಿರುವ ಸಭೆ, ಮೆರವಣಿಗೆ, ಮುಷ್ಕರ, ಪ್ರಚಾರಗಳನ್ನು ನಿಷೇದಿಸಲಾಗಿದೆಯೆಂದು ಪತ್ರಿಕಾ ಹೇಳಿಕೆ ನೀಡಿದರು.

ಮತ್ತಷ್ಟು ಪರ್ಮಿಟ್ ಬೇಕೆಂದು ಕೇಳುತ್ತಿರುವ ಸಂಘಟನೆಗಳ ಮೂಲಕ ಸಿಐಟಿಯು ಸಂಘಟನೆಯ ವಿರುದ್ಧ ವ್ಯಾಪಕ ಅಪಪ್ರಚಾರ ಮಾಡತೊಡಗಿದರು. ಸಿಐಟಿಯು ಗೆ ಸೇರಿದ ಸಂಘವು ಮಾರುತಿ ಡೀಲರ್‌ಗಳ ಜೊತೆ ಶಾಮೀಲಾಗಿ ಸಿಟಿ ಟ್ಯಾಕ್ಸಿಗೆ ಅನುಕೂಲ ಮಾಡಿಕೊಡುವ ಉದ್ದೇಶದಿಂದ ಹೊಸ ಆಟೋಗಳು ಬರುವುದನ್ನು ತಡೆಯುತ್ತಿದ್ದಾರೆ ಎಂಬ ಆರೋಪ ಹೊತ್ತ 4 ಪುಟಗಳ ಪತ್ರಿಕೆಗಳನ್ನು ಚಾಲಕರ ಮಧ್ಯದಲ್ಲಿ ಉಚಿತವಾಗಿ ಹಂಚಲಾಗಿತ್ತು. ಕನ್ನಡ, ಇಂಗ್ಲೀಷ್, ಉರ್ದು, ಮತ್ತು ತಮಿಳು ಭಾಷೆಗಳಲ್ಲಿ ಸುಮಾರು 20 ಸಾವಿರ ಪ್ರತಿಗಳನ್ನು ಮುದ್ರಿಸಲಾಗಿತ್ತು. ಈ ಪತ್ರಿಕೆಯಲ್ಲಿ 40 ಸಂಘಗಳು ಸೇರಿರುವ ಮತ್ತು 25 ಸಂಘಗಳು ಸೇರಿರುವ ಎರಡು ಜಂಟಿ ಕ್ರಿಯಾ ಸಮಿತಿಗಳು ಸೇರಿದಂತೆ ಒಟ್ಟು 28 ಸಂಘಗಳ ಹೆಸರುಗಳಿತ್ತು. ಮುಷ್ಕರಕ್ಕೆ ಕರೆ ನೀಡದೇ ಇರುವ ಸಂಘಗಳು ಮುಷ್ಕರವನ್ನು ಹಿಂತೆಗೆದು ಕೊಂಡಿರುವುದಾಗಿ ಪತ್ರಿಕಾ ಹೇಳಿಕೆ ನೀಡಿದವು. ಸಿಐಟಿಯು ಸಂಘ ಮುಷ್ಕರವನ್ನು ಹಿಂತೆಗೆದು ಕೊಂಡಿದೆ ಎಂದು ಆಟೋಗಳ ಮೇಲೆ ಬರೆದರು. ಸಂಘದ ಹೆಸರು ಚಿನ್ಹೆ, ವಿಳಾಸ, ಅಧ್ಯಕ್ಷರು ಮತ್ತು ಪ್ರಧಾನ ಕಾರ್ಯದರ್ಶಿಗಳ ಹೆಸರುಗಳನ್ನು ಮುದ್ರಿಸಿ ಮುಷ್ಕರವನ್ನು ಹಿಂತೆಗೆದುಕೊಳ್ಳಲಾಗಿದೆ ಎಂಬ ಕರಪತ್ರಗಳನ್ನು ಹಂಚಿದರು. ಆದರೆ ಸಂಘದ ಕಾರ್ಯಕರ್ತರ ವ್ಯಾಪಕ ಪ್ರಚಾರ ಮತ್ತು ಚಟುವಟಿಕೆಗಳಿಂದಾಗಿ ಇವರ ಯಾವ ತಂತ್ರವೂ ಫಲಿಸಲಿಲ್ಲ. ಮುಷ್ಕರದ ದಿನ 100 ಆಟೋಗಳಲ್ಲಿ ಉಚಿತವಾಗಿ ಸೇವೆ ಸಲ್ಲಿಸುವುದಾಗಿ ವಿರೋದಿ ಸಂಘಟನೆಯೊಂದು ಪ್ರಚಾರ ಗಿಟ್ಟಿಸಿಕೊಂಡಿತು. ಇದ್ಯಾವುದರಿಂದಲೂ ಮುಷ್ಕರವನ್ನು ತಡೆಯಲು ಸಾಧ್ಯವಾಗಲಿಲ್ಲ. ಚಿಕ್ಕಲಾಲ್ ಬಾಗ್‌ನಲ್ಲಿ ಸೇರಿದ ಚಾಲಕರ ಸಭೆ ಸರ್ಕಾರಕ್ಕೆ 15 ದಿನಗಳ ಗಡುವು ನೀಡಿತು. ಈ ಅವಧಿಯೊಳಗೆ ತಮ್ಮ ಬೇಡಿಕೆಗಳನ್ನು ಈಡೇರಿಸದಿದ್ದರೆ ಮುಂದೆ ಅನಿರ್ದಿಷ್ಟ ಕಾಲದ ಮುಷ್ಕರ ನಡೆಸಲಾಗುವುದೆಂದು ಸಭೆ ಎಚ್ಚರಿಸಿತು.

ಸಿಐಟಿಯು ರಾಜ್ಯಾಧ್ಯಕ್ಷರಾದ ಕಾಂ. ಎಸ್. ಸೂರ್ಯನಾರಾಯಣರಾವ್ ಸಿಪಿಐ(ಎಂ) ಪಕ್ಷ ಜಿಲ್ಲಾ ಕಾರ್ಯದರ್ಶಿ ಕಾಂ|| ಪಿ. ಜಗನ್ನಾಥ್, ಪಕ್ಷದ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಕಾಂ|| ಕೆ. ಪ್ರಕಾಶ್, ಸಂಘದ ಅಧ್ಯಕ್ಷರಾದ ಮೀನಾಕ್ಷಿ ಸುಂದರಂ, ಪ್ರಧಾನ ಕಾರ್ಯದರ್ಶಿ ಕಾಂ|| ಹೆಚ್.ಜಿ. ಶ್ರೀನಿವಾಸಮೂರ್ತಿ ಮುಂತಾದವರು ಸಭೆಯನ್ನುದ್ದೇಶಿಸಿ ಮಾತನಾಡಿದರು.

– ಸಿದ್ದಯ್ಯ

ಕೃಷ್ಣಾ ಮೇಲ್ದಂಡೆ, ನಾರಾಯಣಪುರ ಬಲದಂಡೆ ಕಾಲುವೆ

ಅನಿರ್ದಿಷ್ಟ ಹೋರಾಟಕ್ಕೆಸಿಪಿಐ(ಎಂ) ದೇವದುರ್ಗ ಸಮಿತಿ ಕರೆ

ರಾಜ್ಯದಲ್ಲಿ ಕೇಂದ್ರ ಹಾಗೂ ರಾಜ್ಯ ಸರಕಾರಗಳು, ಹಿಂದಿನ ಕಾಂಗ್ರೆಸ್ ಸರ್ಕಾರದ ಆರ್ಥಿಕ ನೀತಿಗಳನ್ನು ಜಾರಿಗೆ ತರುತ್ತಿದ್ದುದರ ಪರಿಣಾಮವಾಗಿ ದುಡಿಯುವ ರೈತ-ಕಾರ್ಮಿಕರು ತೀವ್ರ ಸಂಕಷ್ಟಕ್ಕೊಳಗಾಗಿದ್ದಾರೆ.

ಜನರ ಈ ಅತೃಪ್ತಿಯನ್ನು ಕೋಮುವಾದಿ ಬಿಜೆಪಿ ಬಳಸಿಕೊಳ್ಳಲು ಬಾಬಾ ಬುಡನ್ ಗಿರಿಯಂತಹ ಧಾರ್ಮಿಕ ಪ್ರಶ್ನೆಗಳನ್ನು ಒಂದೆಡೆ ಎತ್ತಿಕೊಳ್ಳುವ ಮುಖಾಂತರ ರಾಜ್ಯದಲ್ಲಿ ಕೋಮುಗಲಭೆಗಳನ್ನು ಹುಟ್ಟು ಹಾಕಿ ರಾಜಕೀಯ ಲಾಭ ಪಡೆಯಲು ಪ್ರಯತ್ನಿಸುತ್ತಿದೆ. ಆರ್ಥಿಕ ಧೋರಣೆಗೆ ಕಾರಣೀಭೂತವಾದ ಕಾಂಗ್ರೆಸ್ ಅದನ್ನು ಮರೆಮಾಚಲು ಪ್ರಯತ್ನಿಸುತ್ತಿದೆ.

ದುಡಿಯುವ ಜನರ ನೈಜ ಸಮಸ್ಯೆಗಳ ಪರಿಹಾರ ಪಡೆಯಲು ಹೋರಾಟಕ್ಕೆ ಮುಂದಾಗುವ ಮುಖಾಂತರವೇ, ಕೋಮುವಾದಿಗಳ ಹುನ್ನಾರವನ್ನು ಸದೆ ಬಡಿಯಲು ಹಾಗೂ ಕಾಂಗ್ರೆಸ್ ಜಾರಿಗೆ ತಂದ ಹೊಸ ಆರ್ಥಿಕ ನೀತಿಗಳ ದುಷ್ಪರಿಣಾಮಗಳನ್ನು ಅರಿತು, ಹೆಚ್ಚಿನ ಒಗ್ಗಟ್ಟಿನ ಮುಖಾಂತರ ಆ ಧೋರಣೆಯನ್ನು ತಡೆಯಲು ಸಾಧ್ಯವೆಂದು ಸಿಪಿಐ(ಎಂ) ಕರ್ನಾಟಕ ರಾಜ್ಯ ಸಮಿತಿ ತೀರ್ಮಾನಿಸಿ, ರಾಜ್ಯದ ದುಡಿಯುವ ಜನರ ನಿರ್ದಿಷ್ಟ ಸಮಸ್ಯೆಗಳಿಗಾಗಿ ಸಂಘಟಿಸಿ ಹೋರಾಟಕ್ಕೆ ಮುಂದಾಗಲು ಕರೆ ಕೊಟ್ಟಿದೆ.

ಈ ಹಿನ್ನೆಲೆಯಲ್ಲಿ ದೀರ್ಘ ಅಧ್ಯಯನ ಹಾಗೂ ಚರ್ಚೆಯ ನಂತರ ಸಿಪಿಐ(ಎಂ) ದೇವದುರ್ಗ ತಾಲ್ಲೂಕು ಸಮಿತಿ, ನಾರಾಯಣಪುರ ಬಲದಂಡೆ ಕಾಲುವೆಯ ಸಮಸ್ಯೆಗಳಿಗೆ ಪರಿಹಾರ ಕೇಳಿ ಹಾಗೂ ಹತ್ತಾರು ಸಾವಿರ ಕೃಷಿಕೂಲಿಕಾರರ, ಬಡರೈತರು ಕೆಲಸವಿಲ್ಲದೆ ನಗರ ಪ್ರದೇಶಗಳಿಗೆ ವಲಸೆಹೋಗುವುದನ್ನು ತಡೆಗಟ್ಟಲು ಮೇ ಒಂದರಿಂದ ಹಲವಾರು ಹಂತದ ಚಳುವಳಿ ನಡೆಸಲು ಯೋಜನೆಯನ್ನು ರೂಪಿಸಿದೆ.

ಕೃಷ್ಣಾ ಮೇಲ್ದಂಡೆ ಯೋಜನೆಯಲ್ಲಿ ಎಡದಂಡೆ ಕಾಲುವೆ ಮುಖಾಂತರ ಗುಲ್ಬರ್ಗಾ ಹಾಗೂ ಬಿಜಾಪುರ ಜಿಲ್ಲೆಗೆ ಹಾಗೂ ಬಲ ದಂಡೆ ಕಾಲುವೆ ಮುಖಾಂತರ ರಾಯಚೂರು ಜಿಲ್ಲೆಗೆ ನೀರೊದಗಿಸುವುದಾಗಿತ್ತು.

ಅಂದಿನ ಮುಖ್ಯಮಂತ್ರಿ ವೀರೇಂದ್ರ ಪಾಟೀಲರ ರಾಜಕೀಯ ಕುತಂತ್ರದಿಂದಾಗಿ ಬಲ ದಂಡೆ ಕಾಲುವೆಯನ್ನು ಕೈಬಿಡಲಾಯಿತು. ರಾಯಚೂರು ಜಿಲ್ಲೆಯ ಬರಗಾಲ ತಾಲುಕುಗಳಾದ ಲಿಂಗಸಗೂರು, ದೇವದುರ್ಗ, ರಾಯಚೂರು ನೀರಾವರಿಯಿಂದ ವಂಚಿತಗೊಂಡವು.

ಕಾ. ಚಂದ್ರಶೇಖರ್ ಬಾಳಿಯವರ ಅಧ್ಯಯನದ ನಂತರ ಬಲದಂಡೆ ಜಾರಿಗಾಗಿ ಹೋರಾಟ ನಡೆಸಲು ಸಿಪಿಐ(ಎಂ) ರಾಯಚೂರು ಜಿಲ್ಲಾ ಸಮಿತಿ 1982 ರಲ್ಲಿ ತೀರ್ಮಾನ ಕೈಗೊಂಡು ಅಲ್ಲಿಂದ ನಿರಂತರ ಹೋರಾಟ ನಡೆಸುತ್ತಾ ಈ ಕುರಿತು ಕಾಂ. ಬಾಳಿಯವರು ಬರೆದ 500 ಪುಸ್ತಕಗಳನ್ನು ಮಾರಾಟ ಮಾಡಿ ರೈತರಲ್ಲಿ ಸಾರ್ವಜನಿಕರಲ್ಲಿ ಜಾಗೃತಿಯನ್ನು ಮೂಡಿಸಲಾಯಿತು.

ಇದರ ಮುಂದುವರಿಕೆಯಾಗಿ 1993 ರಲ್ಲಿ ಎಲ್ಲಾ ವಿಭಾಗದ ಜನರನ್ನು ಒಳಗೊಳಿಸಿ ವಿಶಾಲವಾದ ಸ್ವಾಭಿಮಾನದ ಸಮಾವೇಶವನ್ನು ನಡೆಸಿ ನಾರಾಯಣಪುರ ಬಲದಂಡೆ ಕಾಲುವೆ ಹೋರಾಟ ಸಮಿತಿಯನ್ನು ಕಾಂ.ಬಾಳಿಯವರ ನೇತೃತ್ವದಲ್ಲಿ ರಚಿಸಲಾಯಿತು.

ತೀವ್ರಗತಿಯ ನಿರಂತರ ಹೋರಾಟದ ಪ್ರತಿಫಲವಾಗಿ ಬಲದಂಡೆ ಕಾಲುವೆಯನ್ನು ಅಂದಿನ ಮುಖ್ಯಮಂತ್ರಿ ದೇವೇಗೌಡರು ಕೈಗೆತ್ತಿಕೊಳ್ಳುವಂತಾಯಿತು.

95 ಕಿ.ಮಿ. ನ ಮುಖ್ಯ ಕಾಲುವೆಯಲ್ಲಿ ಈಗಾಗಲೇ 78 ಕಿ.ಮಿ. ಮುಗಿದಿದ್ದು ಉಳಿದ ಕಾಲುವೆ ಕೆಲಸ ಕೈಗೆತ್ತಿಕೊಳ್ಳಲಾಗಿದೆ. ಉಪ ಕಾಲುವೆ ಒಂದರಿಂದ ಏಳು ಮುಗಿದಿದ್ದು, ಎಂಟರಿಂದ ಹನ್ನೆರಡು ಉಪ ಕಾಲುವೆ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗಿದೆ. ಈ ಐತಿಹಾಸಿಕ ಕಾಲುವೆ ಜನತೆಯ ಹೋರಾಟದ ಪ್ರತಿ ಫಲವಾಗಿದ್ದು, ಸಿಪಿಐ(ಎಂ) ನ ಮುಂದಾಳತ್ವದಲ್ಲಿ ಈ ಹೋರಾಟ ನಡೆದಿದೆಯೆಂಬುದು ಚರಿತ್ರಾರ್ಹವಾಗಿದೆ.

ಪ್ರಸ್ತುತ ಸಮಸ್ಯೆಗಳು

ಮುಖ್ಯ ಕಾಲುವೆ ಹಾಗೂ ಉಪ ಕಾಲುವೆಗಳ ಕಾಮಗಾರಿಗಳಲ್ಲಿ ತೀವ್ರಗತಿಯ ಅವ್ಯವಹಾರ, ಮೋಸ, ವಂಚನೆಗಳು ಒಂದೆಡೆ ನಡೆದಿವೆ. ಇನ್ನೊಂದೆಡೆ ಬಲದಂಡೆಗಾಗಿ ನಡೆದ ಹೋರಾಟದಲ್ಲಿ ಪಾಲುಗೊಳ್ಳದವರು, ಅದನ್ನು ವಿರೋಧಿಸಿರುವ ಕಾಂಗ್ರೆಸ್ ಪಕ್ಷ ಹಾಗೂ ತಾಲೂಕಿನ ಭೂಮಾಲಿಕರು, ಗುತ್ತೇದಾರರು ಇಂದು ಕಾಲುವೆ ಕಾಮಗಾರಿಗಳನ್ನು ಹಿಡಿದು ಲೂಟಿ ಮಾಡಲು ಮುಂದಾಗಿದ್ದಾರೆ. ಮೂರನೆಯದಾಗಿ ಕಛೇರಿಗಳ ಕಾರ್ಯಾಚರಣೆಗಳಿಲ್ಲ ಹಾಗೂ 2000 ಇಸ್ವಿಯೊಳಗೆ ಬಿಡಿಗಾಲುವೆಗಳನ್ನು ಮುಗಿಸಿ ಭೂಮಿಗೆ ನೀರೊದಗಿಸುವ ಯಾವ ಭರವಸೆಗಳೂ ಇಲ್ಲವಾಗಿವೆ.

ಕಾರಣ ಮೇಲಿನ ಬೇಡಿಕೆಗಳನ್ನು ಮುಂದಿಟ್ಟು ಕಾಮಗಾರಿಯನ್ನು ತೀವ್ರಗತಿಯಲ್ಲಿ ಕೈಗೆತ್ತಿಕೊಳ್ಳಲು ಒತ್ತಾಯಿಸುವುದರ ಜೊತೆಗೆ ಗುತ್ತಿಗೆ ಹಿಡಿದಿರುವ ಗುತ್ತಿಗೆದಾರರು, ರಿಂಗ್ ಹಣ ಹಾಗೂ ಪರ್ಸೆಂಟೇಜ್ ಹಣ ತಿನ್ನುವ ರಾಜಕಾರಣಿಗಳೇ ಇಂದಿನ ಪ್ರಮುಖ ತಾಲೂಕಾದ ವರ್ಗ ಶತ್ರುಗಳಾಗಿದ್ದಾರೆ. ನಿನ್ನೆಯ ಭೂ ಮಾಲಿಕರೇ ಇಂದಿನ ಗುತ್ತೇದಾರರು ಹಾಗೂ ಚುನಾಯಿತ ಪ್ರತಿನಿಧಿಗಳಾಗಿ ರೈತರ ವಿರುದ್ಧ ಹೋರಾಟಕ್ಕಿಳಿದಿದ್ದಾರೆ.

ಕಾಂಗ್ರೆಸ್ ಹಾಗೂ ಜನತಾದಳ ಎರಡೂ ಸಮನಾಗಿ ಈ ಕೃತ್ಯದಲ್ಲಿ ತೊಡಗಿರುವುದನ್ನು ಬಯಲಿಗೆಳೆಯಲು ಸಿಪಿಐ(ಎಂ) ಅನಿರ್ದಿಷ್ಟ ಚಳುವಳಿಗೆ ರೈತರನ್ನು ಬೀದಿಗಿಳಿಸಲು ಕರೆಕೊಟ್ಟಿದೆ.

ಅದರ ಅಂಗವಾಗಿ ಮೇ ಎರಡರಿಂದ ನೀರಾವರಿಯಾಗಲಿರುವ ಪ್ರದೇಶಗಳಲ್ಲಿ ಪ್ರಚಾರಾಂದೋಲನ ನಡೆಸಲು ಪಕ್ಷದ ತಾಲೂಕು ಸಮಿತಿ ಸದಸ್ಯರಿಗೊಂದರಂತೆ ಪಂಚಾಯತಿ ಪ್ರದೇಶಗಳ ಜವಾಬ್ದಾರಿಯನ್ನು ನೀಡಲಾಗಿದ್ದು, ಕಾಲು ಜಾಥಾ, ಬೈಸಿಕಲ್ಲು ಜಾಥಾ ಹಾಗೂ ಬಹಿರಂಗ ಸಭೆಗಳ ಮುಖಾಂತರ ಮೇ 15 ರಿಂದ ಜಾಲಹಳ್ಳಿ ಅಸಿಸ್ಟೆಂಟ್ ಎಕ್ಸಿಕ್ಯುಟಿವ್ ಇಂಜಿನಿಯರ್ ಕಛೇರಿಯ ಮುಂದೆ ಅನಿರ್ದಿಷ್ಟ ಧರಣಿ ಸತ್ಯಾಗ್ರಹ ಮುಖಾಂತರ ಚಳುವಳಿಗೆ ರೈತರನ್ನು ರೈತ ಸಂಘದ ಮುಖಾಂತರ ಇಳಿಸಲು ಕರೆ ಕೊಡಲಾಗಿದೆ.

ಮೇ ದಿನಾಚರಣೆ ಮತ್ತು ಜಾತಿಭೇದ ಹಾಗೂ ಅಸ್ಪೃಶ್ಯತೆಯ ಸಮಸ್ಯೆ

ಮೇ ದಿನ. 116 ವರ್ಷಗಳ ಹಿಂದೆ ಕಾರ್ಮಿಕ ವರ್ಗ ತನ್ನ ತಾನರಿವಲ್ಲಿ ದೊಡ್ಡ ದಾಪುಗಾಲು ಹಾಕಿದ ದಿನ. ಅದರ ನೆನಪಿನಲ್ಲಿ ವಿಶ್ವಾದ್ಯಂತ ಕಾರ್ಮಿಕರು ಕಾಯುವ, ಕಾದು ನಿಲ್ಲುವ ದಿನ. 2ನೇಯ ಸಹಸ್ರಮಾನ (2ನೇ ಸಾವಿರ) ದ ಕೊನೆಯ ಮೇ ದಿನ. ಇಡೀ ವರ್ಷದ ಕಾರ್ಮಿಕರ ಜೀವನ ಸ್ಥಿತಿ, ಹೋರಾಟಗಳ ಸಮೀಕ್ಷೆ ಮಾಡುವ ದಿನ. ನಡೆದು ಬಂದ ದಾರಿಯ ಕಡೆ ಕಣ್ಣು ಹೊರಳಿಸಿ ನೋಡಿ. ವರ್ಗ ಬಲಾಬಲಗಳನ್ನಳೆದು ಮುಂದಿನ ವರ್ಷದ ವರ್ಗ ಸಂಘರ್ಷಕ್ಕೆ ಅಣಿಯಾಗುವ ದಿನ.


ಇಂತಹ ದಿನಾಚರಣೆಯ ಸಂದರ್ಭದಲ್ಲಿ ಭಾರತದ ಕಾರ್ಮಿಕ ವರ್ಗ ತನ್ನ ಮುಂದಿರುವ ಸವಾಲುಗಳಿಗೆ ಮುಖಾಮುಖಿಯಾಗಿ ಅವುಗಳನ್ನು ಎದುರಿಸುವ ದಾರಿಗಳನ್ನು ಅನ್ವೇಷಣೆ ಮಾಡುತ್ತದೆ.

ಜಾಗತೀಕರಣ, ಉದಾರೀಕರಣ, ಖಾಸಗೀಕರಣಗಳೆಂಬ ಮೂರು ಮಹಾ ಪೀಡೆಗಳ ಜೊತೆಗೆ ಕೋಮುವಾದ ಇಡೀ ಕಾರ್ಮಿಕ ವರ್ಗದ ಹಾಗೂ ದೇಶದ ದಿಕ್ಕು ತಪ್ಪಿಸಲು ಸರ್ವಪ್ರಯತ್ನ ನಡೆಸಿದೆ. ಇವುಗಳ ಜೊತೆಗೆ ಜಾತಿವಾದ ಅಸ್ಪೃಶ್ಯತೆಗಳು ಕಾರ್ಮಿಕ ವರ್ಗವನ್ನು ಕಾಡುತ್ತಿವೆ. ದೇಶದೆಲ್ಲಾ ಕಾರ್ಮಿಕರೂ ಒಟ್ಟಾಗಿ ಆರ್ಥಿಕ ಪ್ರಶ್ನೆಗಳ ಮೇಲೆ ಕೋಮುವಾದದ ವಿರುದ್ಧ ನಿರ್ಣಾಯಕ ಹೋರಾಟ ಸಾಗಿಸುವುದಕ್ಕೆ ಒಂದು ದೊಡ್ಡ ಅಡ್ಡಿಯಾಗಿದೆ. ಇತ್ತೀಚಿನ ದಿನಗಳಲ್ಲಿ ಹೆಚ್ಚುತ್ತಿರುವ ಜಾತೀವಾದದ ಪ್ರಭಾವ ಜಾತಿ ಮತಗಳನ್ನು ಮೀರಿ ನಿಲ್ಲಬೇಕಾದ ಕಾರ್ಮಿಕ ವರ್ಗದ ಮೇಲೂ ಆಗುತ್ತಿದೆ. ಜಾತಿ ಸಂಘಗಳು ಕಾರ್ಖಾನೆ, ಬ್ಯಾಂಕ್, ಕಛೇರಿಗಳೊಳಗೂ ನುಗ್ಗಿ ಕಾರ್ಮಿಕ ನೌಕರರನ್ನು ವಿಭಜಿಸುತ್ತಿದೆ. ಕಾರ್ಮಿಕ ಸಂಘಗಳಿಗೆ ನಡೆಯುವ ಚುನಾವಣೆಯಲ್ಲಿ ಜಾತಿ ಪ್ರಭಾವ ಗಣನೀಯವಾಗಿದೆ. ಇವ ಜಾತಿ ಪ್ರಶ್ನೆಯನ್ನು ಬೆಳೆಸುತ್ತಾ ವರ್ಗ ಪ್ರಜ್ಞೆ ಮೂಡುವುದಕ್ಕೆ, ವರ್ಗ ಸಂಘರ್ಷಕ್ಕಿಳಿಯುವುದಕ್ಕೆ ದೊಡ್ಡ ಅಡ್ಡಿಯಾಗಿದೆ. ಕಾರ್ಮಿಕ ವರ್ಗ ಒಂದೇ ಗುರಿಯಿಂದ ಹೊಸ ಆರ್ಥಿಕ ನೀತಿ ಕೋಮುವಾದದ ವಿರುದ್ಧದ ಮಹಾ ಹೋರಾಟವನ್ನು ಹಿಂದೆಳೆಯುತ್ತಿದೆ.

ಇನ್ನು ಕಾರ್ಮಿಕ ವರ್ಗದ ರಾಜಕೀಯ ಪಾತ್ರವನ್ನೂ ಕುಗ್ಗಿಸಿದೆ. ವಿಧಾನಸಭೆ ಲೋಕಸಭಾ ಚುನಾವಣೆಗಳಲ್ಲಿ ಜನಪರ ತಿರುವನ್ನು ತಂದು ಸಮಾಜದ ಇತರ ಎಲ್ಲಾ ದುಡಿಯುವ ವರ್ಗಗಳಿಗೆ ಮಾದರಿಯಾಗಬೇಕಾದ ಕರ್ತವ್ಯದಿಂದ ವಿಮುಖರನ್ನಾಗಿಸಿದೆ. ತನ್ನ ತಾನರಿಯದೆ ತನ್ನ ವರ್ಗದ ಜೊತೆಗೂಡಿ ಸ್ವತಂತ್ರ ರಾಜಕೀಯ ಶಕ್ತಿಯಾಗದೆ ಬಂಡವಾಳಶಾಹಿ - ಭೂಮಾಲಕ ಶಕ್ತಿಗಳ ಬಾಲ ಬಡುಕನಾಗಿ ತನಗೇ ದ್ರೋಹವೆಸಗಿಕೊಳ್ಳುವಲ್ಲಿ ಇತರರ ಕೆಲವು ಅಂಶಗಳ ಜೊತೆಯಲ್ಲಿ ಜಾತಿಯ ಪಾತ್ರ ಮಹತ್ವದ್ದು. ಆದುದರಿಂದ ಮೇ ದಿನಾಚರಣೆಯಂದು ಭಾರತವನ್ನು ಭಾರತದ ಕಾರ್ಮಿಕ ವರ್ಗವನ್ನು ಕಾಡುತ್ತಿರುವ ಜಾತಿ ಭಾವನೆಯಿಂದ ವಿಮೋಚನೆ ಗೊಳ್ಳುವ ದಿಕ್ಕಿನಲ್ಲಿ ಚಿಂತಿಸಬೇಕಾದ, ಪ್ರಯತ್ನಿಸಬೇಕಾದ ದಿನ.



ಜಾತಿ ವ್ಯವಸ್ಥೆಯ ಭಾಗವಾಗಿ ಭಾರತಕ್ಕೆ ಶಾಪವಾಗಿ ಕಾಡುತ್ತಿರುವ ಅಸ್ಪೃಶ್ಯತೆಯ ವಿರುದ್ಧ ಸೆಟೆದು ನಿಲ್ಲಬೇಕಾದ ದಿನ ದುಡಿದ ಜನರನ್ನು, ಅವರ ಮಾನವ ಹಕ್ಕುಗಳನ್ನು ತುಳಿಯುತ್ತಾ ಅಗ್ಗದ ಬೆಲೆಗೆ ಅವರ ಶ್ರಮವನ್ನು ಪಡೆಯಲೆಂದು ಸೃಷ್ಟಿಸಿದ ಕಠೋರ ಸಾಧನವಾದ ಅಸ್ಪೃಶ್ಯತೆಯ ವಿರುದ್ಧ ಹೋರಾಡದೆ ಭಾರತದ ಕಾರ್ಮಿಕ ವರ್ಗಕ್ಕೆ ಮುಕ್ತಿಯಿಲ್ಲ.



ದಿನಕ್ಕೆ 12-14 ಗಂಟೆ ದುಡಿಸಿಕೊಳ್ಳುವ ಜೀತ ಪದ್ಧತಿಗೆ ಹಾಲುಗಲ್ಲದ ಹಸುಳೆಗಳನ್ನು ಬಲಿಕೊಟ್ಟ ಅಸ್ಪೃಶ್ಯತೆಯ ವಿರುದ್ಧ ಹೋರಾಡದೆ ಕಾರ್ಮಿಕರಿಗೆ 8 ಗಂಟೆ ಕೆಲಸ ದಕ್ಕುವುದುಂಟೆ?

ಮನುಷ್ಯ ಮನುಷ್ಯರನ್ನು ಸ್ಪರ್ಶಿಸಬಾರದು ಅವರ ನೆರಳೂ ಬೀಳಬಾರದು ಎನ್ನುವ ಅಸ್ಪೃಶ್ಯತೆ ಇನ್ನೂ ಜಿವಂತವಾಗಿರುವ ಕಡೆ ಎಲ್ಲ ಮನುಷ್ಯರೂ ಸಮಾನರು ಎಲ್ಲರಿಗೂ ಸಮಾಜದಲ್ಲಿ, ರಾಜಕೀಯದಲ್ಲಿ ಸಮಾನಾವಕಾಶ, ಎಲ್ಲರಿಗೂ ಒಂದೇ ಓಟು ಎನ್ನುವ ಪ್ರಜಾಪ್ರಭುತ್ವ ಪೂರ್ಣವಾಗಿ ಅರಳಲು ಸಾಧ್ಯವೇ?

1999 ರ ಮೇ ದಿನಾಚರಣೆಯಂದು ಕಾರ್ಮಿಕ ವರ್ಗ ಈ ಪ್ರಶ್ನೆಗಳನ್ನು ಕೇಳಿಕೊಳ್ಳಬೇಕು. ಇತಿಹಾಸದ ಈ ಸವಾಲಿಗೆ ಉತ್ತರ ನೀಡುವ ಎದೆಗಾರಿಕೆ ತೋರಬೇಕು.

ಈ ಪ್ರಯತ್ನದಲ್ಲಿ ಕರ್ನಾಟಕದ ಕಾರ್ಮಿಕ ವರ್ಗಕ್ಕೆ ನೆರವಾಗಲು 'ಐಕ್ಯರಂಗ' - 'ದುಡಿಯುವ ಜನರ ಪ್ರಾಣಮಿತ್ರ' ಕರ್ನಾಟಕದಲ್ಲಿ ಅಸ್ಪೃಶ್ಯತೆಯ ಆಚರಣೆಯನ್ನು ನಿಮ್ಮ ಮುಂದೆ ಬಿಡಿಸಿಟ್ಟಿದೆ. ರಾಜ್ಯದಲ್ಲಿ ಅತ್ಯಂತ ಹೆಚ್ಚು ದಲಿತರ ಮೇಲೆ ದೌರ್ಜನ್ಯವೆಸಗಲಾಗುತ್ತಿರುವ ರಾಯಚೂರು ಜಿಲ್ಲೆಯಿಂದ ಕೃಷಿ ಕೂಲಿಕಾರರ ಸಂಘದ ನಾಯಕರಾದ ಸ್ವತಃ ಅಸ್ಪೃಶ್ಯರಾದ ಚಂದ್ರಪ್ಪ ಹೊಸ್ಕೇರಾ ಮತ್ತು ಜೀತಗಾರನಾಗಿದ್ದು ಅದರಿಂದ ವಿಮೋಚನೆ ಪಡೆದುಕೊಂಡ ಕೂಲಿಕಾರ ಹೋರಾಟಗಳ ಸರಮಾಲೆಗೆ ಕಾರಣಗಾರ ಬಾಳಪ್ಪ ಬರೆದಿದ್ದಾರೆ. ಹಾಗೆಯೇ ಬೆಂಗಳೂರು ನಗರದಲ್ಲಿ ಮೇಲುನೋಟಕ್ಕೆ ಕಾಣದ ಆದರೆ ಒಳಗೊಳಗೆ ಕಾಡುವ, ಇರಿಯುವ ಅಸ್ಪೃಶ್ಯತೆಯನ್ನು ಹಾಗೆಯೇ ಗ್ರಾಮಾಂತರದ ಕೆಲವು ಅನುಭವಗಳನ್ನು ಬಿಚ್ಚಿಟ್ಟಿದ್ದಾರೆ ಕಾಂ. ರಾಜಶೇಖರ್ ಮೂರ್ತಿ. ಉತ್ತರ ಭಾರತದ ಅಸ್ಪೃಶ್ಯ ಮಹಿಳೆಯರು ಮನಮುಟ್ಟುವಂತೆ ಬಣ್ಣಿಸುವ ನೋವನ್ನು ಉಣಬಡಿಸಿದ್ದಾರೆ ಕಾಂ. ಕೆ.ವಿ. ಇಂದು ವಿಶ್ವವಿದ್ಯಾಲಯವೊಂದರಲ್ಲಿ ಉನ್ನತ ಸ್ಥಾನದಲ್ಲಿರುವ ಪ್ರಸಿದ್ಧ ದಲಿತ ಸಾಹಿತಿ ಅರವಿಂದ ಮಾಲಗತ್ತಿಯವರ ಆತ್ಮ ಚರಿತ್ರೆಯ ಕೆಲ ಭಾಗಗಳು ವಿದ್ಯಾವಂತ ದಲಿತರ ಪರಕೀಯತೆಯನ್ನು ಅವರು ಹಾದು ಬಂದ ಜೀವನದ ಚಿತ್ರವನ್ನು ತೆರೆದಿಡುತ್ತವೆ.

ಅಸ್ಪೃಶ್ಯತೆ ಹಾಗೂ ಜಾತಿ ಪದ್ಧತಿಯ ವಿರುದ್ಧ ಸೆಣಸುವ ಹಾದಿಯಲ್ಲಿ ಏಪ್ರಿಲ್ 14 ಅಂಬೇಡ್ಕರ್ ಜಯಂತಿಯದು ಬಳ್ಳಾರಿಯಲ್ಲಿ ನಡೆದ ಧರಣಿ ಸತ್ಯಾಗ್ರಹದ ಒಂದು ವರದಿಯಿದೆ. ಇದೇ ಬಳ್ಳಾರಿ ಜಿಲ್ಲೆಯ ಕುರುಗೋಡು ಗ್ರಾಮದಲ್ಲಿ ದೇವಾಲಯದ ಆವರಣದ ಒಳಗೇ ದೇವಸ್ಥಾನದ ಅಧಿಕಾರಿಗಳ ಹಾಗೂ ಭೂಮಾಲಿಕರ ವಿರೋಧವನ್ನು ಧಿಕ್ಕರಿಸಿ ಮಾಡಿದ ಹರಿಜನರ ಮದುವೆ ಆ ಪ್ರದೇಶದ ಉಂಟು ಮಾಡಿದ ಸಂಚಲನ ನಿಮ್ಮನ್ನು ತಾಕುತ್ತದೆ.

ಕುಲಂ ಕುಲಮಲ್ತು ಛಲಂಕುಲಂ, ಅಭಿಮಾನಂ ಕುಲಂ

ಅಣ್ಮುಕ್ಕಲುಂ ಎಂದ ಕನ್ನಡದ ಆದಿ ಕವಿ ನಾಡೋಜ ಪಂಪನ ನುಡಿಗಳು, ಆತ್ಮ ಯಾವಕುಲ, ಜೀವ ಯಾವಕುಲ, ಎನ್ನುವ ಕನಕ ದಾಸರ ಸವಾಲು, ಜಾತಿ ವಿಜಾತಿಯೆನ ಬೇಡ ಎನ್ನುವ ಸರ್ವಜ್ಞನ ಉಪದೇಶ, ಬಂತು ಸ್ವರಾಜ್ಯ, ಆದರೂ ಭಾಗ್ಯ ಹರಿಜನಕಿಲ್ಲಾ ನಿರ್ಬಲರೋ ಎಂಬ ದಿನಕರ ದೇಸಾಯಿಯವರ ಅಳಲೂ ಸಂಚಿಕೆಯ ಎಲ್ಲಕಡೆ ನಿಮ್ಮ ಎದುರಾಗಲಿದೆ. ಕಾರ್ಮಿಕ ವರ್ಗ ಬೆಳೆದರೆ, ಎಲ್ಲರಿಗೂ ಉದ್ಯೋಗ ದೊರೆತರೆ ಜಾತಿ ಪದ್ಧತಿಗಾಗುವ ಅವಸ್ಥೆಯನ್ನು, ಕೋಮುವಾದ ನೆಲೆ ತಪ್ಪುವುದನ್ನು ಬಣ್ಣಿಸುತ್ತಾರೆ ಬಾಬಾಜಾನ್ ಅತ್ತಾರ್.

- ಸಂಪಾದಕರು

ಭುಂಗಾ

ಬೆಳಗು ಮುಂಜಾನೆ
ಆರರ ಭುಂಗಾ ವದರಿದಾಗ
ತಮ್ಮಾ ಏಳೋ, ವದರಾಖತ್ತೈತಿ
ಭುಂಗಾ ಅಂತ, ನಮ್ಮವ್ವಾ ನನ್ನ ಎಬ್ಬಿಸತಾಳ
ಏಳತೀನಿ;
ತೆಂಬಗಿ ತೊಗೊಂಡು ಹೋಗಿ ಬಂದು
ಹಲ್ಲ ತಿಕ್ಕಿ, ಜಳಕಾ ಮಾಡಿ,
ಚಾ ಕುಡಿಯೋದರೊಳಗೆ
ಬುತ್ತಿ ಗಂಟು ರೆಡೀ ಆಗಿರತೈತಿ.
ಅರವಿ ಹಾಕ್ಕೊಂಡು ಕಂಪನಿಗೆ ಹೊಂಟಿರತೀನಿ
ದಾರ್‍ಯಾಗ ಚರ್ಚಿನ ಗಂಟೆ
ಢಂಣ್... ಢಂಣ್... ಢಂಣ್... ಢಂಣ್
ಅಂತಿರತೈತಿ
ಮಸುತ್ಯಾಗ, ಅಲ್ಲಾ .... ಹು ಅಕಬರ
ಅಂತ ಅನ್ನು ಅವಾಜ ಬರತಿರತೈತಿ
ಮತ್ತ
ಗುಡ್ಯಾಗಿನ ಗಂಟೆ - ಶಂಕದ ಸಪ್ಪಳಾ ಕೇಳಸತಿರತೈತಿ

ಇವೆಲ್ಲಾ ತಮ್ಮ ತಮ್ಮ ಜಾತಿಯವರನ್ನು ಕರಿತಿರತಾವು
ಆದರೆ;
ನಾವೆಲ್ಲ ಜಾತಿಯವರೂ ಕೂಡಿ ಕಾರಖಾನೆ ಕಡೆ
ಹೊಂಟಿರತೀವಿ.
ಆವಾಗ,
ಈ ಚರ್ಚು, ಮಸೂತಿ
ಮತ್ತ ಗುಡಿ-ಗುಂಡಾರದಾಗಿಂದ ಬರುವ
ಅವಾಜಿನ ಕಡೆ ನಮ್ಮ ಲಕ್ಷಾ ಇರುದಿಲ್ಲಾ
ನಮ್ಮೆಲ್ಲಾರ ಲಕ್ಷಾ ಕಾರಖಾನೆಯ
ಯೊಳಗಿನ ಭುಂಗಾದ ಕಡೆ ಇರತೈತಿ

ಖರೇ ಹೇಳತೀನಿ; ಅದರ ಭುಂಗಾ ವದರಿದಾಗ
ನನ್ನ ಕೂಡ ದುಡಿಯುವ
ಡೇವಿಡ್‌ನ ಅಪ್ಪಾ
ಏಳೋ ಭುಂಗಾ ಆಗಾಖತ್ತೈತಿ
ಅಂತ, ಅವಂಗ ಎಬ್ಬಿಸತಾನ ಅಂತ.
ಬಸ್ಯಾನ ಮನ್ಯಾಗ, ಅವನ ಹೆಂಡತಿ
ಏಳ್ರೀ, ಕಂಪನಿ ಭುಂಗಾ ವದರಾಖತ್ತೈತಿ
ಅಂತ, ಎಬ್ಬಿಸತಾಳ ಅಂತ
ಹೌದು ಇವರೆಲ್ಲರೂ
ಈ ಕಂಪನಿ ಭುಂಗಾದ ಅವಾಜು ಕೇಳಿ
ಯಾಕ ಎಬ್ಬಿಸತಾರ?
ಯಾಕಂದರ ಅವರಿಗೆ ಗೊತ್ತೈತಿ
ಬ್ಯಾರೆ ಆವಾಜು ಬರುವಲ್ಲೆ ಕಳಸಿದರ
ಹೊಟ್ಟೆಗೆ ಕೂಳು ಸಿಗುದಿಲ್ಲಾ ಅನ್ನುದು

ನಮ್ಮ ದೇಶದಾಗ
ಎಲ್ಲಾರಿಗೂ ನೌಕರಿ ಸಿಗುವೌಂಗ ಆದರ
ಕೆಲಸಾ ಕೊಡಲಾರದ ಬುದ್ಧಿವಾದಾ ಹೇಳುವ
ಆ - ಈ
ಧರ್ಮಗಳ ಆವಾಜು ಬಂದ ಆಗಿ
ಎಲ್ಲಾ ಜಾತಿಯವರ ಲಕ್ಷಾ
ಯೋಳಗಿನ ಭುಂಗಾದ ಕಡೆ ಹೊಕ್ಕೈತಿ
ಆಗ, ಹದಿನೆಂಟ ಜಾತಿ ಹೋಗಿ
ದುಡಿಯುವವರದ ವಂದ ಜಾತಿ ಆಗತೈತಿ.

- ಬಾಬಾಜಾನ್ ಅತ್ತಾರ

ರಾಯಚೂರು ಜಿಲ್ಲೆಯಲ್ಲಿ ಅಸ್ಪೃಶ್ಯತೆಯ ಶಾಪ...

ಚಂದ್ರಪ್ಪ ಹೊಸ್ಕೇರಾ

ರಾಯಚೂರು, ಕೊಪ್ಪಳ ಜಿಲ್ಲೆಯಲ್ಲಿ 9 ತಾಲ್ಲೂಕುಗಳು ಇದ್ದು ಸಾವಿರಾರು ಗ್ರಾಮಗಳಲ್ಲಿ ಅಸ್ಪೃಶ್ಯತೆ ಒಂದು ಶಾಪವಾಗಿದೆ. ಅದರ ನೋವು, ಕಷ್ಟ, ದುಃಖ ದಬ್ಬಾಳಿಕೆಗಳಿಕೆಯನ್ನು ಅನುಭವಿಸುತ್ತಿರುವುದನ್ನು ಹಳ್ಳಿಗಳಲ್ಲಿ ಇವತ್ತಿಗೂ ಕಣ್ಣಿನಿಂದ ನೋಡುತ್ತಾ ಇದ್ದೇವೆ. ಸವರ್ಣಿಯ ಜನರಿಂದ 'ಮಾದಿಗರು' ಎಂಬ ಶಬ್ದ ಬಳಸುವುದರಿಂದ ಮಾದಿಗರಾಗಿ ಹುಟ್ಟುವುದೇ ತಪ್ಪೆ ಎಂಬ ಭಯವು ವಿದ್ಯಾವಂತರನ್ನು ಕಾಡುತ್ತದೆ. ಮಾದಿಗ ಜನಾಂಗವಾಗಿ ಹುಟ್ಟಿ ಬದುಕುವುದು ಹಳ್ಳಿಗಳಲ್ಲಿ ಕಷ್ಟ ಪರಿಸ್ಥಿತಿಯಾಗಿದೆ. ಹಬ್ಬ ಹರಿದಿನಗಳಲ್ಲಿ ದೇವಾಲಯಗಳಲ್ಲಿ ಪ್ರವೇಶವಿಲ್ಲ, ಜಾತ್ರೆ ಸಂದರ್ಭದಲ್ಲಿ ದೇವರನ್ನು ಮುಟ್ಟಿಸಿಕೊಳ್ಳಲಾಗುವುದಿಲ್ಲ. ಮಾದಿಗರ ಮಕ್ಕಳನ್ನು ಶಾಲೆಯಲ್ಲಿ ಪಕ್ಕದಿಂದ ದೂರ ಕೂರಿಸುವ ಪದ್ಧತಿ, ತಾರತಮ್ಯ ಶಿಕ್ಷಣ ನೀಡುತ್ತಿರುವುದು ಈಗಲೂ ಗ್ರಾಮಗಳಲ್ಲಿ ನೋಡಬಹುದಾಗಿದೆ.

ಯಲ್ಬುರ್ಗಾ ತಾಲೂಕಿನ ಕಲ್ಲೂರು ಗ್ರಾಮದಲ್ಲಿ ನಡೆದದ್ದು ಇಂತಹದ್ದೇ ಘಟನೆ. ಅಸ್ಪೃಶ್ಯರು ದೇವರ ಗುಡಿ ಪಕ್ಕದಾರಿ ಮಾಡಿಕೊಂಡು ಹೋಗುತ್ತಾರೆಂದು ಮೊದಲಿನಿಂದಲೂ ಜಗಳವಿತ್ತು. ಮೊನ್ನೆ ಕಾರ್ತಿಕ ಮಾಸದ ಹಬ್ಬದ ದಿನ ಬಳೆಗಾರ ರಾಜಸಾಬ್ ಮಾದಿಗರ ಮಹಿಳೆಯರಿಗೆ ಬಳೆತೊಡಿಸಲು ನಿರಾಕರಿಸಿದ ನಂತರ ರಾಜಸಾಬನ ಮೇಲೆ ಅಸ್ಪೃಶ್ಯತೆ ಆಚರಣೆ ಮಾಡಿದ್ದಕ್ಕಾಗಿ ಪೋಲೀಸ್ ಕೇಸು ನೀಡಿತು. ಅದೇ ನೆಪಮಾಡಿಕೊಂಡು ಸವರ್ಣೀಯರು ಒಟ್ಟಾಗಿ ಅಸ್ಪೃಶ್ಯರ ಮೂವತ್ತು ಮನೆಗಳಿಗೆ ಸಾಮೂಹಿಕವಾಗಿ ಬೆಂಕಿಯಿಟ್ಟರು. ಹಿರೇಬೆಣಕಲ್ ಗ್ರಾಮದಲ್ಲಿ ಗೌರಿ ಹಬ್ಬದಾಗ ಸವರ್ಣಿಯರು ಮಾದಿಗರ ಹೆಣ್ಣು ಮಕ್ಕಳನ್ನು ಬೆತ್ತಲೆ ಮಾಡಿದರು. ಇಂತಹ ಘಟನೆ ಜಿಲ್ಲೆಯಲ್ಲಿ ನಡೆಯುತ್ತಲೇ ಇವೆ. ನಮ್ಮ ಹಿರಿಯರಲ್ಲಿ ದೇವರ ಗುಡಿ ಮೇಲೆ ಹತ್ತಬಾರದು, ನಾವು ಅವರ ಹತ್ತಿರ ಹೋದರೆ ಒಳಗೆ ಹೋದರೆ ದೇವರಿಗೆ ಪಾಪ ಮಾಡಿದಂಗ, ನಮಗೆ ಮಕ್ಕಳು ಹುಟ್ಟುವಾಗ ದೇವರು ಶಾಪ ಹಾಕುತ್ತಾನೆಂದು ಇಲ್ಲವಾದರೆ ದೇವರು ಮೇಲಿನ ನರಕಕ್ಕೆ ಕಳಿಸುತ್ತಾನೆಂಬ ಭ್ರಮೆಗಳಲ್ಲಿ ಈಗಲೂ ಮುಳುಗಿದ್ದಾರೆ.

ಜಾತ್ರೆ - ಹಬ್ಬ

ರಾಯಚೂರು ಜಿಲ್ಲೆಯಲ್ಲಿ ಪಟ್ಟಣ ಪ್ರದೇಶ ಬಿಟ್ಟರೆ ಗ್ರಾಮೀಣ ಹಳ್ಳಿಯ ಎಲ್ಲಾ ಕಡೆ ಜಾತ್ರೆ ಹಬ್ಬದ ಸಂದರ್ಭದಲ್ಲಿ ತೇರು, ಉಚ್ಚಯ್ಯ ಎಳೆಯುವುದಕ್ಕೆ ಮಾದಿಗರಿಗೆ ಅವಕಾಶ ನೀಡುವುದಿಲ್ಲ. ಊರಿನ ಉಚಯ್ಯ ಎಳೆಯುವ ಸಂದರ್ಭದಲ್ಲಿ ಅಸ್ಪೃಶ್ಯರು ಸವರ್ಣೀಯರ ಪಕ್ಕದಿಂದ ಮೂರು ಮೀಟರ್ ದೂರ ಉಳಿಯುತ್ತಾರೆ. ಉಚ್ಚಯ್ಯ ಬರುವುದು

ಪುಟ 8 ನೋಡಿ

"ಜಾತಿ ಮತದ ಗುಹೆಗಳಿಂದ ಹೊರಬನ್ನಿರಿ ಬಯಲಿಗೆ

ಕೃತಕ ತಿಮಿರದಾಳದಿಂದ ವಿಸ್ತಾರದ ಬೆಳಕಿಗೆ"

ಭಾರತದ ಸ್ವಾತಂತ್ರ್ಯ ಚಳುವಳಿಯಲ್ಲಿ ಧುಮುಕಿದ್ದ ಕೋಟಿ ಕೋಟಿ ಭಾರತೀಯರ ಒಗ್ಗಟ್ಟಿನ ಹೋರಾಟದ ಫಲವಾಗಿ ಮೂಡಿದ ಘೋಷಣೆಯಿದು. ಭಾರತದ ಜನಮಾನಸದಲ್ಲಿ ಹಬ್ಬಿ ಬೆಳೆಯಲಾರಂಭಿಸಿದ್ದ ಮಾನವೀಯ ಆಗಸದಲ್ಲಿ 19 ಹಾಗೂ 20ನೇ ಶತಮಾನದಲ್ಲಿ ಮೂಡಿ ಮೊಳಗಿದ ಅನೇಕ ಎತ್ತರದ ವ್ಯಕ್ತಿತ್ವಗಳ ವಿಚಾರ ಮಥನದ ಫಲವಿದು. ಸಮಾಜ ಸುಧಾರಕ ಚಳುವಳಿ, ಸಾಹಿತ್ಯ, ಕಲೆಯ ನವೋದಯದಿಂದ ವಿಮೋಚನಾ ಚಳುವಳಿಯವರೆಗೆ ಬಂಗಾಲದ ರಾಜರಾಮ ಮೋಹನರಾಯ, ವಿವೇಕಾನಂದರಿಂದ ಮಹಾರಾಷ್ಟ್ರದ ಮಹಾತ್ಮ ಫುಲೆ, ಕೇರಳದ ಗುರು ನಾರಾಯಣರು, ತಮಿಳಿನ ಪೆರಿಯಾರ್‌ವರೆಗೆ ನೂರಾರು ಜನ ಭಾರತದಲ್ಲಿ ಬಿತ್ತರಿಸಿದ ಧ್ವನಿಯಿದು. ಸಾವಿರಾರು ಜನ ಕವಿಗಳು, ಇತರ ಸಾಹಿತಿ, ಕಲಾವಿದರು ಹೃದಯಂಗಮವಾಗಿ ವರ್ಣಿಸಿದ, ಸಾಹಿತ್ಯದ ಅಪೂರ್ವ ಕೃತಿಗಳ ಸೃಷ್ಟಿಗೆ ಆಧಾರವಾದ ಭಾವನಾ ತರಂಗಗಳಿವು.

ಆದರೆ ಇತ್ತೀಚೆಗೆ ಕೆಲವರ್ಷಗಳಲ್ಲಿ ರಾಜಕಾರಣದಿಂದ ಆರಂಭವಾಗಿ ಎಲ್ಲ ರಂಗಗಳಿಗೂ ವ್ಯಾಪಿಸುತ್ತಾ ಮನುಷ್ಯ ಮನುಷ್ಯರ ನಡುವೆ ಎತ್ತರದ ಗೋಡೆಗಳನ್ನು ನಿರ್ಮಿಸುತ್ತಿದೆ ಜಾತಿವಾದ. ನಮ್ಮ ಜಾತಿಯವರು, ನಮ್ಮ ಜಾತಿಯವರಿಗೇ ಓಟು, ಹುದ್ದೆ, ಅಧಿಕಾರ. ಅದನ್ನು ಖಾತರಿಗೊಳಿಸುವುದಕ್ಕಾಗಿ ಜಾತಿ ಸಂಘಗಳು, ಸಮ್ಮೇಳನಗಳು, ಅದರಲ್ಲಿ ಯಾವುದೇ ಪಕ್ಷ ಬೇಧವಿಲ್ಲದೆ ಅನೇಕ ರಾಜಕೀಯ ಪಕ್ಷಗಳ ನಾಯಕರು, ಮಠಗಳ ಗುರುಗಳು ಇತರ ಧಾರ್ಮಿಕ ನಾಯಕರು, ಎಲ್ಲ ಮಾನವೀಯ ಪ್ರಜಾಸತ್ತಾತ್ಮಕ ರಾಜಕೀಯದ ಮೌಲ್ಯಗಳನ್ನು ಗಾಳಿಗೆ ತೂರಿ ಭಾಗವಹಿಸುವುದು ಒಂದು ರಾಜಕೀಯ ಅಲೆಯಾಗಿದೆ. ಇದು ಕಛೇರಿ, ಫ್ಯಾಕ್ಟರಿ, ಶಾಲಾ ಕಾಲೇಜುಗಳು, ವಿಶ್ವವಿದ್ಯಾಲಯಗಳು ಮುಂತಾದ ಎಲ್ಲ ಕಡೆ ಹರಡುತ್ತಿದೆ. ಅನೇಕ ಪ್ರಗತಿಪರ ಬುದ್ಧಿ ಜೀವಿಗಳನ್ನೂ, ಸಾಹಿತಿಗಳನ್ನೂ ಸೆಳೆದು ಕೊಳ್ಳುತ್ತಿದೆ. ತಾವೇ ಬರೆದ ಮಾನವೀಯ ಕಾವ್ಯ, ಕಥೆಗಳನ್ನು ಮರೆತು ಬಿಡುತ್ತಿದ್ದಾರೆ. ಅಥವಾ ಸಹಜವೆಂಬಂತೆ ಸ್ಥೈರಿಸಿಕೊಳ್ಳುತ್ತಿ ದ್ದಾರೆ. ಸಾಹಿತ್ಯ, ಕಲಾರಂಗದ ಪುರಸ್ಕಾರಗಳು, ವಿವಿಧ ಸ್ಥಾನಗಳೂ,ಜಾತಿಯ ಆಧಾರದ ಮೇಲೆ ಹಂಚಿಕೆಯಾಗಿ ಹಾಸ್ಯಾಸ್ಪದ ಸ್ಥಿತಿಗೆ ಇಳಿದಿದೆ.


ಕೋಮುವಾದವೊಂದು ಕಡೆ ದೇಶವನ್ನು ಸಾವಿರಾರು ವರ್ಷಗಳ ಹಿಂದಿನ ಪ್ರಗತಿ ವಿರೋಧಿ ಮೌಲ್ಯಗಳ ಕಡೆಗೆ ದೇಶವನ್ನು ಸೆಳೆಯುತ್ತಾ ಮನುಷ್ಯ ಮನುಷ್ಯರ ದ್ವೇಷದ ಕಿಚ್ಚನ್ನು ಹಚ್ಚುತ್ತಿದೆ. ಅದೇ ಸಮಯದಲ್ಲಿ ಜಾತಿವಾದವೂ ತಲೆಯೆತ್ತಿ ಪಾಳೆಯಗಾರಿ ಶಕ್ತಿಗಳು ರಾಜಕೀಯದಲ್ಲಿ ವಿಜೃಂಭಿಸುವಂತೆ ಮಾಡಿವೆ. ಈ ಭಾವನೆಗಳು ಮೇಲ್ಜಾತಿ-ಕೆಳಜಾತಿಗಳ ನಡುವಣ ಸಂಘರ್ಷಗಳಾಗಿ ಪರಿಣಮಿಸಿವೆ. ಬಿಹಾರದ ಜೆಹಾನಾಬಾದ್‌ನಲ್ಲಿ ನಡೆಯುತ್ತಿರುವ ಹಲ್ಲೆಗಳು, ಕೊಲೆ ಸರಣಿಗಳ ಚಿತ್ರಗಳು ದೇಶವೇ ಬೆಚ್ಚಿ ಬೀಳುವಂತಾಗಿದೆ. ನಮ್ಮ ರಾಜ್ಯದಲ್ಲಿಯೂ ಹಲವಾರು ಕಡೆ ಆಗಾಗ್ಗೆ ಜಾತಿ ವಿದ್ವೇಷ ಕೆರಳುತ್ತಿರುವುದನ್ನು ಕಾಣುತ್ತಿದ್ದೇವೆ.

ಜಾತಿಪದ್ಧತಿಯ ಅತ್ಯಂತ ಕ್ರೂರ ಅಮಾನವೀಯ ಫಲವೇ ಅಸ್ಪೃಶ್ಯತೆ. ಇದೇ ಜಗತ್ತಿನಲ್ಲಿ ಎಲ್ಲಿಯೂ ಕಾಣದ ಭಾರತೀಯರೆಲ್ಲರೂ ತಲೆ ತಗ್ಗಿಸಬೇಕಾದಂತಹ ಪದ್ಧತಿ ಇಂದಿಗೂ ಭಾರತದಲ್ಲಿ ಹಲವು ರೂಪಗಳಲ್ಲಿ ಜೀವಂತವಾಗಿದೆ. ಮಾನವ ಹಕ್ಕುಗಳ ಬಗ್ಗೆ ಭಾರತದಲ್ಲಿಯೂ ಯಥೇಚ್ಛವಾಗಿ ಮಾತಿನ ಸುರಿಮಳೆಯೇ ಆಗುತ್ತಿರುವ ಇಂದಿನ ಸನ್ನಿವೇಶದಲ್ಲಿಯೂ ಮನುಷ್ಯರನ್ನು ಪ್ರಾಣಿಗಳಿಗಿಂತಲೂ ಕೀಳಾಗಿ ಕಾಣುವ ಈ ಪದ್ಧತಿ ಜೀವಂತವಾಗಿರುವುದು ಖೇದಕರ ಸಂಗತಿ. ಭಾರತದ ಸ್ವಾತಂತ್ರ್ಯ ಚಳುವಳಿಯ ಸಂದರ್ಭದಲ್ಲಿ ಮತ್ತು ನಂತರದ ಕೆಲವು ದಶಕಗಳಲ್ಲಿ ವ್ಯಾಪಕವಾಗಿದ್ದ ಅಸ್ಪೃಶ್ಯತೆಯ ವಿರೋಧಿ ಮನಸ್ಸು ಇಂದು ಜಾತೀವಾದದ ಉಬ್ಬರದ ಫಲವಾಗಿ ಬಗ್ಗಡವಾಗಿದೆ. ಜಾತಿ ಸಂಘ, ಸಮ್ಮೇಳನಗಳು ಆಯಾ ಜಾತಿಗಳ ಜನರಲ್ಲಿ ಇತರೆಲ್ಲಾ ಜಾತಿಗಳ ಜನರ ಬಗ್ಗೆ ದ್ವೇಷವನ್ನು ಬೆಳೆಸುತ್ತಿರುವಾಗ ಎಲ್ಲರಿಗಿಂತ ದುರ್ಬಲರಾಗಿ ಎಲ್ಲರ ಸೇವೆ ಸಲ್ಲಿಸುತ್ತಿದ್ದ ಅಸ್ಪೃಶ್ಯರ ಮೇಲೆ, ಕಿಡಿಗಾರುವಂತಾಗಿದೆ. ಅಸ್ಪೃಶ್ಯತೆಯ ಕ್ರೂರ ತುಳಿತದಿಂದ ಹೊರಬರಲು ದಲಿತರು ಮಾಡುತ್ತಿರುವ ಒಂದೊಂದು ಪ್ರಯತ್ನವೂ ಅವರ ಮೇಲೆ ಧಾಳಿ ಮಾಡುವ ಅವಕಾಶವನ್ನಾಗಿ ಉಪಯೋಗಿಸಿಕೊಳ್ಳಲಾಗಿದೆ. ಇದರ ಫಲವಾಗಿ ದೌರ್ಜನ್ಯಗಳು ಹೆಚ್ಚುತ್ತಿವೆ. ಮೇಲ್ಜಾತಿಗಳ ಕ್ರೂರ ಭೂಮಾಲಕರಲ್ಲದೆ ಇಂದು ಹಿಂದುಳಿದ ಜಾತಿಗಳೂ ದಲಿತರ ಮೇಲಿನ ದೌರ್ಜನ್ಯದಲ್ಲಿ ಪಾಲುಗೊಳ್ಳುತ್ತಿವೆ. ಹಿಂದೆ ತಾವೇ ಮೇಲೆ ಹರಿಹಾಯ್ದು ಕದನಕ್ಕಿಳಿಯುತ್ತಿದ್ದ ಮೇಲ್ಜಾತಿಗಳ ಭೂಮಾಲಕ ಇಂದು ತಮ್ಮ ಉದ್ದೇಶವನ್ನು ಹಿಂದುಳಿದ ಜಾತಿಗಳ ಮೂಲಕ ಮಾಡಿಸುತ್ತಾರೆ. ಹೀಗೆ ಅತ್ಯಂತ ದೀನ ಸ್ಥಿತಿಯಲ್ಲಿರುವ ಹಾಗೂ ತನ್ನ ದೀನ ಸ್ಥಿತಿಯ ವಿರುದ್ಧ ಒಟ್ಟಾಗಿ ಸಿಡಿದೇಳ ಬೇಕಾಗಿರುವ ಹಿಂದುಳಿದ ಜಾತಿ ಹಾಗೂ ದಲಿತರ ನಡುವೆ ಕಂದರ ನಿರ್ಮಾಣ ಮಾಡುತ್ತಿದ್ದಾರೆ. ಒಟ್ಟಿನಲ್ಲಿ ಅಸ್ಪೃಶ್ಯತೆಯನ್ನು ಸಮಾಜದಿಂದ ತೊಲಗಿಸಬೇಕು ಎನ್ನುತ್ತಿದ್ದ ಮಾನವರೆಲ್ಲಾ ಒಂದೇ ಎನ್ನುತ್ತಿದ್ದ ಜನ ಸಮುದಾಯದ ಅನೇಕರು ಇಂದು ಅಸ್ಪೃಶ್ಯತೆಯ ವಿರುದ್ಧ ಹೋರಾಟದಿಂದ ದೂರ ಸರಿದಿದ್ದಾರೆ. ಇಂತಹ ಸಂದರ್ಭದಲ್ಲಿ ಅಸ್ಪೃಶ್ಯತೆಯ ನಿರ್ಮೂಲನಕ್ಕಾಗಿ, ಜಾತಿ ವ್ಯವಸ್ಥೆಯ ನಾಶಕ್ಕಾಗಿ ಮಾಡುವ ಹೋರಾಟ ಹೆಚ್ಚು ಪ್ರಾಮುಖ್ಯತೆಯನ್ನು ಪಡೆದುಕೊಳ್ಳುತ್ತಿದೆ.

ಏರಿದ ಬೆಲೆಗಳು, ಹೆಚ್ಚುತ್ತಿರುವ ದಾರಿದ್ರ್ಯ, ಮಾಯವಾಗುತ್ತಿರುವ ಉದ್ಯೋಗವಕಾಶಗಳು ಬಡಜನರೆಲ್ಲರನ್ನು ಹತಾಶೆಯ ಕಡೆಗೆ ದಬ್ಬುತ್ತಿರುವಾಗ ಈ ಹತಾಶೆಯನ್ನು ಬಡವ-ಕಡು ಬಡುವರ ನಡುವೆ ಕಿಚ್ಚು ಹಬ್ಬಿಸಲು ಬಳಸುವ ಆಳುವ ವರ್ಗಗಳ ಹುನ್ನಾರವನ್ನು ಅರಿತು ಅವರ ಕುತಂತ್ರ ಸಫಲವಾಗದಂತೆ ಎಚ್ಚರದಿಂದ ಕೆಲಸ ಮಾಡಬೇಕಾಗಿದೆ. ಎಲ್ಲ ರೀತಿಯ ಸಾಮಾಜಿಕ ಚಳುವಳಿಗಳ ನಾಯಕರೂ ಈ ವಾಸ್ತವವನ್ನು ಗಮನಿಸಿ ತಮ್ಮ ಚಳುವಳಿಯ ದಿಕ್ಕುದೆಸೆಗಳನ್ನು ರೂಪಿಸಿಕೊಳ್ಳುವುದು ಇಂದಿನ ತುರ್ತುಗಳಲ್ಲೊಂದು. ಜಾತಿ ವ್ಯವಸ್ಥೆಯ ನಾಶದಿಂದ ಮಾತ್ರವೇ ಅಸ್ಪೃಶ್ಯತೆಯ ನಿರ್ಮೂಲ ಸಾಧ್ಯ. ಆದ್ದರಿಂದ ಜಾತಿ ಪದ್ಧತಿಯ ಮೇಲೆ ಹಾಗೂ ಅಸ್ಪೃಶ್ಯತೆಯ ಮೇಲೆ ನಿರಂತರವಾಗಿ ಧಾಳಿ ಎಸಗಬೇಕು. ಈ ಧಾಳಿ ಫಲ ನೀಡಬೇಕಾದರೆ ಅಸ್ಪೃಶ್ಯತೆ ಹಾಗೂ ಜಾತಿ ಪದ್ಧತಿಯ ಮೂಲ ಬೇರುಗಳನ್ನು ಹುಡುಕಬೇಕು. ಮೂಲ ಬೇರುಗಳ ವಿರುದ್ಧ ಧಾಳಿ ಎಸಗಿದಾಗ ಮಾತ್ರ ಅವುಗಳನ್ನು ಅಲುಗಾಡಿಸಿ ಕಿತ್ತೆಸೆದಾಗ ಮಾತ್ರ ನಮ್ಮ ಪ್ರಯತ್ನ ಸಫಲವಾಗುತ್ತದೆ. ಭಾರತದಲ್ಲಿ ಸಾವಿರಾರು ವರ್ಷಗಳಿಂದ ಮೂಡಿ ಬೆಳಗಿದ ಜೈನ, ಬುದ್ಧ, ಬಸವ, ಸಿಖ್, ಕಬೀರ, ಚೈತನ್ಯ, ಜ್ಞಾನ ದೇವ, ತುಕಾರಾಮರಂತಹ ಧಾರ್ಮಿಕ ಚಳುವಳಿ ಸಾರ, ನಂತರದ ಅಸಂಖ್ಯ ಸಾಮಾಜಿಕ ರಾಜಕೀಯ ಚಳುವಳಿಕಾರರ ಉದ್ದೇಶ ಸಾರ್ಥಕವಾಗಲು ಇಡೀ ಸಮಾಜ ಮೈಕೊಡವಿ ಎದ್ದು ಒಂದೇ ಉದ್ದೇಶದಿಂದ ಧಾಳಿ ಎಸಗಬೇಕಾಗಿದೆ.

— ಜಿ.ಎನ್.ನಾಗರಾಜ್

ವಿಜ್ಞಾನ ಯುಗದಲ್ಲಿ ವಿಜ್ಞಾನ ನಗರದೊಳಗಿನ ಅಸ್ಪೃಶ್ಯತೆ



ಮಾನವ ವಿಜ್ಞಾನ ಯುಗದಲ್ಲಿ ಏನೆಲ್ಲಾ ಸಾಧನೆ ಮಾಡಿದ್ದೇನೆಂದು ಬಡ ಬಡಿಸಿದರೂ ಈ ಅಸ್ಪೃಶ್ಯತೆಯ ಪಿಡುಗನ್ನು ತಡೆಯಲು ಮಿಶ್ರ ಪ್ರತಿಕ್ರಿಯೆ ರೂಡಿಸಿ ಕೊಂಡಿರುವುದು ಮನಗಾಣುತ್ತದೆ. ಕರ್ನಾಟಕ ರಾಜಧಾನಿ ಉದ್ಯಾನ ನಗರವೆಂಬ ಬೆಂಗಳೂರಿನಲ್ಲಿ ಇನ್ನೂ ಅಸ್ಪೃಶ್ಯತೆ ಆಚರಣೆಯಲ್ಲಿದೆಯೆಂದರೆ ಸಾಮಾನ್ಯ ಜನಕ್ಕೆ ಆಶ್ಚರ್ಯವಾಗಬಹುದು. ಈ ಪ್ರಖ್ಯಾತ ನಗರದಲ್ಲಿ ಸಾರ್ವಜನಿಕವಾಗಿ ಹೊಟೆಲ್‌ಗಳಲ್ಲಿ ಚಲನ ಚಿತ್ರ ಮಂದಿರಗಳಲ್ಲಿ ಹಾಗೂ ದೇವಸ್ಥಾನಗಳಲ್ಲಿ ಮೇಲ್ನೋಟಕ್ಕೆ ವಾಸ್ತವಾಂಶವಾಗಿ ಅಸ್ಪೃಶ್ಯತೆ ಆಚರಣೆ ಇಲ್ಲದಿರುವುದು ಜನಜನಿತವಾಗಿದೆ. ಆದ್ದರಿಂದ ನಗರ ಪ್ರದೇಶಗಳಲ್ಲಿ ವಾಸಿಸುವ ಸಮಾನ್ಯ ಅಸ್ಪೃಶ್ಯರಿಗೆ ಸಮಾಜಿಕವಾಗಿ ಅವಮಾನ ಕಂಡು ಬರುವುದು ಕಡಿಮೆ ಎಂದು ಒತ್ತಿ ಹೇಳ ಬಹುದು.

ನಗರಗಳಲ್ಲಿ ಅಸ್ಪೃಶ್ಯತೆ ಇನ್ನೂ ಆಚರಣೆಯಲ್ಲಿದೆಯೆಂದು ಮನಗಾಣಲು ಒಂದು ಉದಾಹರಣೆಯನ್ನು ನೀಡಬಹುದು. ಸಾಮಾನ್ಯವಾಗಿ ಬಾಡಿಗೆ ಮನೆಯನ್ನು ಕೇಳಲು ಹೋದರೆ ಮೊದಲು ಜಾತಿಯನ್ನು ಕೇಳುವುದು ಪದ್ಧತಿ. ಒಂದು ಪಕ್ಷ ನಿಜ ಜಾತಿಯನ್ನು ಹೇಳಿದರೆ ಆಯಾ ಜಾತಿಯ ಜನರಿರುವ ಕಡೆ ಬಾಡಿಗೆ ಮನೆ ಪಡೆಯಲು ಸೂಚಿಸುತ್ತಾರೆ, ಒಂದು ವೇಳೆ ಸುಳ್ಳು ಹೇಳಿ ಮನೆ ಪಡೆದರೆ ಬಾಡಿಗೆ ಕೊಟ್ಟಿರುವ ಮನೆಯವರ ರೀತಿಯಲ್ಲಿಯೇ ಇದ್ದು ವರ್ತಿಸಬೇಕಾಗುತ್ತದೆ. ಇಂಥ ಇಕ್ಕಟ್ಟಿಗೆ ಸಿಕ್ಕಿ ಕೆಲವರು ಮಾಂಸವನ್ನು ತಿನ್ನುವುದು ಬಿಟ್ಟಿರುವುದು, ಜೊತೆಗೆ ಸುಳ್ಳುಗಳನ್ನೇ ಹೇಳಿ ಮನೆಗಳನ್ನು ಪಡೆದು ವಾಸಿಸುವುದು ವಾಡಿಕೆಯಾಗಿದೆ. ಇದಕ್ಕೆ ಸಂಬಂಧ ಪಟ್ಟಂತೆ ನನ್ನ ಅನುಭವದಲ್ಲಾದ ಘಟನೆಯನ್ನು ಇಲ್ಲಿ ವಿವರಿಸುವುದು ಸೂಕ್ತ.

ನನ್ನ ಸ್ನೇಹಿತ ಮಾಗಡಿ ರಸ್ತೆಯಲ್ಲಿರುವ ಬಸವೇಶ್ವರ ನಗರದಲ್ಲಿ ಒಂದು ಮನೆಯನ್ನು ಬಾಡಿಗೆಗೆ ಪಡೆದಿದ್ದ. ಮನೆಯ ಮಾಲೀಕರು ಯಾವ ಜಾತಿ ಎಂದು ಕೇಳದೆ ಮುಂಗಡ ಹಣ ಪಡೆದು ಛಾಪಾ ಕಾಗದದಲ್ಲಿ 11 ತಿಂಗಳ ಒಪ್ಪಂದ ಪತ್ರ ಬರೆಸಿಕೊಂಡು ಮನೆಯನ್ನು ಬಾಡಿಗೆಗೆ ಕೊಟ್ಟಿದ್ದರು. ಸ್ನೇಹಿತ ಮನೆಗೆ ಬಂದು ತನ್ನ ಸಂಸಾರವನ್ನು ಆರಂಭಿಸಿ ವಾಸಿಸ ತೊಡಗಿದ್ದ. ಊರಿನಿಂದ ಅವನ ಸಂಬಂಧಿಕರು ಬಂದು ಹೋಗುವುದು ವಾಡಿಕೆಯಾಯಿತು. ಭಾನುವಾರಗಳಲ್ಲಿ ಮಾಂಸವನ್ನು ತಂದು ಅಡುಗೆ ಮಾಡುವಾಗ ಮಾಲಿಕರು ವಾಸನೆ ಕಂಡು ಹಿಡಿದು ಇವರು ಮಾಂಸ ತಿನ್ನುತ್ತಾರೆಂದು ದ್ವೇಷಿಸಿ ಆ ಬೆಳಗಿನಿಂದಲೇ ನೀರು ಬಿಡುವುದನ್ನು ನಿಲ್ಲಿಸಿ, ಕೊಳವೆಯನ್ನು ಕಿತ್ತು ಹಾಕಿಸಿದರು. ಒಂದೆರಡು ದಿನಗಳಲ್ಲೇ ನಮಗೆ ಮನೆ ಬೇಕು ಖಾಲಿ ಮಾಡಿಕೊಡಿ ಎಂದು ಒತ್ತಾಯಿಸಿದರು. ಸ್ನೇಹಿತ ಇನ್ನೂ ಬಂದು ಸರಿಯಾಗಿ ಎರಡು ಮೂರು ವಾರ ಆಗಲಿಲ್ಲ ಹೀಗೆ ಖಾಲಿಮಾಡಿ ಅಂದ್ರೆ ಹೇಗೆ ಎಂದು ಪ್ರಶ್ನಿಸಿದಾಗ, ನೀವು ಕೀಳ್ ಜಾತಿಯವರು ಮಡ್ಡಿ ಮಾಂಸ ತಿನ್ನೋರು ಅದೂ ಅಲ್ಲದೇ ನಮಗೆ ಮನೆ ಬೇಕು ಎಂದುದಲ್ಲದೆ ಅವಾಚ್ಯ ಪದಗಳಿಂದ ಬಯ್ಯುವುದು, ಕರೆಂಟ್ ಕೂಡಾ ಕಟ್‌ಮಾಡಿ ಜಗಳಕ್ಕೆ ನಿಂತು ಅಕ್ಕ ಪಕ್ಕದ ಪುಂಡರನ್ನು ಎತ್ತಿಕಟ್ಟಿ ಸ್ನೇಹಿತನಿಗೆ ಪ್ರಾಣ ಬೆದರಿಕೆ ಹಾಕಿ ತಕ್ಷಣದಲ್ಲೇ ಮನೆ ಖಾಲಿ ಮಾಡಬೇಕೆಂದು ಒತ್ತಾಯಿಸಿದರು.

ಈ ಹಿನ್ನಲೆಯಲ್ಲಿ ಸ್ನೇಹಿತನ ಜೊತೆ ನಾನೂ ಸೇರಿ ಪೋಲೀಸ್ ಸ್ಟೇಷನ್‌ಗೆ ಹೋಗಿ ದೂರು ನಿಡಿದೆವು. ಸಂಬಂಧ ಪಟ್ಟ ಸರ್ಕಲ್ ಇನ್ಸ್‌ಪೆಕ್ಟರ್ ದೂರನ್ನು ದಾಖಲಿಸಿ ಕೊಳ್ಳದೆ ಸಾಯಂಕಾಲ ಆ ಮಾಲಿಕರನ್ನು ಕರೆಯಿಸಿ ಮಾತಾಡುತ್ತೇವೆಂದು ತಿರಸ್ಕಾರದಿಂದ ಹಿಂದಬ್ಬಿದರು. ಅಂದು ರಾತ್ರಿ ಯಥಾ ಪ್ರಕಾರ ಮಾಲಿಕರ ಹೆಂಡತಿ ಮಕ್ಕಳು ಅವಾಚ್ಯ ಪದಗಳಿಂದ ಜಾತಿ ನಿಂದನೆ ಮಾಡುತ್ತಾ ಬೈಯಲಾರಂಬಿಸಿದರು. ಆ ಕ್ಷಣದಲ್ಲೇ ಪೋಲೀಸರಿಗೆ ದೂರು ನೀಡಿ ಪೋಲೀಸರು ಬಂದು ಇಬ್ಬರನ್ನು ಕರೆಯಿಸಿ ವಿಚಾರಿಸಿದಾಗ ಮಾಲಿಕರ ಹಾಗೂ ಪೋಲೀಸ್ ಅಧಿಕಾರಿಗಳ ಜಾತಿ ಒಂದೇ ಎಂದೂ, ಅದರಲ್ಲೂ ಮಾಲೀಕರು ಪೋಲೀಸ್ ಅಧಿಕಾರಿಯವರಿಗೆ ಸಂಬಂಧಿಗಳೆಂದೂ ತಿಳಿದು ಬಂತು. ಪೋಲೀಸ್ ಅಧಿಕಾರಿಯೇ "ನೀನು ಯಾಕೊ ಜಾತಿ ಹೇಳದೆ ಬಾಡಿಗೆ ಮನೆ ಪಡೆದೆ?, ಅವರು ಸುಸಂಸತರು, ನಿಮ್ಮತರ ಹೊಲಸು ತಿನ್ನಲ್ಲ. ಇನ್ನೊಂದು ಮೂರು ತಿಂಗಳಲ್ಲಿ ಬೇರೆ ಮನೆ ಮಾಡಿಕೊ. ನಿನ್ನ ಮುಂಗಡ ಹಣ ವಾಪಸ್ಸು ಕೊಡಿಸುತ್ತೇನೆ" ಎಂದು ಒತ್ತಾಯ ಪೂರ್ವಕವಾಗಿ ಹೇಳಿದರು. "ಆಗಲ್ಲ ಸಾರ್ 11 ತಿಂಗಳ ನಂತರ ಕಾನೂನು ಪ್ರಕಾರ ಖಾಲಿ ಮಾಡುತ್ತೇವೆ" ಎಂದು ನಾನು ಹೇಳಿದೆ. ಪೋಲೀಸ್ ಅಧಿಕಾರಿ ನೀನು ಯಾರು ಮಧ್ಯವರ್ತಿ? ಇದು ಅವರಿಬ್ಬರಿಗೆ ಸಂಬಂಧಿಸಿದ್ದು ಇವನ ಪರ ವಹಿಸಿ ಬಂದಿದ್ದಿಯಾ? ಮನೆ ಮಾಲಿಕರಿಗೆ ಇಷ್ಟವಿಲ್ಲ ಎಂದ ಮ್ಯಾಲೆ ಖಾಲಿಮಾಡಬೇಕು, ಸುಮ್ನೆ ಹೋಗ್ರಿ ಎಂದು ಬೆದರಿಸಿ ಕಳಿಸಿದರು. ಹೀಗೆ ಎಲ್ಲಾ ಕಡೆ ಒಂದಲ್ಲ ಒಂದು ರೀತಿಯಲ್ಲಿ ನಿಮ್ನ ಜನಗಳು ಶೋಷಣೆಗೆ ಒಳಗಾಗಿರುವುದನ್ನು ಕಾಣಬಹುದು.

ಬಾಹ್ಯವಾಗಿ ನಗರಗಳಲ್ಲಿ ಅಶೃಷ್ಯತೆ ಇಲ್ಲವೆಂದು ಹೇಳಬಹುದು. ಆದರೂ ನಗರದಲ್ಲಿ ವ್ಯವಸ್ಥಿತವಾಗಿ ಜಾತಿ ಸಂಘಟನೆಗಳು ಬಲು ಮುತುವರ್ಜಿಯಿಂದ ಸಂಘಟಿಸಿರುವುದನ್ನು ಹೇರಳವಾಗಿ ಕಾಣಬಹುದು. ಇದರಿಂದ ತಮ್ಮ ಜಾತಿಯ ಜನರನ್ನು ಬಿಟ್ಟು ಉಳಿದ ಜಾತಿಯ ಜನರನ್ನು ದ್ವೇಷಿಸಲೆಂಬುದೇ ಮುಖ್ಯ ಉದ್ದೇಶ ಎಂಬುದನ್ನು ತಿಳಿಯಬಹುದು.

ಪ್ರತಿಯೊಂದು ಖಾಸಗಿ ಸಂಸ್ಥೆಗಳಾಗಲಿ, ಸರ್ಕಾರಿ ಕಛೇರಿಗಳಾಗಲಿ, ಅಥವಾ ಕಾರ್ಖಾನೆಗಳಾಗಲಿ ತಮ್ಮ ತಮ್ಮ ಜಾತಿಯ ಹಿತರಕ್ಷಣೆಯ ಅಂಗವಾಗಿ ಸಂಘಟನೆಗಳನ್ನು ಕಟ್ಟಿಕೊಂಡು, ಘೋಷಿಸಿಕೊಂಡು ಬರುತ್ತಿರುವುದನ್ನು ಕಾಣುತ್ತಿದ್ದೇವೆ. ಅಪರೂಪಕ್ಕೆ ಅಂತರ್‌ಜಾತಿಯ ವಿವಾಹ, ಮಿಶ್ರ ಬೋಜನಗಳನ್ನು ಬಿಟ್ಟರೆ ನಗರಗಳಲ್ಲೂ ಜಾತಿ ಭೇದ ಹಾಗೂ ಅಸ್ಪೃಷ್ಯತೆಯ ಪಿಡುಗು ಜನಜನಿತವಾಗಿ, ರಕ್ತಗತವಾಗಿ ಮುಂದುವರೆಯುತ್ತಿರುವುದನ್ನು ಕಾಣಬಹುದು.

ಪಂಜಿನಿಂದ ಎದೆಗೆ ತಿವಿದರು:

ಬೆಂಗಳೂರು ಗ್ರಾಮಾಂತರ ಪ್ರದೇಶಗಳಲ್ಲಿ ನಗರದಿಂದ ಕೇವಲ 25 ಕಿ.ಮೀ. ದೂರ ಹೋಗಿ ನೋಡಿದರೆ ಹೊಟೆಲ್‌ಗಳಲ್ಲಿ ಪ್ರತ್ಯೇಕ ಗ್ಲಾಸ್, ಪ್ಲೇಟ್‌ಗಳನ್ನು ಇಟ್ಟಿರುವುದು ಎದ್ದು ಕಾಣುತ್ತವೆ. ಅದೇ ರೀತಿ ದೇವಸ್ಥಾನಗಳಿಗೂ ಸೇರಿಸುವುದಿಲ್ಲ. ಬೆಂಗಳೂರಿನಿಂದ ನಮ್ಮೂರಿಗೆ ಕೇವಲ 25 ಕಿ.ಮೀ. ಅಂತರ, ನಮ್ಮೂರಿನ ಬಸವೇಶ್ವರ ದೇವಸ್ಥಾನದ ಲಿಂಗಾಯಿತ ಪೂಜಾರರು ಅಸ್ಪೃಷ್ಯರನ್ನು ಮುಟ್ಟುವುದಿಲ್ಲ. ಜೊತೆಗೆ ದಲಿತರ ಕೇರಿಗೆ ಕಾಲು ಇಡುವುದಿಲ್ಲ. ಅವರ ಜಮೀನಿನಲ್ಲಿ ಕೆಲಸ ಮಾಡಲು ಕೆಲಸಗಾರರನ್ನು ಕರೆಯಲು ಊರ ಹೊರಗಡೆನಿಂತು ಕರೆಯುವುದು ಇಂದೂ ಇದೆ. ಬೆಂಗಳೂರು ಗ್ರಾಮಾಂತರ ಪ್ರದೇಶದಲ್ಲಿಯೂ ಅಸ್ಪೃಷ್ಯತೆಯ ಪಿಡುಗನ್ನು ರಕ್ತಗತವಾಗಿ ಆಚರಿಸುತ್ತಿದ್ದಾರೆ.

ಒಮ್ಮೆ ಕನಕಪುರ ತಾಲ್ಲೂಕು ವಡೇರಹಳ್ಳಿಗೆ ಹೋಗಿದ್ದೆ. ಊರಹಬ್ಬ ಆಚರಿಸುತ್ತಿದ್ದರು, ಸುಮಾರು ನಾಲ್ಕೈದು ಹಳ್ಳಿಯ ಜನರು ಸೇರಿ ಆಚರಿಸುವ ಊರಹಬ್ಬ. ಅಲ್ಲಿನ ಅಸ್ಪೃಷ್ಯರು ಬಿಟ್ಟು ಉಳಿದ ಎಲ್ಲಾ ಜನಾಂಗದವರು ಎಳವಾರವನ್ನು ಕಟ್ಟಿ ಕೊಂಡಕ್ಕೆ ಸೌದೆಯನ್ನು ಒಯ್ದರು. ಬೆಳಗೆ ಕೊಂಡ ಹಾಯುವ ಮುಂಚೆ ಅಸ್ಪೃಷ್ಯರು ಪೂಜೆಮಾಡಬೇಕು, ಅನಂತರವೇ ಆ ಊರ ಮಾರಿ ಕೊಂಡ ಹಾಯುವುದು. ಇದಾದ ನಂತರ ನಾಲ್ಕೈದು ಊರ ಜನರ ಆರತಿಗಳನ್ನು ಮೆರವಣಿಗೆಯ ಸಮೇತ ದೇವಸ್ಥಾನದ ಒಳಗೆ ಇರಿಸಿ ಪೂಜೆ ಸಲ್ಲಿಸಿ ಹಿಂದಿರುಗುತ್ತಾರೆ. ಅವರೆಲ್ಲಾರು ಉಂಡಾದ ಮೇಲೆ ಅಲ್ಲಿನ ಅಸ್ಪೃಷ್ಯರು ಸಾಯಂಕಾಲ ತಮ್ಮ ಆರತಿಯನ್ನು ದೇವಸ್ಥಾನದ ಎದುರಿನ ಅಶ್ವಥ್‌ಕಟ್ಟೆಯ ಮೇಲಿಟ್ಟು ಪೂಜೆಗೈದು ಹಿಂದಿರುಗುತ್ತಾರೆ. ಇಲ್ಲಿ ಅಪ್ಪಿತಪ್ಪಿಯೂ ಪೂಜಾರರನ್ನು ಸೋಕಿಸಬಾರದು. ದೇವರಮೂರ್ತಿಗೆಂದು ಒಂದು ಹೂವಿನ ಹಾರವನ್ನು ಹಾಕಲು ಹೋದ ದಲಿತ ಯುವಕನನ್ನು ಪಂಜಿನಿಂದ ಎದೆಗೆ ತಿವಿದು ಹಲ್ಲೆಗೈದರು.

ನೀ ದೂರನಿಲ್ಲು ಕೀಳು ಜಾತಿಯವನೇ

ನಾಲ್ಕನೇ ತರಗತಿಯಲ್ಲಿ ಓದುತ್ತಿರುವಾಗ ನಮ್ಮ ಉಪಾಧ್ಯಾಯರ ಸಲಹೆಯಂತೆ ಗಣೇಶ ಚತುರ್ಥಿಗೆ ಸಡಗರ ಸಂಭ್ರಮದಿಂದ ಎಲ್ಲಾ ಸಿದ್ಧತೆಗಳನ್ನು ಉತ್ಸಾಹದಿಂದ ಸಿದ್ಧಗೊಳಿಸಿ ಊರಿನವರ ಮುಂದೆ ಹರ್ಷಮುಗ್ಧರಾಗಿ ಆಚರಿಸಲು, ಪೂಜೆಗೆ ವ್ಯವಸ್ಥೆಗೊಳಿಸುವಂತೆ ಪ್ರತಿಕೆಲಸವನ್ನು ನನ್ನಿಂದಲೇ ಮಾಡಿಸಿ ಪೂಜೆಯ ಸಮಯದಲ್ಲಿ ಉಪಾಧ್ಯಾಯರೇ "ಲೇ ನೀನು ದೂರ ನಿಲ್ಲು ಕೀಳು ಜಾತಿಯವನು" ಎಂದು ನನ್ನೆಲ್ಲಾ ಗೆಳೆಯರ, ಊರಿನ ಜನರೆದುರಿಗೆ ಬೆದರಿಸಿದ್ದರು. ಅಂದೇ ಬೆಪ್ಪನಂತೇ ಹಿಂದೆ ನಿಂತೆ. ಗಣೇಶನನ್ನು ಊರಿನ ಬೀದಿಗಳಲ್ಲಿ ಹೊತ್ತು ಮೆರೆಸಬೇಕೆಂದು ಕನಸು ಕಂಡವನು ಮೇಲ್ಜಾತಿಯರ ಹುಡುಗರು ಹೊತ್ತು ಮೆರೆಸಿದ್ದನ್ನು ನೋಡಿ ಅತ್ತು ಕೊಂಡಿದ್ದೆ. ಅಂದು ಅದ್ದೂರಿಯಾಗಿ ಆಚರಿಸಿದ ಮೇಲೆ ಶಾಲೆಯನ್ನೆಲ್ಲಾ ಸ್ವಚ್ಛ ಮಾಡಲು ಉಪಾಧ್ಯಾಯರು ಹೇಳಿ ನನ್ನ ಕೈಯಲ್ಲೇ ಮಾಡಿಸಿದರು.

ಕರಿಯನ ಕಲಿಕೆಯ ಕೊಲೆ

ನಮ್ಮೂರಿನ ನನ್ನ ಜೊತೆಯವನಾದ ದಲಿತ ಕರಿಯ ಶಾಲೆಗೆ ನನ್ನ ಜೊತೆಯಲ್ಲಿಯೇ

→

> ವಿಪ್ರ ಮೊದಲು ಅಂತ್ಯಜ ಕಡೆಯಾಗಿ
> ಶಿವಭಕ್ತರಾದವರೆಲ್ಲರನು
> ಒಂದೇ ಎಂದು ನಂಬುವುದೆನ್ನ
> ಮನವು
>
> ಬಸವಣ್ಣ

ಬರುತಿದ್ದ. ಅವನು ಓದುವುದಕ್ಕಿಂತ ಹೊಲ, ಮನೆಕೆಲಸಗಳಲ್ಲಿ ಬಲು ನಿಪುಣನಾಗಿದ್ದ. ಆ ವಯಸ್ಸಿಯನಲ್ಲೇ ನೇಗಿಲಿಡಿದು ಹೊಲ ಉಳುತಿದ್ದ. ಇದನ್ನೆಲ್ಲಾ ಗವುನಿಸಿದ ಉಪಾಧ್ಯಾಯರು ಕರಿಯನ ಅಪ್ಪನನ್ನು ಕರೆಸಿ ನಮ್ಮ ಮನೆಗೆ ಸಂಬಳಕ್ಕೆ ಕಳುಹಿಸು, ನಿನಗೆ ವರ್ಷಕ್ಕೆ 150 ರೂಪಾಯಿ ಕೊಡುತ್ತೇನೆಂದರು. ಆದರೆ ಕರಿಯನ ಅಪ್ಪ "ಬೇಡಿ ಸ್ವಾಮಿ ನನ್ನಂಗೆ ನಮ್ಮಗ ಅಗೋದು ಬೇಡ ನಾಲ್ಕಕ್ಷರ ಕಲಿತುಕೊಳ್ಳಲಿ ಆಮ್ಯಾಕೆ ನೋಡುವ" ಎಂದು ನಿರಾಕರಿಸಿದ. ಇದೇ ದ್ವೇಷದಿಂದ ಫ್ಯತಿ ಸಾರಿ ಅನುತ್ತೀರ್ಣಗೊಳಿಸಿ ಕರಿಯನ ವಿದ್ಯಾಭ್ಯಾಸ ಮುಟುಕುಗೊಳಿಸಿ, ಮನೆಗೆ ಹಿಂದಿರುಗಿಸಿದರು. ಆ ನನ್ನ ಗೆಳೆಯನು ಈಗ ಊರೂರಿಗೆ ಕೂಲಿಗಾಗಿ ಅಲೆಯುತ್ತಿದ್ದಾನೆ.

ಅಂದು ಉಗಾದಿ ಹಬ್ಬದ ದಿನವಾಗಿತ್ತು.

ಆಗತಾನೆ ಎಸ್.ಎಸ್.ಎಲ್.ಸಿ ಪರೀಕ್ಷೆ ಮುಗಿಸಿ ಮುಂದೆ ಕಾಲೇಜಿಗೆ ಸೇರಲು ಪ್ರಯತ್ನಿಸುತ್ತಿದ್ದೆ. ಹೈಸ್ಕೂಲು ಬೆಂಗಳೂರು ಹಾಸ್ಟೆಲ್‌ನಲ್ಲಿ ಓದಿದ್ದರಿಂದ ದಲಿತ ಸಂಘ ಸಂಸ್ಥೆಗಳ ಕಾಯಕರ್ತರು ನಿಲಯಗಳಿಗೆ ಬರುವುದು, ಹೋರಾಟದ ಹಾಡು ಹೇಳವುದು, ಭಾಷಣ ಮಾಡುವುದು, ಪುಸ್ತಕಗಳನ್ನು ಓದಲು ಕೊಡುವುದು, ಕೆಲವು ಸಲ ಪ್ರತಿಭಟನೆಗೆ ಕರೆದುಕೊಂಡು ಹೋಗುವುದು ವಾಡಿಕೆಯಾಗಿದ್ದರಿಂದ ಬಹಳ ಆಸಕ್ತಿಯಿಂದ ಈ ಜಾತಿ ತಾರತಮ್ಯದ ಬಗ್ಗೆ ಆಗಾಗ್ಗೆ ಚಿಂತಿಸುತ್ತಿದ್ದೆ. ವಿದ್ಯಾರ್ಥಿ ನಿಲಯಗಳಲ್ಲಿ ಅಡುಗೆ ಮಾಡುವವರನ್ನು, ಉಪಾಧ್ಯಾಯರನ್ನು ಪ್ರಶ್ನೆ ಕೇಳಿ ಬೈಯಿಸಿಕೊಳ್ಳುತ್ತಿದ್ದೆ. ಕೆಲಮೊಮ್ಮೆ ಜಾತಿಯ ಬಗ್ಗೆ ಅಲ್ಪಸ್ವಲ್ಪ ವಿವರ ಕೂಡ ನೀಡುತ್ತಿದ್ದರು. ಇದರ ಪರಿಣಾಮವಾಗಿ ನಮ್ಮೂರಿನಲ್ಲಿ ಮೇಲ್ಜಾತಿಯ ಜನರನ್ನು ಕಂಡರೆ ದ್ವೇಷ ಕುದಿಯುತ್ತಿತ್ತು. ನಮ್ಮೂರಿನ ಪುಟ್ಟ ಕೆನರಾ ಬ್ಯಾಂಕ್‌ನಿಂದ ಸಾಲ ಪಡೆದು ಧ್ವನಿವರ್ಧಕ(ಮೈಕ್‌ಸೆಟ್) ತೆಗೆದುಕೊಂಡಿದ್ದ. ನಮ್ಮೂರ ಪಟೇಲರು ಪುಟ್ಟನನ್ನು ಕರೆಸಿ ಇವತ್ತು ಬಸವಣ್ಣ(ದೇವರು) ಎಲ್ಲೆ ಪೂಜೆ ಇದೆ ರೇಡಿಯೋ ಹಾಕೋ ಎಂದಿದ್ದರು. ಪುಟ್ಟ ನಾನು ಸೇರಿ ಸಂತೋಷದಿಂದ ಮೈಕ್‌ಸೆಟ್ ಹಾಕಲು ದೇವಸ್ಥಾನದ ಎದುರಿಗೆ ಮರಕ್ಕೆ ಹಾರನ್ ಕಟ್ಟಿ ಆಂಪ್ಲಿಫಯರ್‌ನ್ನು ದೇವಸ್ಥಾನದ ಪಡೆಸಾಲೆಯಲ್ಲಿಡಲು ಹೋದಾಗ, ದೇವಸ್ಥಾನದ ಪೂಜಾರಿ ಅವಕಾಶ ಕೊಡದೆ ಮತದ ಕೆಳಗೆ ಮಡಗಿಕೊಳ್ಳಿ ಎಂದರು. ಇದನ್ನು ನಿರಾಕರಿಸಿದ ನಾನು ಪಡಸಾಲೆಯಲ್ಲಿ ಜಾಗಕೊಟ್ಟರೆ ಮಾತ್ರ ಹಾಕುವುದೆಂದು ಹೂಂಕರಿಸಿದ್ದೆ. ಅದೇ ಸರಿ, ಊರ ಎಲ್ಲಾ ಜನ ಸೇರಿದ್ದೇ "ಲೇ ಹೊಲೆಯ, ಎಷ್ಟೋ ನಿನಗೆ ಅಹಂಕಾರ ನಾಲ್ಕು ಅಕ್ಷರ ಕಲಿತುಬಿಟ್ಟೇದೀನಿ ಅಂತ" ಎಂದು ಎರಗಿದರು. ಊರ ಯಜಮಾನ್ರು ಮುಂದೆ ಬಂದು " ಹೋಗೋ ಲೇ ನಮ್ಮ ಮನೆ ಕ್ವಾಣೆಗೆ ಹೋಗಿ ನೀರು ಕುಡಿದು ಬಾ, ಗುಡಿ ಒಳಕ್ಕೆ ಬಿಡುತ್ತೀನಿ" ಎಂದರು ನಾನು ಜಗ್ಗದೇ ಗೌಡ್ರು ಹಟ್ಟಿ ಬಾಗಲ ಕಡೆ ಹೆಜ್ಜೆ ಹಾಕಲು, ಹಿಂದಿನಿಂದ ಬಂದು ನಮ್ಮಪ್ಪ ಉಳ್ಳಹಗ್ಗದಿಂದ ಬೆನ್ನಿನ ಮೇಲೆ ಹೊಡೆದರು. ಆಯ್ಯೋ ಎಂದು ಚೀರುತ್ತಾ ಹಿಂದೆ ತಿರುಗಿದಾಗ ಅಪ್ಪನ ಕಣ್ಣಿಂದ ನೀರು ಸುರಿಯಲಾರಂಬಿಸಿತು. "ಲೇ ಮಗನೆ ನಾವು ಭೂಮಿಮ್ಯಾಲೆ ಇರಬೇಕೊ ಬ್ಯಾಡವೋ? ಯಾಕೆ ಇಂಗೆ ಹೊಟ್ಟೆ ಉರಿಸುತ್ತಿ ಎಲ್ಲಾದರೂ ಹೊಂಟೊಗೊ" ನನ್ನ ರಟ್ಟೆ ಹಿಡಿದು ಮನೆಗೆ ಕರೆ ತಂದು ಇಡೀ ದಿನ ಅಪ್ಪ ಅಮ್ಮ ಊಟ ಮಾಡದೆ, ಊರಿನ ಮೇಲ್ಜಾತಿಯ ಜನಕ್ಕೆ ಹೆದರಿ ಬೆಂಡಾಗಿದ್ದರು. ಅಂದು ಉಗಾದಿ ಹಬ್ಬದ ದಿನವಾಗಿತು.

ಬಿ.ರಾಜಶೇಖರಮೂರ್ತಿ



ಅಸ್ಪೃಶ್ಯತೆಯ ವಿರುದ್ಧ ಮಹಿಳೆಯರು

"ನಾವು ಅವರ ನೆಲ ಗುಡಿಸುತ್ತೇವೆ, ಅವರು ಹಾಕಿದ ಕಸ ಗುಡಿಸಿ ಸ್ವಚ್ಛ ಮಾಡುತ್ತೇವೆ. ಆದರೆ ನಾವು ಮಾತ್ರ ಅವರಿಗೆ ಅಸ್ಪೃಶ್ಯರು, ಅಶುದ್ಧರು ಅವರ ಮನೆಗಳಲ್ಲಿ ಒಂದು ಲೋಟ ನೀರೂ ಕುಡಿಯಲು ಬಿಡುವುದಿಲ್ಲ.......... ಇನ್ನು ಇದು ಸಾಕೋ ಸಾಕು. ದಲಿತ ಮಹಿಳೆಯರು ಬೇರೆ ಮಹಿಳೆಯರೊಂದಿಗೆ ಸೇರಿಕೊಂಡು ಈ ಅವಮಾನದ ವಿರುದ್ಧ ಹೋರಾಡಬೇಕಾದ ಸಮಯ ಬಂದಿದೆ.

- ಬನ್ನೋದೇವಿ

ಲಕ್ನೌನ ಒಬ್ಬ ಚರಂಡಿ ಕೆಲಸ ಮಾಡುವ ಮಹಿಳೆ.

"ನಾನು ನೆರಮನೆಯುವರೊಟ್ಟಿಗೆ ಪೋಲೀಸ್ ಸ್ಟೇಶನ್ನಿಗೆ ಹೋಗಿ ಕಳ್ಳಬಟ್ಟಿ ತಯಾರಿಸುವವರು ನಮ್ಮ ಏರಿಯಾದಲ್ಲಿ ಕಳ್ಳಶರಾಬು ಸಪ್ಲೆ ಮಾಡುತ್ತಿದ್ದಾರೆ ಎಂದು ಕಂಪ್ಲೇಂಟ್ ಮಾಡಿದಾಗ, ಪೋಲೀಸರು ನವ್ಮ ಹುಡುಗರ ಮೇಲೆ ಕಳ್ಳತನ, ಡಕಾಯಿತಿಯ ಸುಳ್ಳು ಕೇಸು ಹಾಕಿ ಹೊಡೆದರು. ದಲಿತರು ಕುಡುಕರಾಗಿರಬೇಕು, ಇದರಲ್ಲಿ ಕಂಪ್ಲೆಂಟ್ ಮಾಡೋದೇನಿದೆ - ಇದು ಪೋಲಿಸರ ಮಾತು. ಇದರಿಂದಾಗಿ ನವ್ಮ ಗಂಡಸರೆಲ್ಲಾ ಕುಡುಕರಾಗಿದ್ದಾರೆ. ಪೋಲೀಸರು ಕಳ್ಳ ಬಟ್ಟಿಯವರೊಂದಿಗೆ ಸರಸ ನಡೆಸುತ್ತಾರೆ

- ಪುಷ್ಪಾ ರಾವತ್

ಲಕ್ನೌನ ದಲಿತ ಬಸ್ತಿಯಲ್ಲಿನ ಒಬ್ಬ ಮಹಿಳೆ

ನಮ್ಮೂರು ಠಾಕೂರ್‌ಗಳ ಹಳ್ಳಿ. ಹೆಚ್ಚಿನ ಗಂಡಸರು ನಗರಗಳಲ್ಲಿ ಕೆಲಸ ಮಾಡುತ್ತಾರೆ. ಈ ಠಾಕೂರ್‌ಗಳಿಗೆ ತಮ್ಮ ಗದ್ದೆಗಳಲ್ಲಿ ಕೆಲಸ ಮಾಡುವವರು ಬೇಕಾದಾಗ ನಮ್ಮ ದಲಿತ ಮಹಿಳೆಯರ ಮೇಲೆ ಒತ್ತಡ ಹಾಕುತ್ತಾರೆ, ಪುಡಿಗಾಸು ಕೊಟ್ಟು ದುಡಿಸುತ್ತಾರೆ. ಒಲ್ಲೆ ಎಂದರೆ ಬಡಿಯುತ್ತಾರೆ. ಒಳ್ಳೆ ಬಟ್ಟೆ ಹಾಕಿಕೊಂಡರೆ ಕಳ್ಳಿ ಎನ್ನುತ್ತಾರೆ. ನವ್ಮ ಮನೆಗಳಿಗೆ ಬಾಗಿಲೂ ಹಾಕಿ ಕೊಳ್ಳಬಾರದಂತೆ! "ನಿಮ್ಮಲ್ಲಿ ಅಡಗಿಸಿಡುವಂತದ್ದೇನಿದೆ?" - ಇದು ಆ ಠಾಕೂರ್‌ಗಳ ಪ್ರಶ್ನೆ.

- ರಾಮದುಲಾರಿ

ಲಕ್ನೌ ಬಳಿಯ ಶತ್ವಾರಾ ಗ್ರಾಮವಾಸಿ ಮಹಿಳೆ.

ಜನವರಿ 20 ರ ದಿನ. ತರಕಾರಿ ತರಲಿಕ್ಕೆ ಹೋಗಿದ್ದೆ, ಮೂವರು ಠಾಕೂರರು ನನ್ನನ್ನು ಜಬರ್ ದಸ್ತಿ ಎತ್ತಿಕೊಂಡು ಹೋದರು. ಒಬ್ಬರಾದ ಮೇಲೊಬ್ಬರು ಅತ್ಯಾಚಾರ ನಡೆಸಿದರು. ದೂರು ಕೊಡ್ಲಿಕ್ಕೆ ಪೋಲೀಸ್‌ಸ್ಟೇಶನ್‌ಗೆ ಹೋದಾಗ 500 ರೂ. ತಾ, ಒಂದು ರಾತ್ರಿ ಪೋಲೀಸ್ ಸ್ಟೇಷನ್ನಿನಲ್ಲಿ ಮಲಗು ಎಂದರು. ವೈದ್ಯಕೀಯ ತಪಾಸಣೆಗೆ ಸರ್ಕಾರಿ ಆಸ್ಪತ್ರೆಗೆ ಹೋದಾಗ ಲೇಡಿ ಡಾಕ್ಟರರಿಗೆ ಕೊಡಲು ದುಡ್ಡಿಲ್ಲ ಅಂತ ಮಂಚದಿಂದ ಕೆಳಕ್ಕೆ ನೂಕಿದರು. ಜನವಾದಿ ಮಹಿಳಾ ಸಂಘಟನೆ ಮಧ್ಯಪ್ರವೇಶ ನಡೆಸಿದ ಮೇಲೆಯೇ ಎಫ್.ಐ.ಆರ್. ದಾಖಲು ಮಾಡಿದ್ದು, ಒಬ್ಬ ಅತ್ಯಾಚಾರಿ ಜೈಲಿಗೂ ಹೋದ. ಜೈಲಿನಿಂದ ಸಂದೇಶ ಬಂದಿದೆ. ಅವನು ಜೈಲಿನಿಂದ ಹೊರಬಂದ ದಿನ ನನ್ನ ಜೀವನದ ಕೊನೆಯ ದಿನವಾಗುತ್ತದಂತೆ.

- ಲಕ್ನೌ ಬಳಿಯ ಇನ್ನೊಂದು ಗ್ರಾಮ ಮಾತಿಯ ಮಹಿಳೆ

ಶಾಂತಿದೇವಿ

ಇವು ಸ್ವಲ್ಪ ಸಮಯ ದಲಿತ ಮಹಿಳೆಯನ್ನು ಮುಖ್ಯಮಂತ್ರಿಯಾಗಿಯೂ ಕಂಡ ಉತ್ತರ ಪ್ರದೇಶದ ರಾಜಧಾನಿ ಲಕ್ನೌ ಮತ್ತು ಸುತ್ತಮುತ್ತಲಿನ ಮಹಿಳೆಯರ ಅನುಭವಗಳು - ಇತ್ತೀಚೆಗೆ ಲಕ್ನೌನಲ್ಲಿ ಜನವಾದಿ ಮಹಿಳಾ ಸಂಘಟನೆ ಅಸ್ಪೃಶ್ಯತೆ, ದಮನದ ಬಗ್ಗೆ ಏರ್ಪಡಿಸಿದ್ದ ದಲಿತ ಮಹಿಳೆಯರ ಸಮಾವೇಶದಲ್ಲಿ ಭಾಗವಹಿಸಿದ ಮಹಿಳೆಯರು ವೇದಿಕೆಯ ಮೇಲೆ ಬಂದು ತೋಡಿಕೊಂಡ ಸಂಗತಿಗಳು. "ದಲಿತ ಮಹಿಳೆಯರ ಜೀವನದ ವಾಸ್ತವತೆ ಮತ್ತು ಮಹಿಳಾ ಆಂದೋಲನದ ಹೊಣೆ' - ಈ ಸಮಾವೇಶದ ಚರ್ಚಾ ವಿಷಯವಾಗಿತ್ತು.

ದಲಿತ ಮಹಿಳೆಯರು ಮೂರು ರೀತಿಯ ದಮನ ಎದುರಿಸುತ್ತಾರೆ - ದಲಿತರಾಗಿ, ಬಡ ಕೆಲಸಗಾರರಾಗಿ ಹಾಗೂ ಪಿತೃಪ್ರಧಾನ ಸಮಾಜವ್ಯವಸ್ಥೆಯಲ್ಲಿ ಲೈಂಗಿಕ ಕಿರುಕುಳ - ಇದು ಐಪಿಎಸ್ ಅಧಿಕಾರಿಯಾಗಿದ್ದ ಹಾಗೂ ಅಮೆರಿಕಾ ಸಂಯುಕ್ತ ಸಂಸ್ಥಾನಗಳಲ್ಲಿನ ಅಂಬೇಡ್ಕರ್ ಮಹಾ ಸಭಾದ ಅಧ್ಯಕ್ಷ ಧಾಪುಲೆಯವರು ಮುಂದಿಟ್ಟ ವಿಶ್ಲೇಷಣೆ.

ದಲಿತ ಮಹಿಳೆಯರ ಸಮಸ್ಯೆಗಳು ಮತ್ತು ಶೋಷಣೆಗಳನ್ನು ನಿರ್ದಿಷ್ಟವಾಗಿ ಎದುರಿಸಬೇಕು. ಒಟ್ಟಾರೆಯಾಗಿ ಮಹಿಳೆಯರ ಶೋಷಣೆಯ ಬಗ್ಗೆ ಮಾತಾಡಿ ಇದರಿಂದ ತಪ್ಪಿಸಿಕೊಳ್ಳಲು ಸಾಧ್ಯವಿಲ್ಲ. ಮಹಿಳೆಯರ ಹೋರಾಟ ಸಮಾನತೆಗಾಗಿ - ಆದ್ದರಿಂದ ಅತ್ಯಂತ ಅಸಮಾನರಾಗಿರುವವರ ಹೋರಾಟವನ್ನು ಅದು ಉಪೇಕ್ಷಿಸಲು ಸಾಧ್ಯವಿಲ್ಲ - ಹೀಗೆಂದವರು ಸುಭಾಷಿಣಿ ಅಲಿ, ಮಾಜಿ ಸಂಸತ್ ಸದಸ್ಯೆ ಹಾಗೂ ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆಯ ಮುಖಂಡರು.

ಉತ್ತರ ಭಾರತದಲ್ಲಿ ದಲಿತಮಹಿಳೆ

ಇದಕ್ಕೆ ಮೂರು ತಿಂಗಳ ಹಿಂದೆ ಡಿಸೆಂಬರ್‌ನಲ್ಲಿ ಇದೇ ಸಂಘಟನೆ ನವದೆಹಲಿಯಲ್ಲಿ ಒಂದು ಬೃಹತ್ ಅಸ್ಪೃಶ್ಯತಾ-ವಿರೋಧಿ, ದಲಿತರ ದಮನ- ವಿರೋಧಿ ಸಮಾವೇಶವನ್ನು ನಡೆಸಿತ್ತು. ಉತ್ತರ ಪ್ರದೇಶ, ಮಧ್ಯ ಪ್ರದೇಶ, ಹರ್‍ಯಾಣ, ಪಂಜಾಬ್, ದಿಲ್ಲಿ, ರಾಜಸ್ತಾನ ಹಾಗೂ ಬಿಹಾರ್ - ಈ ಉತ್ತರ ಭಾರತದ ರಾಜ್ಯಗಳ ಸುಮಾರು 900 ಮಹಿಳೆಯರು ಇದರಲ್ಲಿ ಭಾಗವಹಿಸಿದ್ದರು. ಉತ್ತರ ಪ್ರದೇಶದ ಒಬ್ಬ ಎಐಡಿಡಬ್ಲ್ಯುಎ ಮುಖಂಡಳೂ ಸ್ವತಃ ದಲಿತಳೂ ಆದ ನಿರ್ಮಲಾದೇವಿ ಈ ಸಮಾವೇಶದ ಉದ್ಘಾಟನೆ ನಡೆಸಿದ್ದು ವಿಶೇಷ. ಈಕೆ ಅಂಗನವಾಡಿ ಕಾರ್ಯಕರ್ತೆ. ಮಹಿಳಾ ಎಸ್.ಸಿ. ಮೀಸಲಾತಿ ಕ್ಷೇತ್ರದಿಂದ ಅತೀ ಹೆಚ್ಚು ಮತಗಳಿಂದ ಜಿಲ್ಲಾ ಪರಿಷತ್ ಸದಸ್ಯಳಾಗಿ ಚುನಾಯಿತಳಾದಾಕೆ. ತಾನು 'ಭಿನ್ನ' ಎಂದು ಮೊದಲ ಬಾರಿಗೆ ಅರಿವಿಗೆ ಬಂದ ಘಟನೆಯನ್ನು ಆಕೆ ಹೀಗೆ ಹೇಳಿದರು.

"ಶಾಲೆಯಲ್ಲಿ ಪೂಜೆ ನಡೆಯಲಿತ್ತು. ನಾನು ನನ್ನ ಗೆಳತಿಯೊಡನೆ ಅದಕ್ಕೆ ಹೂವು ಸಂಗ್ರಹಿಸಿ ಕೊಟ್ಟಿದ್ದೆ. ಆದರೆ ನಮ್ಮ ಟೀಚರ್ ಅದನ್ನು ತಗೊಳ್ಳಲಿಲ್ಲ - ನಾನು ಹೂ ಅರ್ಪಿಸಿದರೆ ದೇವರಿಗೆ ಸಿಟ್ಟು ಬರುತ್ತದಂತೆ!"

ಈಗ ಸಮಯ ಬದಲಾಗುತ್ತಿದೆ. ಒಬ್ಬ ದಲಿತ ಮಹಿಳೆ ಮಹಿಳಾ ಸಂಘಟನೆಯ ಒಬ್ಬ ಪ್ರಮುಖ ಕಾರ್ಯಕರ್ತೆಯಾಗಿರುವುದು ಕಂಡ ಹಲವರು ಆಶ್ಚರ್ಯ ವ್ಯಕ್ತಪಡಿಸಿದ್ದಾರಂತೆ.

ಈ ಸಮಾವೇಶದಲ್ಲಿ ಭಾಗವಹಿಸಿದ ಮಹಿಳೆಯರ ಮಾತುಗಳಿಂದ ಕಂಡು ಬಂದ ಪ್ರಮುಖ ಅಂಶವೆಂದರೆ ಉತ್ತರ ಪ್ರದೇಶದಲ್ಲಿ ಕೃಷಿಕೂಲಿಕಾರರಾಗಲಿ, ದಿಲ್ಲಿಯ ಭವ್ಯ ಬಂಗಲೆಗಳಲ್ಲಿ ಮನೆ ಗೆಲಸದವರಾಗಿರಲಿ ದಲಿತ ಮಹಿಳೆಯರು ಎದುರಿಸುತ್ತಿರುವ ತೀವ್ರ ಆರ್ಥಿಕ ಶೋಷಣೆಗೆ ಸಾಮಾಜಿಕ ಪಕ್ಷಪಾತ ಮತ್ತು ದಮನ ರಕ್ಷಣೆ ಒದಗಿಸುತ್ತಿದೆ ಎಂಬುದು.

"*ಕೃಷಿ ಕೂಲಿಗೆ ಗಂಡಸರಿಗೆ 25 ರೂ. ಕೊಡುತ್ತಿದ್ದರು. ನಮಗೆ 15 ರೂ. ಬನಾರಸದ ರಾಜನ ಸಾವಿರಾರು ಎಕರೆ ನಿಜವಾಗಿ ನಮ್ಮದೇ ಭೂಮಿ ಎಂದು ಗೊತ್ತಾಗುವವರೆಗೆ ಅಲ್ಲಿಯೇ ಅರ್ಧ ಕೂಲಿಗೆ ದುಡಿಯುತ್ತಿದ್ದೆವು*" ಎಂದಳು ಉತ್ತರ ಪ್ರದೇಶದ ನಿರ್ಮಲ. ಬನಾರಸದ ರಾಜ ಡಾ. ವಿಭೂತಿ ನಾರಾಯಣ್ ದಲಿತ ಕುಟುಂಬಗಳಿಂದ ಒತ್ತುವರಿ ಮಾಡಿದ ಸಾವಿರಾರು ಎಕರೆ ಜಮೀನನ್ನು ಮರಳಿ ಪಡೆಯಲು ನಡೆದ ಧೀರ ಹೋರಾಟಕ್ಕೆ ನೇತೃತ್ವ ನೀಡಿದವಳೀಕೆ.

"ಒಂದು ಕೊಡ ನೀರಿಗಾಗಿ ದಲಿತ ಮಹಿಳೆಯರು ಮೇಲ್ಜಾತಿ ಮಹಿಳೆಯರಿಗೆ ಧಾನ್ಯ ಶುಚಿಗೊಳಿಸುವುದು, ಬಟ್ಟೆ ಒಣಗಿಸುವುದು ಇತ್ಯಾದಿ ಕೆಲಸಗಳನ್ನು ಬಿಟ್ಟಿಯಾಗಿ ಕೆಲಸ ಮಾಡುವ ಪದ್ಧತಿ ಹರ್‍ಯಾಣದಲ್ಲಿ ಇದೆ" ಎಂದಳು ಹರ್‍ಯಾಣದ ಬಿಮಲಾ.

''ಮೇಲ್ಜಾತಿ ಹೆಂಗಸರು ದಲಿತ ಹೆಂಗಸರಿಂದ ಕೆಲಸ ಮಾಡಿಸಿಕೊಳ್ಳಲು ಹಿಂಜರಿಯುವುದಿಲ್ಲ. ಆದರೆ ನಮ್ಮನ್ನು ಮಾತ್ರ ದೂರವಿಡುತ್ತಾರೆ. ..... ಬಾಬ್ರಿ ಮಸೀದಿ ವಿಷಯದಲ್ಲಿ ಹಿಂದೂಗಳೆಲ್ಲಾ ಒಂದಾಗಬೇಕು ಎನ್ನುವ ಬಿಜೆಪಿಯ ಕಾರ್ಪೋರೇಟರನ ಮನೆಗೆ ಹೋದಾಗ ಆತನ ಆಫೀಸಿನ ಕುರ್ಚಿಯ ಮೇಲೆ ನಾವು ಕೂತದ್ದು ಕಂಡು ಆತನಿಗೆ ಸಹಿಸಲಾಗಲಿಲ್ಲ" ಎಂದಳು ದಿಲ್ಲಿಯ ಬಾರ್ಪಿದೇವಿ.

"ದಲಿತ ಹೆಂಗಸರು ಕುಡಿಯುವ ನೀರಿಗಾಗಿ ಮೈಲಿಗಟ್ಟಲೆ ನಡೆಯಬೇಕು. ಏಕೆಂದರೆ ಸಾರ್ವಜನಿಕ ನಲ್ಲಿಗಳಲ್ಲಿ ಮೇಲ್ಜಾತಿ ಹೆಂಗಸರದ್ದೇ ದರ್ಬಾರು. ಎಷ್ಟೆಂದರೆ ದಲಿತರಿಗೆಂದು ಹಾಕಿರುವ ಕೆಲವೇ ನಲ್ಲಿಗಳನ್ನು ಮತ್ತೆ-ಮತ್ತೆ ತೊಳೆದು ಮೇಲ್ಜಾತಿಯವರೇ ಬಳಸುತ್ತಾರೆ. ದಲಿತರಿಗೆ ಬಿಡುವುದಿಲ್ಲ" ಇದು ಪಾಣಿಪತದ ಕಾಶೋರಾಣಿಯ ಅಹವಾಲು.

ಸ್ನಾನಕ್ಕೆ, ಶೌಚಕ್ಕೆ ಸರಿಯಾಗಿ ಅನುಕೂಲ ಇಲ್ಲದಿರುವುದು ದಲಿತ ಮಹಿಳೆಯರ ಅತಿದೊಡ್ಡ ಸಮಸ್ಯೆ, ಅವರ ಮೇಲಿನ ಅತ್ಯಾಚಾರಗಳಿಗೆ ಅವಕಾಶ ಮಾಡಿಕೊಡುವ ಸಮಸ್ಯೆ. ಶೌಚಕ್ಕೆಂದು ನಿರ್ವಾಹವಿಲ್ಲದೆ ಮೇಲ್ಜಾತಿಯವರ ಹೊಲಕ್ಕೆ ಹೋದ ದಲಿತ ಹುಡಿಗಿಯ ಮೇಲೆ ಅತ್ಯಾಚಾರ ನಡೆಸಿದ್ದನ್ನು ಪ್ರತಿಭಟಿಸಿದಾಗ ಆಕೆ ಆ ಹೊಲಕ್ಕೆ ಏಕೆ ಹೋಗಬೇಕಿತ್ತು ಎಂದೇ ಪ್ರಶ್ನಿಸಲಾಯಿತು ಎಂದರು ಹರ್‍ಯಾಣದ ಇನ್ನೊಬ್ಬ ಪ್ರತಿನಿಧಿ.

ಪೋಲೀಸರು ಈಗ ಕಿವಿಗೊಡುತ್ತಾರೆ!

ಹೀಗೆ ಉತ್ತರ ಭಾರತದ ವಿವಿಧ ಭಾಗಗಳಿಂದ ಬಂದ ಮಹಿಳೆಯರು ತಮ್ಮ ಅನುಭವಗಳನ್ನು ತೋಡಿಕೊಳ್ಳುತ್ತಿದ್ದಾಗ ಒಬ್ಬ ದಲಿತ ಹುಡುಗಿ ಅಂದು ಇದ್ದಕ್ಕಿದ್ದಂತೆ ವೇದಿಕೆಯ ಮೇಲೆ ಬಂದು ಕೇಳಿದಳು ***"ನಿಮಗೆ ಯಾರಿಗಾದರೂ ಸಂಘಟನೆಯ ಭಾಗವಾಗಿದ್ದರಿಂದ ಪ್ರಯೋಜನವಾಗಿದೆಯೇ?"*** ಪ್ರತಿನಿಧಿಗಳೆಲ್ಲಾ ಅವಾಕ್ಕಾದರು - ಒಂದು ನಿಮಿಷ ಎಲ್ಲಾ ಸ್ತಬ್ಧ ಇದ್ದಕ್ಕಿದ್ದಂತೆ ಹಲವು ದನಿಗಳು ಕೇಳಿಬಂದವು "ಖಂಡಿತಾ ಆಗಿದೆ, ಸಂಘಟನೆಯಿಲ್ಲದಿದ್ದರೆ ನಾವೆಲ್ಲಿ?"

ಒಬ್ಬಾಕೆಯಂತೂ ವೇದಿಕೆಗೇ ಬಂದಳು - "ನಾನು ಹೇಳುತ್ತೇನೆ-ಸಂಘಟನೆಯಿಲ್ಲದಿದ್ದರೆ ನಾನು ಮನೆಯಿಂದ ಹೊರ ಬಂದು ನನ್ನ ಹಕ್ಕುಗಳಿಗಾಗಿ ಹೋರಾಡ ಬೇಕೆಂಬ ಯೋಚನೆಯೇ ಬರುತ್ತಿರಲಿಲ್ಲ. ಎಲ್ಲವನ್ನು ತಲೆ ಬಾಗಿಸಿ ಒಪ್ಪಿಕೊಳ್ಳುತ್ತಿದ್ದೆ. ಈಗ ಪೋಲೀಸರೂ ನನ್ನ ಮಾತಿಗೆ ಕಿವಿಗೊಡುತ್ತಾರೆ"

ನಂತರ ಮಾತನಾಡಿದ ಪಶ್ಚಿಮ ಬಂಗಾಳದ ಸಂಸತ್ ಸದಸ್ಯೆ ಸಂಧ್ಯಾ ಭಾಪ್ರಿಯವರ ಮಾತು ಈ ಸಮಾವೇಶದ ಚರ್ಚೆಗೆ ಇನ್ನೊಂದು ಆಯಾಮ ನೀಡಿತು. **ಉತ್ತರ ಭಾರತದಲ್ಲಿ ಕಾಣಬರುವ ಮೇಲೆ ಹೇಳಿದ ಚಿತ್ರಗಳು ಪಶ್ಚಿಮ ಬಂಗಾಳದಲ್ಲಿ ಕಾಣುವುದಿಲ್ಲ ಏಕೆ?** ಏಕೆಂದರೆ ಸಮಗ್ರ ಭೂಸುಧಾರಣೆಯಿಂದ ದಲಿತರಿಗೆ ಪ್ರಯೋಜನವಾಗಿದೆ. ಯಾವ ಮೇಲ್ಜಾತಿಯವನೂ ದಲಿತರನ್ನು ಉತ್ತರ ಭಾರತದ ಇತರ ಕಡೆಗಳಲ್ಲಿ ಕಾಣುವಂತೆ ಕಾಣುವ ಧೈರ್ಯ ತೋರಲಾರ ಎಂದರು ಸಂಧ್ಯಾ.

ಈ ಸಮಾವೇಶದ ಒಟ್ಟು ತೀರ್ಮಾನವೆಂದರೆ ಅಸ್ಪೃಶ್ಯತೆಯಂತಹ ಸಾಮಾಜಿಕ ಪಕ್ಷಪಾತಗಳು ವರ್ಗ ಮತ್ತು ಲೈಂಗಿಕ ಶೋಷಣೆಯನ್ನು, ಇನ್ನಷ್ಟು ಕ್ಲಿಷ್ಟಗೊಳಿಸಿರುವುದಷ್ಟೇ ಅಲ್ಲ, ಅಸ್ಪೃಶ್ಯತೆಯಂತಹ ಪದ್ಧತಿಗಳನ್ನು ಬಳಸಿ ವರ್ಗ ಮತ್ತು ಲೈಂಗಿಕ ಶೋಷಣೆಯನ್ನು ಇನ್ನಷ್ಟು ಗಟ್ಟಿಗೊಳಿಸಲಾಗುತ್ತಿದೆ. ಆದ್ದರಿಂದಲೇ 'ಅಸ್ಪೃಶ್ಯತೆಯ ವಿರುದ್ಧ ಜಾತಿ ಪದ್ದತಿಯ ವಿರುದ್ಧ ಮತ್ತು ವರ್ಗ ಹಾಗೂ ಸಾಮಾಜಿಕ ಶೋಷಣೆಯ ವಿರುದ್ಧ ಮಹಿಳಾ ಐಕ್ಯತೆಯಲ್ಲಿ ನಮಗೆ ನಂಬಿಕೆಯಿದೆ' ಎಂದು ಈ ಸಮಾವೇಶ ಸಾರಿತು.

ಹರಿಜನರು

ಆಗೆರ ಸೋಮೂ
ಮುಕ್ರೀ ಓಮೂ
ಹಳ್ಳೆರ ಖೇಮೂ ಹರಿಜನರೋ
ಹಗಲೂ ಇರುಳೂ
ಬೆಳಗೂ ಬೈಗೂ
ದುಡಿದೂ ಹೊಟ್ಟೆಗೆ
ಸಿಗದವರೋ!

ಕೂಲಿಯ ಕೆಲಸಾ
ಇಲ್ಲದ ದಿವಸಾ
ಉರದಲಿ ತಾಪಾ ಉಪವಾಸಾ!
'ಯಾಕೋ ಕದ್ದೆ?
ಹೊಟ್ಟೆಗೆ ತಿಂದೆ'
ಎನ್ನುವ ಜಾಣರಿಗಾವೇಶಾ.

ಗುಡಿಸಲು ಭೂಮಿ
ಒಡೆಯರು ಸ್ವಾಮಿ
ಅಡಿಯಷ್ಟೂ ನೆಲ ನಮಗಿಲ್ಲಾ!
ಇಲ್ಲಾ ಗದ್ದೆ!
ಇರುವುದು ಹುದ್ದೆ!
ಹರಿಜನ ಹುದ್ದೆಯು ನಿಮಗಿಲ್ಲಾ!

ಬಂತು ಸ್ವರಾಜ್ಯ
ಆದರು ಭಾಗ್ಯ
ಹರಿಜನಕಿಲ್ಲಾ, ನಿರ್ಬಲರೋ;
ಹರನೂ ನೋಡಾ!
ಹರಿಗೂ ಬೇಡಾ!
ಹೆಸರಿಗೆ ಮಾತ್ರ ಹರಿಜನರೋ

- ದಿನಕರ ದೇಸಾಯಿ

ರಾಯಚೂರು ಜಿಲ್ಲೆಯಲ್ಲಿ ಅಸ್ಪೃಶ್ಯತೆಯ ಶಾಪ

ಪುಟ 5 ರಿಂದ

ಕಾಯುತ್ತಿರುತ್ತಾರೆ. ಉಚ್ಚಯ್ಯ(ತೇರು) ಎಳೆಯುವಾಗ ಬಾಳೆ ಹಣ್ಣು ಎಸೆದು ಹೋಗುತ್ತಿರುತ್ತಾರೆ. ಒಂದು ವೇಳೆ ಜನರ ಗದ್ದಲದಲ್ಲಿ ಮಾದಿಗರು ಯಾರಾದರೂ ಕಾಲು ತುಳಿದರೆ (ತಟ್ಟಿದರೆ) ಸಿಟ್ಟು ನೆತ್ತಿಗೇರಿ 'ಲೇ ಮಾದಿಗ ಸೂಳೆಮಕ್ಕಳೆ ಸೊಕ್ಕು ಮಾಡುತ್ತಿರಾ. ಊರಿನ ಅನ್ನ ತಿಂದು ಮಗನಿಗೆ ತಲೆ ಮೇಲೆ ಕಣ್ಣು ಇಟ್ಟುಕೊಂಡಿದ್ದಾನೆ' ಎಂದು ಬೈಯುತ್ತಿರುತ್ತಾರೆ. ಆವಾಗ ಅಪ್ಪ ತಪ್ಪಾಗಿದೆ ಎಂದರೂ ಬಿಡುವುದಿಲ್ಲ. ಹೀಗಾಗಿ ನೋಡುವಾಗ ಬಹಳ ಹುಷಾರಿನಿಂದ ಉಚ್ಚಯ್ಯ ನೋಡುತ್ತಿರುತ್ತೇವೆ. ಅವರು ಮಾತನಾಡುವ ಶಬ್ದಗಳನ್ನು ಕೇಳಿ ಮತ್ತು ನೋಡಲಾಗದೆ ಎಷ್ಟೋ ಬಾರಿ ನಮ್ಮ ತಾಯಂದಿರು ತೇರುನೋಡಲು ಕರೆದಾಗ ನಾನು ಹೋಗಲು ನಿರಾಕರಿಸಿದ್ದೇನೆ. ಉಚ್ಚಯ ಎಳೆಯುವ ಸಂದರ್ಭದಲ್ಲಿ ಕುರುಬರು, ವಾಲ್ಮೀಕಿ, ಲಿಂಗಾಯತ ಜನರು ಹೆಚ್ಚಿನ ಮಟ್ಟದಲ್ಲಿ ಇರುತ್ತಾರೆ. ಆ ಸಮಯದಾಗ ಉಚ್ಚಯ ಎಳೆಯಬೇಕು, ಕೂಗಬೇಕೆಂಬ ಸ್ಫೂರ್ತಿ ನಮ್ಮಲ್ಲೂ ಉಂಟಾಗುತ್ತಿರುತ್ತದೆ. ಆದರೆ ಅವಕಾಶವಿರುವುದಿಲ್ಲ. ಹೀಗಾಗಿ ಜಾತ್ರೆಯಲ್ಲಿ ತೇರು ಅಥವಾ ಉಚ್ಚಯ್ಯ ಎಳೆಯುವ ಮೊದಲೇ ದೇವರಿಗೆ ಕಾಯಿ, ಕರ್ಪೂರ ಕೊಟ್ಟು ಬರುತ್ತಿದ್ದೆವು.

ಮೊಹರಂ ಹಬ್ಬ

ಮೊಹರಂ ಹಬ್ಬ ನಮ್ಮ ಜನರು ಮೂರು ದಿನ ಕಾಲ ಆಚರಣೆ ಮಾಡುತ್ತಾರೆ. ಒಂದೊಂದು ದಿನ ಹಬ್ಬದ ಸಡಗರದಲ್ಲಿ ಇರುತ್ತಾರೆ. ಪೀರಲು ದೇವರಿಗೆ ಒಂದು ದಿನ ಸಕ್ಕರೆ ಮಾತ್ರ ಓದಿಕೆ ಮಾಡಿಕೊಂಡು, ಲಾಡಿ ಕಟ್ಟಿಕೊಂಡು ಬರುತ್ತೇವೆ. ಎರಡನೇ ದಿನ ಸಜ್ಜೆ ರೊಟ್ಟಿ, ದೋಸೆ, ಬೆಲ್ಲದ ಹಾಲು ಬಿಂದಿಗೆಯಲ್ಲಿ ಇಟ್ಟು ತಲೆ ಮೇಲೆ ಹೊತ್ತುಕೊಂಡು ಹಲಗೆ ಬಾರಿಸುತ್ತಾ 'ಬೊಂಬೊಲೋ ಆಲಿಮೋ ದೀನ್' ಎಂದು ಕೂಗುತ್ತಾ ಗುಂಪುಗಳಾಗಿ ಹೋಗುತ್ತೇವೆ. ಹಲಗೆ ಬಾರಿಸುತ್ತಾ ಬೆಲ್ಲ ಸಜ್ಜೆ, ರೊಟ್ಟಿ, ಹೊತ್ತು ಹೋದ ಜನರು ದೇವರ ಗುಡಿ ಮುಂದೆ ನಾಲ್ಕು ಫೀಟ್ ದೂರ ಇರುತ್ತಾರೆ. ನಂತರ ಸಾಬರು ಓದಿಕೆ ಮಾಡಿ ಕಳಿಸುತ್ತಾರೆ. ನಂತರ ಕೇರಿಗೆ ಹೋಗಿ ಎಲ್ಲಾ ಮನೆಯವರು ಒಂದು ಕಡೆ ಕುಳಿತು 'ಬೊಂಬೋಲೋ ಆಲಿಮೋ ದೀನ್' ಎಂದು ಕೂಗಿ ಊಟ ಮಾಡುತ್ತಾರೆ. ನಂತರ ಹೆಂಡ ಕುಡಿದು ಹಲಗೆ ಬಾರಿಸುತ್ತಾ ಪೀರಲು ದೇವರು ಮುಂದೆ ಕುಣಿಯುತ್ತಾರೆ. ಆವಾಗ ವಾಲ್ಮೀಕಿ, ಕುರುಬರು, ಕುಂಬಾರು, ಲಿಂಗಾಯತರು ಒಟ್ಟಾಗಿ ಕುಣಿಯುತ್ತಾರೆ. ಹಲಗೆ ಬಾರಿಸುವ ಮಾದರ ವ್ಯಕ್ತಿಯನ್ನು ಹೆಂಡ ಕುಡಿಸಿ ಹೆಗಲ ಮೇಲೆ ಎತ್ತಿಕೊಳ್ಳುತ್ತಾರೆ. ಎಲ್ಲರೂ ಮುಟ್ಟಿಸಿಕೊಳ್ಳುತ್ತಾರೆ. ಆದರೆ ಮಾದಿಗ ಮಹಿಳೆಯರು ಒಂದು ಗುಂಪು ಸವರ್ಣೀಯರನ್ನು ಮುಟ್ಟಿಸಿಕೊಳ್ಳಲಾರದ ಜಾಗದಲ್ಲಿ ಇರುತ್ತಾರೆ. ಆದರೆ ಇಷ್ಟೆಲ್ಲಾ ಆ ಹಲಗೆ ಬಾರಿಸುವನನ್ನು ಎತ್ತಿಕೊಂಡು ಕುಣಿಯುತ್ತಾರೆ. ಮಾದಿಗರ ಹುಡುಗರನ್ನು ಮುಟ್ಟಿದ ವ್ಯಕ್ತಿ ಆ ಪೀರಲು ದೇವರನ್ನು ಮುಟ್ಟಿಸಿಕೊಳ್ಳುತ್ತಾನೆ. ಆದರೆ ಈ ಮಾದರನ್ನು ಮಾತ್ರ ದೂರ ಮಾಡುತ್ತಾರೆ. ಇದು ಎಲ್ಲಾ ಹಳ್ಳಿಗಳಲ್ಲಿ ರೂಢಿಯಲ್ಲಿದೆ. ಕೊನೆ ದಿನ ಮುಂಜಾನೆ ಎದ್ದು ಕುರಿ ಕೊಯ್ದು ಮನೆಯಲ್ಲಿರುವ ಹೆಣ್ಣು ಮಕ್ಕಳನ್ನು ಅಡಿಗೆ ಮಾಡಲು ಬಿಡುತ್ತಾರೆ. ಗಂಡಸರು ಎಲ್ಲರು ಹೆಂಡದ ಅಂಗಡಿಗೆ ಹೋಗಿ ಮುಂಜಾನೆಯಿಂದ ಕುಡಿಯುವುದೇ ಕೆಲಸ. ಕುಡಿದು ಕುಡಿದು ರಸ್ತೆ ಮೇಲೆ ಮಲಗುತ್ತಾರೆ. ಕೆಲವರು ಕುಡಿದು ಸುಸ್ತಾಗಿ ಬೀಳುತ್ತಾರೆ. ತಮ್ಮ ತಮ್ಮ ಗಂಡಂದಿರನ್ನ, ಕುಡಿದ ರಸ್ತೆ ಮೇಲೆ ಬಿದ್ದವರನ್ನು ಮೈಮೇಲೆ ನೀರು ಸುರಿದು ಮನೆಗೆ ಕರೆದುಕೊಂಡು ಹೋಗುತ್ತಾರೆ. ಇತ್ತೀಚಿಗೆ ರಾಜಕೀಯ ಕಾರಣದಿಂದ ಮಾದಿಗರ ಮೇಲೆ ಒಂದು ಗುಂಪಿನವರು ಹಳೆ ಸೇಡುಗಳನ್ನು ತೀರಿಸಿಕೊಳ್ಳಲು ಮೈಮೇಲೆ ಬಿದ್ದು ಜಗಳ ತೆಗೆಯುವದಲ್ಲದೆ ಪೋಲೀಸ್ ಕೇಸುಹಾಕಿ ಕೋರ್ಟ್ ಕಟ್ಟೆ ಹತ್ತಿಸುತ್ತಾರೆ. ಇಂತ ಕುತಂತ್ರ ನೀತಿ ಶ್ರೀಮಂತ ವರ್ಗದಿಂದಲೇ ನಡೆಯುತ್ತಲೇ ಇರುತ್ತದೆ.


ಹೋಟೆಲ್ ಮತ್ತು ಮಾದಿಗರು

ರಾಯಚೂರು ಜಿಲ್ಲೆಯಲ್ಲಿ ತೀವ್ರ ರೀತಿಯಲ್ಲಿ ಸವರ್ಣೀಯರ ಮತ್ತು ಮಾದಿಗರ ಮಧ್ಯೆ ಜಗಳ ಉದ್ಭವಿಸುತ್ತಿರುವದರ ಪ್ರಮುಖ ಕಾರಣ ಹೋಟೆಲ್‌ಗಳಲ್ಲಿ ನಿರಾಕರಣೆ, ಧಾರ್ಮಿಕ ಸ್ಥಳಗಳಲ್ಲಿ ನಿಷೇಧ ಇಂತ ಹಲವಾರು ಕಾರಣಗಳು ಇವೆ. ಈಗಲೂ ಹಳ್ಳಿಗಳಲ್ಲಿ ಹೋಟೆಲ್ ಒಳಗೆ ಹೋಗುವಂಗಿಲ್ಲ. ಚಾ ಕುಡಿಯಬೇಕಾದರೆ ಮಾದಿಗ ಜನಾಂಗಕ್ಕೆ ಕಪ್ಪುಗಳನ್ನು ಬೇರೆ ಕಡೆ ಇಟ್ಟಿರುತ್ತಾರೆ. ಆ ಕಪ್ಪುಗಳಲ್ಲಿ ಚಾ ಮೇಲೆತ್ತಿ ಹಾಕುತ್ತಾರೆ. ಕೇರಿಯ ಜನರು ಮುಂಜಾನೆ ಎದ್ದು ತಕ್ಷಣವೇ ಚಾ ಬೇಕೆಂದು ಹೋಟೆಲ್‌ಗೆ ಹೋದರೆ ಹೋಟೆಲ್ ಒಳಗೆ ಲಿಂಗಾಯತರು, ವಾಲ್ಮೀಕಿ, ಕುರುಬರು, ಮುಸ್ಲಿಂ ಇನ್ನಿತರ ಜನಾಂಗದವರು ಇರುತ್ತಾರೆ. ಆದರೆ ಮಾದಿಗ ಜನರನ್ನು ಕಲ್ಲು ಬಂಡೆ ಪಕ್ಕದಲ್ಲಿ ಮತ್ತು ಚಪ್ಪಲಿ ಬಿಡುವ ಸ್ಥಳದಲ್ಲಿ ಕುಳಿತುಕೊಳ್ಳುತ್ತಾರೆ. ಗೌಡಪ್ಪ ಚಾ ಹಾಕಪ್ಪ ಎಂದು ಕೂಗುತ್ತಾನೆ. ಒಳಗಿನಿಂದ ತಕ್ಷಣದಲ್ಲೇ ಬರುವುದಿಲ್ಲ. ತಡೆವಾಗತ್ತೈತಿ ಎಂದು ಕೂಗಿದಾಗ 'ಲೇ ಇರಲೇ ಮಾದಿಗ ನನ್ಮಗನೇ' ಎಂದು ಹೋಟೆಲಿನವರು ಬೈಯ್ದರೆ ಒಳಗಿರುವ ಜನರು ಸಹ ಅದೇ ತರನೇ ಬೈಯುತ್ತಿರುತ್ತಾರೆ. ಒಳಗಿನ ಜನರಿಗೆ ತೃಪ್ತಿ ಪಡಿಸಿದ ನಂತರ ಮಾದಿಗರಿಗೆ ನೋಡಿಕೊಳ್ಳುವದು ಈಗಲೂ ರೂಢಿಯಲ್ಲಿದೆ. ಒಂದು ವೇಳೆ ಚಾ ಕುಡಿಯುವಾಗ, ನೀರು ಎತ್ತಿ ಹಾಕುವಾಗ ಮೈಮೇಲೆ ಬಿದ್ದರೆ ಸುಮ್ಮನೆ ಕುಡಿದು ಬರಬೇಕು. ಮೇಲಿನ ವರ್ಗದ ಜನರು ಬಂದಾಗ ದಾರಿಯಲ್ಲಿ ಕಾಲು ಮಡಿಸಿಕೊಂಡು ಕುಳಿತುಕೊಳ್ಳಬೇಕು. ಎಷ್ಟೋ ಬಾರಿ ಇಂತಹ ಘಟನೆಗಳು ಜರುಗಿವೆ. ವಿದ್ಯಾವಂತ ಯುವಕರಿಗೆ ತುಂಬ ಕಿರಿಕಿರಿಯಾಗುತ್ತದೆ. ಏಕೆಂದರೆ ನನ್ನ ಅನುಭವದ ಪ್ರಕಾರ ಗಂಗಾವತಿಯಿಂದ ಕೆಲವು ನನ್ನ ಸ್ನೇಹಿತರು ಮಾತನಾಡಿಸಿಕೊಂಡು ಹೋಗಲು ನನ್ನ ಊರಾದ ಹೊಸ್ಕೆರಾ ಡಗ್ಗಿಗೆ ಬಂದರು. ಅವರು ನನ್ನ ಹತ್ತಿರ ಮಾತನಾಡಿದ ಮೇಲೆ ಚಾ, ಮಂಡಾಳು, ಮಿರ್ಚಿ ತಿನ್ನಲು ಹೋಟೆಲ್‌ಗೆ ಹೋಗೋಣವೆಂದು ತಿಳಿಸಿದರು. ನನಗೆ ಗಾಬರಿಯಾಯಿತು. ಐದು ನಿಮಿಷ ಯೋಚನೆ ಮಾಡಿದೆ. ಹೇಗಪ್ಪ ಹೋಟಲಿಗೆ ಕರೆದುಕೊಂಡು ಹೋಗುವುದು ಎಂದು. ಅಲ್ಲಿಗೆ ಹೋದರೆ ನನ್ನ ಸ್ನೇಹಿತರು ಒಳಗೆ ಬಾ ಎಂದು ಕರೆಯುತ್ತಾರೆ, ಅದರಿಂದ ಜಗಳ ಮಾಡಿಕೊಳ್ಳಬೇಕಾಗುತ್ತದೆ, ಅದಕ್ಕೆ ಸ್ನೇಹಿತರಿಗೆ ಹೇಳಿದೆ ಹೋಟಲು ದೂರ ಇದೆ, ಅಲ್ಲಿಗೆ ಹೋಗೋದು ಬೇಡ ನಮ್ಮ ತಮ್ಮನಿಂದ ಮಂಡಾಳು, ಮಿರ್ಚಿ, ಚಾ ತರಸ್ತೀನಿ ಎಂದು ಹೇಳಿ ತಮ್ಮ ತಮ್ಮನಿಂದ ತರಿಸಿ ತಿನಿಸಿ ಕಳಿಸಿದೆ. ಪಟ್ಟಣದಲ್ಲಿ ಅಭ್ಯಾಸ ಮಾಡಿದ ಹುಡುಗರು ಹಳ್ಳಿಯಲ್ಲಿ ವಾಸಿಸುವುದು ಬಹಳ ಕಡಿಮೆ. ಪಟ್ಟಣಕ್ಕೆ ಸೇರಿ ದುಡಿದು ಜೀವನ ಮಾಡುತ್ತಾರೆ. ಇದಕ್ಕೆ ಮೂಲಕಾರಣ ಇಂತಹ ಆಚರಣೆಗಳಿಂದ ದೂರ ಹೋಗಬೇಕೆಂದು ನಿರ್ಧರಿಸಿ, ನಾವು ಮನುಷ್ಯರು ಎಂದು ಗುರುತಿಸಿಕೊಳ್ಳಬೇಕೆಂದು ತೀರ್ಮಾನಿಸುತ್ತಾರೆ. ಎಷ್ಟೋ ಬಾರಿ ನಮ್ಮ ಸಂಗಾತಿಗಳನ್ನು ಕರೆದುಕೊಂಡು ಹೋಗಬೇಕಾದರೆ ಭಯ ಮೂಡುತ್ತದೆ. ಅಲ್ಲಿಗೆ ಕರೆದರೆ ಹೋಟಲಿಗೆ ಹೋಗಬೇಕು, ದೇವಾಲಯ ಕಟ್ಟೆಯ ಮೇಲೆ ಕುಳಿತುಕೊಳ್ಳುವಂಗಿಲ್ಲ. ಇಂತಹ ಸಂದರ್ಭದಲ್ಲಿ ಊರಿಗೆ ಕರೆದುಕೊಂಡು ಹೋಗುವುದು ಸರಿಯಲ್ಲ ಎಂದು ತೀರ್ಮಾನಿಸುತ್ತೇವೆ. ನೂರಕ್ಕೆ ಒಂದರಷ್ಟು ಪಟ್ಟಣ ಪ್ರದೇಶ ಹಾಗೂ ಗ್ರಾಮೀಣ ಪ್ರದೇಶ ಬಿಟ್ಟರೆ ಉಳಿದ ನೂರಕ್ಕೆ ತೊಂಬತ್ತೊಂಬತ್ತಷ್ಟು ಜನರು ಹೋಟಲುಗಳಿಂದ ವಂಚಿತರಾಗಿದ್ದಾರೆ. ನಗರ ಪಟ್ಟಣಗಳಲ್ಲಿ ಮಾದಿಗರ ಹುಡುಗರೇ ಹೋಟೆಲ್, ಬಾರ್‌ಗಳಲ್ಲಿ ಹೆಚ್ಚಿನ ಮಟ್ಟದಲ್ಲಿ ದುಡಿಯುವುದು. ಬೀರ್ ಕುಡಿಯುವಾಗ, ಹೋಟೆಲ್‌ನಲ್ಲಿ ತಿನ್ನುವಾಗ ಇವರಿಗೆ ಜಾತಿ ಬರುವುದಿಲ್ಲ. ಹಳ್ಳಿಗೆ ಬಂದ ತಕ್ಷಣವೇ ಜಾತಿ ಬರುತ್ತದೆ. ಇಂತಹ ಕೆಟ್ಟ ಪದ್ಧತಿ ವಿರೋಧಿಸಿ ಕೆಲವರು ಡಿ.ಎಸ್.ಎಸ್. ಸಂಘಟನೆಗೆ ಸೇರುತ್ತಾರೆ. ಕುಂಟೋಜಿ ಗ್ರಾಮದಲ್ಲಿ ಡಿ.ಎಸ್.ಎಸ್. ನಿಂದ ಹೋಟೆಲ್ ಒಳಗೆ ಹೋದಾಗ ಊರಿನ ಸವರ್ಣೀಯರು ಒಂದಾಗಿ ಇವರ ಮೇಲೆ ಹಲ್ಲೆ ಮಾಡಿದರು. ಸವರ್ಣೀಯರ ಹೆದರಿಕೆಗೆ ಯಾರೂ ಹೋಟೆಲ್ ಒಳಗೆ ಹೋಗಲಿಲ್ಲ. ಅದಲ್ಲದೆ 'ಲೇ ಸೂಳೆ ಮಕ್ಕಳೆ ಈಗ ಹೋಟಲಿಗೆ ಬರುತ್ತೀರಿ, ನಾಳೆ ನಮ್ಮ ಹೆಂಡರ ಹತ್ತಿರ ಬರುತ್ತೀರಿ' ಎಂದು ಕೂಗಾಡುತ್ತಿರುತ್ತಾರೆ. ಕೇರಿಯಲ್ಲಿರುವ ಯುವಕರು ಒಂದಾಗಿ 'ಇಲ್ಲಾ ನಾವು ಹೋಟೆಲ್ ಹೊರಗೆ ಕುಳಿತು ಕುಡಿಯುವುದಿಲ್ಲ' ಎಂದು ತೀರ್ಮಾನಿಸಿದಾಗ ಎಷ್ಟೋ ಧಾಳಿ, ದಬ್ಬಾಳಿಕೆ ಸವರ್ಣೀಯರ ಜನಾಂಗದಿಂದ ಎದುರಿಸಬೇಕಾಗಿ ಬಂದದ್ದನ್ನು ರಾಯಚೂರು ಜಿಲ್ಲೆಯಲ್ಲಿ ನೋಡಬಹುದು.

ನಮ್ಮ ಕೇರಿಯ ಹಿರಿಯ ಮುಖಂಡರು ಇಂತಹ ಅನ್ಯಾಯವನ್ನು ಸಮರ್ಥನೆ ಮಾಡಿಕೊಳ್ಳುತ್ತಲಿದ್ದಾರೆ. 'ನಾವು ಹಿಂದಿನಿಂದಲೇ ತಲತಲಾಂತರದಿಂದ ಊರಿನಲ್ಲಿ, ಹೋಟಲ್‌ನಿಂದ ಹೋಗಲಾರದೆ ಆಚರಣೆ ಮಾಡಿಕೊಂಡು ಬರುತ್ತಿದ್ದೇವೆ. ನಾವು ಅಂತ ಕೆಲಸಕ್ಕೆ ಹೋಗಬಾರದು' ಎಂದು ಮಕ್ಕಳನ್ನು ಬೈಯ್ದು ಮನೆಯಿಂದ ಹೊರಕ್ಕೆ ಹೋಗಲು ಬಿಡುವುದಿಲ್ಲ. ಸಾಮಾಜಿಕ ವಿಧಿ-ವಿಧಾನ ಹಾಳು ಮಾಡುತ್ತಿದ್ದೀರಿ ಊರಿನ ಪ್ರಮುಖ ಮುಖಂಡರನ್ನು ಏಕೆ ಎದುರು ಹಾಕಿಕೊಳ್ಳುವುದು ಎಂಬ ಭಯವಿದೆ. ಒಂದು ವೇಳೆ ಹೋಟೆಲ್ ಒಳಗಡೆ ಹೋದರೆ ಪೋಲೀಸ್, ಕೋರ್ಟಿಗೆ ತಿರುಗಬೇಕಾಗುತ್ತದೆ ಅಲ್ಲದೆ ಮಾದಿಗರನ್ನು ಕೂಲಿ ಕೆಲಸಕ್ಕೆ ಕರೆಯಬಾರದೆಂದು ತೀರ್ಮಾನಿಸುತ್ತಾರೆ ಆವಾಗ ಹೊಟ್ಟೆಗೆ ಹಿಟ್ಟು ಇಲ್ಲದೆ ನರಳಬೇಕು, ಹೆಂಡ್ತಿ ಮಕ್ಕಳನ್ನು ಉಪವಾಸ ಹಾಕ ಬೇಕಾಗುತ್ತದೆಂದು ಹಿರಿಯರು ಯೋಚನೆ ಮಾಡುತ್ತಾರೆ. ಅವರನ್ನು ಎದುರಿಸಲು ಆರ್ಥಿಕ ಧೈರ್ಯ ಸಹ ಬೇಕಾಗುತ್ತದೆ ಎಂಬ ಆಲೋಚನೆ ಮೂಡುತ್ತದೆ.

ದೇವದಾಸಿ ಪದ್ಧತಿ

ಮಾದಿಗ ಜನಾಂಗದಲ್ಲಿ ದೇವದಾಸಿ ಪದ್ಧತಿ ಬಿಡುವದು ರೂಢಿ ರಾಯಚೂರು ಕೊಪ್ಪಳ ಜಿಲ್ಲೆಯಲ್ಲಿದೆ. ಈ ಭಾಗದ ದೇವರು ಹುಲಿಗೆಮ್ಮ, ಎಲ್ಲಮ್ಮ ದೇವರಿಗೆ ಹರಕೆ ಹೊತ್ತುಕೊಂಡು 'ದಾಸಿ' ಆಗುತ್ತಾರೆ. ಚಿಕ್ಕವಳಿದ್ದಾಗ ಬಸವಿ ಬಿಡುತ್ತಾರೆ. ಅವಳು ದೊಡ್ಡವಳಾದಾಗ ಊರಿನಲ್ಲಿರುವ ಗೌಡರು, ಕುಲಕರ್ಣಿಗಳು, ಧಣಿಗಳು, ಹಣ ಇರುವ ಶ್ರೀಮಂತರ ಮಕ್ಕಳು ಬಸವಿ ಹುಡಿಗಿಯನ್ನ ಹೆಣ್ಣು ಮಾಡಲು ಬರುತ್ತಾರೆ. ಕೇರಿಯಲ್ಲಿ ಹಿರಿಯರನ್ನು ಕೇಳಿ ಯಾರ ಮನೆಯಲ್ಲಿ ಬಸವಿ ಹುಡುಗಿ ಇದ್ದಾಳೆಂದು ತಿಳಿದುಕೊಂಡು ಬರುತ್ತಾರೆ. ಒಂದು ವೇಳೆ ಹುಡುಗಿ ಇದ್ದರೆ ಯಾರು ಮಧ್ಯಸ್ಥಿಕೆ ವಹಿಸುತ್ತಾನೆ ಅವನಿಗೆ ಹೆಂಡ ಕುಡಿಸುತ್ತಾನೆ. ಯಾರು ಆ ಬಸವಿಯನ್ನು ಹೆಣ್ಣು ಮಾಡುತ್ತಾನೆ ಅವನಿಂದ ಒಂದು ಡಜನ್(ಕ್ಯಾನ್) ಹೆಂಡ, ಬಟ್ಟೆ, ಹಣ ಇಂತಿಷ್ಟು ನೀಡಬೇಕೆಂದು ಒಪ್ಪಿಸಿ ಎಲ್ಲಾ ನೀಡಿದ ಬಳಿಕ ಬಸವಿ ಹುಡಿಗಿಯ ಹತ್ತಿರ ಮಲಗಲು ಬಿಡುತ್ತಾರೆ. ಗೌಡರ ಹುಡುಗ ಮಾದರ ಹುಡುಗಿ ಬಸವಿಯ ಮನೆಯಲ್ಲಿ ಮಲಗುತ್ತಾನೆ. ಮುಂಜಾನೆ ಎದ್ದು ಹುಡುಗಿಯ ಮನೆಯಲ್ಲೇ ಮುಖ ತೊಳೆಯುತ್ತಾನೆ. ಆದರೆ ಹೊಲದಲ್ಲಿ ಕೆಲಸಕ್ಕೆ ಹೋದಾಗ ಮತ್ತು ದಾರಿಯಲ್ಲಿ ಹೋಗುವಾಗ ಊರಿನಲ್ಲಿದ್ದಾಗ ಮುಟ್ಟಿಸಿಕೊಂಡರೆ ಅದೇ ವ್ಯಕ್ತಿ 'ಲೇ ಮಾದಿಗ ಸೂಳೆ ಮಕ್ಕಳೆ' ಎಂದು ಬೈಯುತ್ತಾನೆ. ಈ ಸೂಳೆ ಮಕ್ಕಳಿಗೆ ಮುಕುಳಿ ತುಂಬಿದೆ ಎಂದು ಹೆದರಿಸುತ್ತಾನೆ. ಬಸವಿ ಮನೆಗೆ ಬಂದಾಗ ನೇರವಾಗಿ ಒಳಗಿನ ಕೋಣೆಗೆ ಹೋಗುತ್ತಾನೆ. ಕೋಣೆಯಲ್ಲಿ ಇತರ ಮಹಿಳೆಯರು ಮಲಗಿದ್ದರೆ ತಕ್ಷಣ ಎದ್ದು ಹೊರಗೆ ಬರಬೇಕು! ಬಸವಿ ಹೆಣ್ಣಿನ ಜೊತೆಗೆ ಕೆಲವರು ಕೊನೆಯವರೆವಿಗೂ ಉಳಿಯುತ್ತಾರೆ. ಇನ್ನೂ ಕೆಲವರು ತಮ್ಮ ಸರಸ ತೀರಿಸಿಕೊಳ್ಳಲು ಬರುತ್ತಾರೆ. ಅವರಿಗೆ ಇವರು ಸೆರಗು ಹಾಸಬೇಕು. ಅಲ್ಲದೆ ಬಸವಿ ಹೆಣ್ಣು ಮಕ್ಕಳಿಗೆ ಮಕ್ಕಳು ಹುಟ್ಟಿದರೆ ತಾಯಿ ಹೆಸರು ಇಡುತ್ತಾರೆ. ಮಕ್ಕಳ ಹುಟ್ಟಿಗೆ ಕಾರಣವಾದ ಮೇಲ್ಜಾತಿಯ ತಂದೆಯ ಹೆಸರು ಇಡುವುದಿಲ್ಲ.



ಚಾ ಕುಡಿಯಬೇಕಾದರೆ ಮಾದಿಗ ಜನಾಂಗಕ್ಕೆ ಗ್ಲಾಸುಗಳನ್ನು ಬೇರೆ ಕಡೆ ಇಟ್ಟಿರುತ್ತಾರೆ

ಮಾದಿಗರ ಮಕ್ಕಳ ಶಿಕ್ಷಣ

ಊರಲ್ಲಿ ಶಾಲೆಗಳು ಇರುತ್ತವೆ. ಕೇರಿಗಳಲ್ಲಿ ಶಾಲೆಗಳು ತೆರೆಯುವುದಿಲ್ಲ. ಇದ್ದರೂ ಕಡಿಮೆ. ಇತ್ತೀಚೆಗೆ ಡಿಪಿಇಪಿ ಯೋಜನೆಗಳಿಂದ ಶಾಲೆ ಕಟ್ಟಿಸಿದ್ದಾರೆ. ಕೇರಿಯ ಹುಡುಗರು ಓದುವುದೇ ಕಷ್ಟ. ನೂರಕ್ಕೆ ಶೇ. ಒಂದರಷ್ಟು ಕಳಿಸುವುದಿಲ್ಲ. ಅವರು ತಾಯಿಗಳು ಕೂಲಿ ಕೆಲಸಕ್ಕೆ ಕರೆದುಕೊಂಡು ಹೋಗುತ್ತಾರೆ. ಇಲ್ಲವಾದರೆ ಮಕ್ಕಳನ್ನು ಎತ್ತಿಕೊಳ್ಳಲು ಕರೆದುಕೊಂಡು ಹೋಗುತ್ತಾರೆ. ಒಂದು ವೇಳೆ ಹೋದರೆ ಶಾಲೆಗಳಲ್ಲಿ ಮಾದಿಗರ ಮಕ್ಕಳನ್ನು ದೂರ ಕೂರಿಸುತ್ತಾರೆ. ಸವರ್ಣೀಯರ ಮಕ್ಕಳು ಮಾದಿಗರ ಹುಡುಗರನ್ನು ಮುಟ್ಟಿಸಿಕೊಳ್ಳುವುದಿಲ್ಲ. ಶಾಲೆಯಲ್ಲಿರುವ ನೀರಿನ ಟ್ಯಾಂಕ್ ಮುಟ್ಟುವಂತಿಲ್ಲ. ಮಾಸ್ತರ್ ಪಾಠ ಹೇಳುವಾಗ ಸವರ್ಣೀಯರ ಹುಡುಗರಿಗೆ ಕೊಂಚ ದೂರ ನಿಂತುಕೊಂಡು ಪಾಠ ಕೇಳಬೇಕು. ಆಟ ಆಡಬೇಕಾದರೆ ನಮಗೂ ಆಡವಾಡಬೇಕೆನ್ನುವ ಹಂಬಲ. ಆದರೆ ಆಡುವುದಿಲ್ಲ, ಒಂದು ವೇಳೆ ಆಡಿಸಿದರೆ ಮಾದಿಗರ ಹುಡುಗನ ಕಾಲು ಬಡಿಯುತ್ತವೆಂದು ಭಾವನೆ ಅವರದು. ಕೆಲವು ಹಳ್ಳಿಗಳಲ್ಲಿ ಮಾದಿಗರ ಹುಡುಗರಿಂದ ನಾಯಿಯ ಹೇಸಿಗೆ ಬಳಿಸುತ್ತಾರೆ. ಈಗಲೂ ಈ ಪದ್ಧತಿ ಇದೆ. ಒಂದು ಬಾರಿ ಏಳನೇ ತರಗತಿ ಓದುವಾಗ ಬೀಳ್ಕೊಡುಗೆ ಸಮಾರಂಭ ಮಾಡಿ ನಮ್ಮ ಮಾಸ್ತರ್ ಪೋಟೋ ತೆಗೆಸಿದರು. ನಾನು ಲಿಂಗಾಯತ ಗೆಳೆಯನ ಜೊತೆ ನಿಂತುಕೊಂಡಿದ್ದೆ. ಇದನ್ನು ನೋಡಿ ಲಿಂಗಾಯತನ ಹುಡುಗನ ಮನೆಯವರು ಪೋಟೋ ಸುಟ್ಟು ಹಾಕಿದರು. ಮಾದಿಗರ ಹುಡುಗರ ಜೊತೆಯಲ್ಲಿರುವುದು ನಮ್ಮ ಕುಲಕ್ಕೆ ಅವಮಾನ ಎಂದು ಹುಡುಗನಿಗೆ ಬೈದುಬಿಟ್ಟರೆಂದು ನನ್ನ ಗೆಳೆಯ ನಂತರ ಹೇಳಿದ. ಅವನು ಹೇಳಿದ್ದು 'ಏನು ಮಾಡಲಿ ಗೆಳೆಯ ಇಂತ ಪದ್ಧತಿಗಳು ನಮ್ಮ ಸ್ನೇಹ ಸಂಬಂಧಗಳನ್ನು ಹಾಳು ಮಾಡುತ್ತವೆಂದು' ದುಃಖ ಪಟ್ಟ. ಶಾಲೆಯಲ್ಲಿ ಮಾದಿಗರ ಹುಡುಗರನ್ನು ಮುಟ್ಟಿಸಿಕೊಂಡಿರುತ್ತಾರೆಂದು ಅವರ ತಾಯಂದಿರು ಮನೆಗೆ ಹೋದ ಹುಡುಗರಿಗೆ ತಲೆಗೆ ನೀರು ಹಾಕಿ ಒಳಗೆ ಬಾ ಎಂದು ಹೇಳುತ್ತಾರೆ. ಹಳ್ಳಿಯಲ್ಲಿ ಮಾದಿಗ ಶಿಕ್ಷಕನಾಗಿ ಹೋದರೆ ತುಂಬ ಕಷ್ಟ. ಅವನಿಗೆ ಶಾಲೆಯ ಕೋಣೆಯಲ್ಲಿ ಕುರ್ಚಿ ಸಮಾನವಾಗಿರುವುದಿಲ್ಲ. ಅವನು ನೀರು ಕುಡಿಯುವುದು ತುಂಬ ಕಷ್ಟ. ಮನೆ ಬಾಡಿಗೆ ಸಿಗುವುದಿಲ್ಲ. ಇಂತ ಕಷ್ಟಗಳಿಂದ ದೂರವಾಗಬೇಕೆಂದು ಪಟ್ಟಣಕ್ಕೆ ವರ್ಗಾವಣೆ ಕೇಳುವ ಪರಿಪಾಠ ಇವತ್ತಿಗೆ ಹೆಚ್ಚಾಗಿದೆ.

ಪಂಚಾಯತ್ ರಾಜ್ಯದಲ್ಲಿ

ಗ್ರಾಮ ಪಂಚಾಯತಿಗಳಲ್ಲಿ ಮಾದಿಗ ಜನಾಂಗದಿಂದ ಚುನಾವಣೆಯಲ್ಲಿ ಗೆದ್ದವರನ್ನು ಸವರ್ಣೀಯರು, ರಾಜಕೀಯ ಮುಖಂಡರು ಮಾದಿಗ ಜನರನ್ನ ಪಂಚಾಯತಿಯಲ್ಲಿ ಕುರ್ಚಿಯಿಂದ ಕೆಳಗೆ ಕೂಡಿಸುತ್ತಾರೆ. ಪಂಚಾಯತಿ ಸಭೆ ನಡೆಯುವಾಗ ಇವರು ಯಾರೂ ಸಹ ಮಾತನಾಡುವದಿಲ್ಲ. ಅವರು ಹೇಳಿದ್ದೇ ಮಾರ್ಗ. ಅವರ ಸಹಿ ಮಾಡಿಸಿಕೊಂಡು ಊರಿನ ಗೌಡ ಎರಡು ರೂ. ಕೊಟ್ಟು ಕಳಿಸುತ್ತಾನೆ. ಆವಾಗ ಆ ವ್ಯಕ್ತಿ ಬರುತ್ತೇನಪ್ಪ ಎಂದು ಎದ್ದು ಹೋಗುತ್ತಾನೆ. ಸಭೆ ನಡೆದ ನಂತರ ಸದಸ್ಯರಿಗೆ ಚಹಾ ಕೂಟ ಏರ್ಪಡಿಸಿದಾಗ ಮೇಲಿನ ಜನಾಂಗದವರೆಲ್ಲರೂ ಕೂಡಿ ಕುಡಿಯುತ್ತಾರೆ. ಆದರೆ ಮಾದಿಗ ಜನಾಂಗಗಳಿಗೆ ತಮ್ಮ ಕಪ್ಪಿನೊಳಗೆ ಕೊಡದೆ, ಇವರೇ ಇಟ್ಟುಕೊಂಡಿರುವ ಕಪ್‌ನ್ನು ತೆಗೆಸಿ ಕುಡಿಸುತ್ತಾರೆ. ಇಂತಹ ಪದ್ಧತಿ ಹಳ್ಳಿ ಪಂಚಾಯತಿಯಲ್ಲಿದೆ.

ಕೂಲಿಕೆಲಸ ಮತ್ತು ಅಸ್ಪೃಶ್ಯರು

ಗ್ರಾಮೀಣ ಮಟ್ಟದಲ್ಲಿ ಇತ್ತೀಚಿನ ದಿನಗಳಲ್ಲಿ ಸವರ್ಣೀಯರ ಜನರಲ್ಲಿರುವ ಬಡವರು ಮತ್ತು ಮಾದಿಗರು ಒಟ್ಟಾಗಿ ಕೂಲಿ ಕೆಲಸ ಮಾಡಲು ಹೋಗುತ್ತಾರೆ. ಭತ್ತ ಕೊಯ್ಯುವಾಗ ಟ್ರಾಕ್ಟರಿನಿಂದ ಹುಲ್ಲು ತುಳಿಸುವಾಗ ಅವರ ಮೈ ಇವರಿಗೆ ತಟ್ಟುತ್ತದೆ, ಇವರ ಮೈ ಅವರಿಗೆ ತಟ್ಟುತ್ತದೆ. ಎಲ್ಲರೂ ಸಹ ಮುಟ್ಟಿಸಿ ಕೊಳ್ಳುತ್ತಾರೆ. ಊಟ ಮಾಡುವಾಗ ಬೇರೆ ಬೇರೆ

> ಯಾತರ ಹೂವಾದರು ನಾತರೆ ಸಾಲದೆ
> ಜಾತಿ ವಿಜಾತಿಯೆನಬೇಡ ಶಿವನೊಲಿ
> ದಾತನೇ ಜಾತ ಸರ್ವಜ್ಞ
>
> ನಡೆವುದೊಂದೇ ಭೂಮಿ
> ಕುಡಿವುದೊಂದೇ ನೀರು
> ಸುಡುವೊಡೆ ಕಿಚ್ಚು ಎರಡಿಲ್ಲ ಜಗವೆಲ್ಲ
> ಜಡಗೊಂಬುತಿದೆಕೊ ಸರ್ವಜ್ಞ
>
> \- ಸರ್ವಜ್ಞ

ಯಾಗಿ ಊಟಮಾಡುತ್ತಾರೆ. ಸವರ್ಣೀಯರಿಗೆ ಹೆಚ್ಚಾದ ಊಟವನ್ನು ಮಾದಿಗ ಜನರಿಗೆ ಕೈಯಿಂದ ಎತ್ತಿ ಹಾಕುವಂತ ಪದ್ಧತಿ ಇದೆ.

ಹಳ್ಳದಲ್ಲಿ ಬಟ್ಟೆ - ನೀರು

ಸವರ್ಣಿಯರು ಹಳ್ಳದಲ್ಲಿ ಬಟ್ಟೆ ಒಗೆಯುವಾಗ ಸವರ್ಣಿಯರ ಮೇಲೆ ಇದ್ದರೆ ಇವರು ಕೆಳಗಿರುತ್ತಾರೆ. ಊರಿನಲ್ಲಿ ಬೋರ್ ವೆಲ್ ರಿಪೇರಿಯಾದಾಗ ಅಸ್ಪೃಶ್ಯ ಜನಾಂಗದ ಓಣಿಯಲ್ಲಿ ಬಂದು ನೀರು ತುಂಬಿಕೊಂಡು ಹೋಗುತ್ತಾರೆ. ಕೇರಿಯ ಜನರು ಬೋರ್ ವೆಲ್ ಕೆಟ್ಟಾಗ ಸವರ್ಣಿಯರ ಬೋರ್‌ವೆಲ್ ಮುಟ್ಟಿಸಿಕೊಳ್ಳುವಂಗಿಲ್ಲ. ಮಾದಿಗರು ಸಾಲಾಗಿ ಕೊಡಗಳನ್ನು ತೆಗೆದು ಕೊಂಡು ನಿಂತು ಕೊಂಡು ಅಮ್ಮ ನೀರು ಹಾಕಮ್ಮ ಅನ್ನುತ್ತಾರೆ. ಕೆಲವರು ಹಾಕುತ್ತಾರೆ. ಕೆಲವರು ಹಾಕುವುದಿಲ್ಲ. ನೀರಿಗಾಗಿ ಕೂಲಿ ಕೆಲಸ ಮಾಡುವುದೇ ಬಿಡಬೇಕಾಗುತ್ತದೆ. ಹೀಗಾಗಿ ಬೋರು ಕೆಟ್ಟುಹೋಗಿದ್ದರೆ ಮಾದಿಗ ಜನಾಂಗಕ್ಕೆ ಅದು ಬಹಳ ದುಃಖ ಉಂಟು ಮಾಡುತ್ತದೆ. ಕೆಲವು ಭಾಗದಲ್ಲಿ ಬಾವಿ ನೀರು ಸಹ ಮುಟ್ಟಿಸಿಕೊಳ್ಳುವಂಗಿಲ್ಲ. ಒಂದು ವೇಳೆ ಬೋರುಗಳನ್ನಾಗಲೀ, ಬಾವಿಯನ್ನಾಗಲಿ ಮುಟ್ಟಿದಲ್ಲಿ ಕೇರಿಯ ಜನರನ್ನು ಕೆಲಸದಿಂದ ಬಹಿಷ್ಕರಿಸಿದ್ದು ನಮ್ಮ ಕಣ್ಣಮುಂದೆಯೇ ನಡೆದಿದೆ.

ನಾದ್ರು - ಡಾಕ್ಟ್ರು

ಊರಿನಲ್ಲಿರುವ ನಾದ್ರು(ಹಜಾಮರು) ವಾಲ್ಮೀಕಿ, ಕುರುಬ, ಲಿಂಗಾಯತ ಇನ್ನಿತರ ಜನಾಂಗದವರಿಗೆ ಕಟಿಂಗ್ ಮಾಡುತ್ತಾನೆ. ಆದರೆ ಮಾದಿಗ ಜನಾಂಗಕ್ಕೆ ಮಾತ್ರ ಕಟಿಂಗ್ ಮಾಡುವುದಿಲ್ಲ. ಇವರುಗಳು ಪಟ್ಟಣಕ್ಕೆ ಪ್ರದೇಶಕ್ಕೆ ಹೋಗಿ ಕಟಿಂಗ್ ಮಾಡಿಸಿಕೊಂಡು ಬರಬೇಕಾಗುತ್ತದೆ. ಕೆಲವು ಡಾಕ್ಟರುಗಳು ಮಾದಿಗ ಜನರನ್ನು ತಮ್ಮ ಮನೆಯ ಒಳಗಡೆ ಕರೆಯದೆ ಹೊರಗಿನಿಂದ ಅವರ ಮೈಯನ್ನು ಮುಟ್ಟದೇ ಏನಾಗಿದೆ ಎಂದು ರೋಗ ಗುರುತಿಸದೇ ಎರಡು ಮಾತ್ರೆಗಳನ್ನು ಕೊಟ್ಟು ಕಳುಹಿಸುತ್ತಾರೆ. ಕೆಲವು ಸಂದರ್ಭದಲ್ಲಿ ಸೂಜಿ ಹಾಕಬೇಕಾದ ಪ್ರಸಂಗ ಬಂದಾಗಲೂ ಕೂಡ ಹೊರಗಡೆ ನಿಂತುಕೊಂಡೆ ಸೂಜಿ ಹಾಕಿ ಕಳಿಸುವಂತಹ ಹಳ್ಳಿವಳಗಡೆ ಡಾಕ್ಟರು ನಡೆಯುವ ಪದ್ಧತಿ.

ಗದ್ವಾಲ್

ಆಂಧ್ರಪ್ರದೇಶದಿಂದ ದುಡಿಯಲು ಆಗಮಿಸಿದ ಅಲ್ಲಿನ ಮಾದಿಗರು ಕರ್ನಾಟಕದಲ್ಲಿ ಬಂದು ಗದ್ವಾಲ್ ಎಂದು ಹೆಸರು ಪಡೆದಿದ್ದಾರೆ. ಇವರುಗಳಿಗೆ ಊರಿನ ಗ್ರಾಮದಲ್ಲಿ ಹೋಟೆಲ್, ದೇವಸ್ಥಾನ ಇನ್ನಿತರ ಆಚರಣೆಗಳಲ್ಲಿ ಪ್ರವೇಶವಕಾಶವಿದೆ. ಕರ್ನಾಟಕದ ಮಾದಿಗರಿಗೆ ಅವಕಾಶವಿಲ್ಲ. ಇದು ಎಂತದ್ದು ಎಂದು ನಮ್ಮ ಜನ ಪ್ರಶ್ನೆ ಮಾಡಿಕೊಳ್ಳುತ್ತಿದ್ದಾರೆ. ಕೆಲವರು ಕ್ರೈಸ್ತ ಧರ್ಮ ಸೇರಿಕೊಳ್ಳುತ್ತಿದ್ದಾರೆ. ಈಗ ಕ್ರಿಶ್ಚಿಯನ್ ಧರ್ಮಕ್ಕೆ ಸೇರಿಕೊಳ್ಳುವ ಜನರಿಗೆ ಅಲ್ಲಿ ಅವಕಾಶಗಳಿವೆ, ಸಮಾನತೆಯಿದೆ ಎಂಬ ಕಾರಣಕ್ಕಾಗಿ ಹೋಗುತ್ತಾರೆ. ಇಂತಹ ಪರಿಸ್ಥಿತಿ ಅವಲೋಕನ ಮಾಡಿದಾಗ ಇಪ್ಪತ್ತೊಂದನೆ ಶತಮಾನಕ್ಕೆ ಕಾಲಿಡುವ ಸಂದರ್ಭದಲ್ಲಿ ಸಮಾನತೆಯ ದೃಷ್ಟಿಕೋನದಲ್ಲಿ ನೋಡಬೇಕೆಂದು ಕ್ರಾಂತಿಕಾರಿ ಬಸವಣ್ಣನವರ ಚಳುವಳಿಯನ್ನು ಅರಿತುಕೊಂಡಾಗಲು ಸಹ ಈ ರಾಯಚೂರು ಜಿಲ್ಲೆಯ ಸವರ್ಣೀಯರು ಬಸವಣ್ಣ ಇನ್ನಿತರ ಶರಣರ ಸಿದ್ಧಾಂತವನ್ನು ಗಾಳಿಗೆ ತೂರಿ ಮಾದಿಗ ಜನರನ್ನು ಶೋಷಣೆಗೆ ಈಡು ಮಾಡುತ್ತಿರುವುದು ದುಃಖಕರವಾದ ಸಂಗತಿಯಾಗಿದೆ. ಇಂತಹ ಪದ್ಧತಿಯನ್ನು ಹೋಗಲಾಡಿಸಲು ಪ್ರಗತಿಪರ ಸಂಘಟನೆಗಳು ರೂಪಗೊಂಡು ಆ ಜನಾಂಗದ ಭವಿಷ್ಯವನ್ನು ಉತ್ತಮಗೊಳಿಸಲು ಚಿಂತಕರಾಗಿ ಕೆಲಸ ಮಾಡಬೇಕಾಗುತ್ತದೆಂಬುದನ್ನು ಈ ಎಲ್ಲಾ ಅಂಶಗಳಿಂದ ನಾವು ಪಾಠ ಕಲಿಯಬೇಕಾಗುತ್ತದೆ.

“ಅವರ ಕಣ್ಣಂಚಿನಲ್ಲಿ ನೀರಾಡತೊಡಗಿತ್ತು”

ಸೈದ್ಧಾಂತಿಕ ಹೋರಾಟದ ಒಂದು ಅನುಭವ

ನಿತ್ಯಾನಂದ ಸ್ವಾಮಿ

ಅದೊಂದು ಸಿಪಿಐ(ಎಂ) ಪಕ್ಷದ ಗ್ರಾಮೀಣ ಶಾಖೆಯೊಂದರ ಸಭೆಯಾಗಿತ್ತು. ನಾನು ಪಕ್ಷದ ಜಿಲ್ಲಾ ಸಮಿತಿಯ ಕಾರ್ಯ ದರ್ಶಿಯಾಗಿ ಸಭೆಯಲ್ಲಿ ಭಾಗವಹಿಸಲು ಬಂದಿದ್ದೆ. ಜಿಲ್ಲಾ ಸಮಿತಿಯ ಇನ್ನೋರ್ವ ಸದಸ್ಯರೂ ಸಭೆಯಲ್ಲಿ ಹಾಜರಿದ್ದರು. ಸುಮಾರು ಏಳೆಂಟು ಜನ ಸದಸ್ಯರಿರುವ ಶಾಖೆಯದು. ಅವರಲ್ಲಿ ಕೆಲವರು ಸಣ್ಣ ಮತ್ತು ಮಧ್ಯಮ ವರ್ಗದ ರೈತರು. ಉಳಿದವರು ಭೂಹೀನ ಕೂಲಿಕಾರರು. ರೈತ ವಿಭಾಗದಿಂದ ಬಂದ ಸದಸ್ಯರು ಮುಖ್ಯವಾಗಿ ಸವರ್ಣೀಯರೆಂದು ಗುರುತಿಸಲಾಗುತ್ತಿರುವ ವೀರಶೈವ ಸಮಾಜಕ್ಕೆ ಸೇರಿದವರಾಗಿದ್ದರು. ಸಣ್ಣ ರೈತರು ಮತ್ತು ಕೂಲಿಕಾರರು ದಲಿತ, ಹಿಂದುಳಿದ ಮತ್ತು ಅಲ್ಪಸಂಖ್ಯಾತ ಸಮುದಾಯಗಳಿಗೆ ಸೇರಿದವರಾಗಿದ್ದರು. ಇವರೆಲ್ಲರು ಆ ಪ್ರದೇಶದಲ್ಲಿ ಬೆಳೆಯಲಾರಂಭಿಸಿರುವ ರೈತ ಮತ್ತು ಕೂಲಿಕಾರರ ಚಳುವಳಿಗಳ ಮುಖ್ಯ ಕಾರ್ಯಕರ್ತರಾಗಿದ್ದರು. ಪಕ್ಷದ ಗ್ರಾಮೀಣ ಸದಸ್ಯರಿಗೆ 2 ದಿನಗಳ ಅಧ್ಯಯನ ಶಿಬಿರವೊಂದನ್ನು ಆ ಗ್ರಾಮದಲ್ಲಿ ನಡೆಸಲು ಪಕ್ಷದ ಜಿಲ್ಲಾ ಸಮಿತಿ ನಿರ್ಧರಿಸಿತ್ತು. ಶಿಬಿರಾರ್ಥಿಗಳ ಎರಡು ದಿನಗಳ ಊಟ ವಸತಿಗೆ ವ್ಯವಸ್ಥೆ ಮಾಡುವುದನ್ನು ಈ ಶಾಖೆಗೆ ವಹಿಸಿ ಕೊಡಲಾಗಿತ್ತು. ಶಿಬಿರದ ವ್ಯವಸ್ಥೆಯ ಕುರಿತು ವಿವರವಾಗಿ ಚರ್ಚಿಸಿ ಜವಾಬ್ದಾರಿಗಳನ್ನು ಹಂಚಿಕೊಳ್ಳುವುದೇ ಶಾಖೆಯ ಅಂದಿನ ಸಭೆಯ ಮುಖ್ಯ ಉದ್ದೇಶವಾಗಿತ್ತು.

ಶಾಖೆಯ ಕಾರ್ಯದರ್ಶಿಯವರ ಮನೆಯ ಒಂದು ಕೋಣೆಯಲ್ಲಿ ಸದಸ್ಯರು ಸಭೆ ಸೇರಿದ್ದರು. ಚಿಕ್ಕ ಮಕ್ಕಳ ಓಡಾಟವಾಗಲೀ, ಬೇರೆ ಯಾವ ಗದ್ದಲವಾಗಲಿ ಇರಲಿಲ್ಲ. ಕುಟುಂಬದ ಮಹಿಳಾ ಸದಸ್ಯರು ಅಡುಗೆ ಕೋಣೆಯಲ್ಲಿ ತಮ್ಮ ನಿತ್ಯದ ಕೆಲಸಗಳಲ್ಲಿ ನಿರತರಾಗಿದ್ದರು.

ಸಭೆಗೊಬ್ಬ ಅಧ್ಯಕ್ಷನನ್ನು ಆಯ್ಕೆ ಮಾಡುವುದರೊಂದಿಗೆ ಸಭೆ ಪ್ರಾರಂಭವಾಯಿತು. ಶಾಖೆಯ ಕಾರ್ಯದರ್ಶಿಗಳು ಸಭೆಯ ಮುಖ್ಯ ವಿಷಯವನ್ನು ಪ್ರಸ್ತಾಪಿಸಿದರು.

ದಾನಿಗಳಿಂದ ಆಹಾರ ಪದಾರ್ಥಗಳನ್ನು ಮತ್ತು ಆರ್ಥಿಕ ನೆರವನ್ನು ಸಂಗ್ರಹಿಸಿ ಒಂದು ಕಡೆ ಸಾಮೂಹಿಕವಾಗಿ ಅಡಿಗೆಮಾಡಿ ಬಡಸುವುದಕ್ಕಿಂತ ಶಿಬಿರಾರ್ಥಿಗಳಲ್ಲಿ ಒಬ್ಬೊಬ್ಬರಿಗೆ ಪಕ್ಷದ ಒಬ್ಬೊಬ್ಬ ಸದಸ್ಯರ ಮತ್ತು ಹಿತೈಷಿಗಳ ಒಂದೊಂದು ಮನೆಯಲ್ಲಿಯೇ ಊಟ ಹಾಗೂ ವಸತಿ ವ್ಯವಸ್ಥೆ ಮಾಡುವುದು ಹೆಚ್ಚು ಸುಲಭವಾಗಬಹುದು ಎಂಬ ಸೂಚನೆಯನ್ನು ಚರ್ಚೆಗಾಗಿ ಅವರ ಮುಂದೆ ಮಂಡಿಸಲಾಯಿತು.

ಒಬ್ಬೊಬ್ಬ ಸದಸ್ಯರು ಈ ಸೂಚನೆಗೆ ತಕ್ಷಣ ತಮ್ಮ ಸಹಮತ ವ್ಯಕ್ತಪಡಿಸಿದರು. ವಯಸ್ಸಿನಲ್ಲಿ ಹಿರಿಯರು ಆದರೆ ಪಕ್ಷದಲ್ಲಿ ಹೊಸಬರಾದ ಒಬ್ಬ ಸದಸ್ಯರು ಈ ಸೂಚನೆಗೆ ಆಕ್ಷೇಪ ವ್ಯಕ್ತಪಡಿಸುತ್ತಾ-“ ಒಬ್ಬೊಬ್ಬರ ಮನೆಯ ಪರಿಸ್ಥಿತಿ ಒಂದೊಂದು ರೀತಿಯದ್ದಾಗಿರುತ್ತದೆ. ಶಿಬಿರಾರ್ಥಿಗಳಲ್ಲಿ ಒಬ್ಬೊಬ್ಬರಿಗೆ ಒಂದೊಂದು ಬಗೆಯ ಆತಿಥ್ಯ ನೀಡಿದಂತಾಗುತ್ತದೆ. ಊಟ ವಸತಿ ವಿಷಯದಲ್ಲಿ ತಾರತಮ್ಯ ಮಾಡಿದಂತಾ ಗುತ್ತದೆ. ಹೀಗಾಗಬಾರದು” ಎಂದರು

“ಶಿಬಿರಕ್ಕೆ ಬರುವವರು ಕಮ್ಯುನಿಸ್ಟ್ ಪಕ್ಷದ ಸದಸ್ಯರು. ಶಿಬಿರಕ್ಕೆ ಬರುವಾಗ ಅವರ್‍ಯಾರು ಮೃಷ್ಟಾನ್ನ ಭೋಜನವನ್ನಾಗಲಿ ಸುಖ ಸೌಕರ್ಯಗಳನ್ನಾಗಲಿ ನಿರೀಕ್ಷೆ ಮಾಡಿಕೊಂಡು ಬರುವುದಿಲ್ಲ” ಎಂದು ಶಾಖೆಯ ಸಭೆಯಲ್ಲಿ ಭಾಗವಹಿಸಿದ್ದ ಜಿಲ್ಲಾ ಸಮಿತಿಯ ಸದಸ್ಯರು ತಮ್ಮ ಅಭಿಪ್ರಾಯ ನೀಡಿದರು.

“ಶಿಬಿರಾರ್ಥಿಗಳಿಗೆ ಶಿಬಿರದಲ್ಲಿ ಪ್ರಯೋಜನಕಾರಿಯಾಗಿ ಭಾಗವಹಿಸಲು ಅಡೆತಡೆಯಾಗದಂತೆ ಕನಿಷ್ಠ ಸೌಕರ್ಯಗಳನ್ನು ಒದಗಿಸಿದರೆ ಸಾಕು” ಎಂದು ನಾನು ಜಿಲ್ಲಾ ಸಮಿತಿಯ ಕಾರ್ಯದರ್ಶಿಯಾಗಿ ಸ್ಪಷ್ಟೀಕರಣ ನೀಡಿದೆ.

ಇಷ್ಟಾದರೂ ಶಾಖೆಯ ಬಹುತೇಕ ಸದಸ್ಯರು ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಿರಲಿಲ್ಲ. ಎಲ್ಲ ಸದಸ್ಯರು ಮುಕ್ತವಾಗಿ ತಮ್ಮ ಅಭಿಪ್ರಾಯಗಳನ್ನು ಹೇಳಬೇಕು ಎಂದು ಸಭೆಯ ಅಧ್ಯಕ್ಷತೆ ವಹಿಸಿದ್ದ ಸದಸ್ಯರು ಅನೇಕ ಸಲ ಕೇಳಿಕೊಂಡರೂ ಸದಸ್ಯರು ತಮ್ಮ ಅಭಿಪ್ರಾಯಗಳನ್ನು ಹೇಳಲು ಸಂಕೋಚ ಪಡುತ್ತಿರುವುದು ವ್ಯಕ್ತವಾಗತೊಡಗಿತು. ಸದಸ್ಯರೆಲ್ಲರ ಕಣ್ಣುಗಳು ಒಬ್ಬ ಸದಸ್ಯನತ್ತ ತಿರುಗುತ್ತಿದ್ದವು.

ಹೌದು, ಆತನು ಆ ಶಾಖೆಯ ಕೇಂದ್ರ ಬಿಂದು. ಆತನ ಅಭಿಪ್ರಾಯಕ್ಕೆ ತೂಕ ಹೆಚ್ಚು ಎಂದೇ ಉಳಿದವರ ಅಭಿಪ್ರಾಯ. ಯಾವ ಕಾರ್ಯಕ್ರಮಕ್ಕೂ ಆತನ ಅಭಿಪ್ರಾಯವನ್ನೇ ಅವಲಂಬಿಸಲಾಗುತ್ತಿತ್ತು. ಆತನು ತನ್ನ ಅಭಿಪ್ರಾಯ ಹೇಳಲು ಯಾವಾಗಲೂ ಸಂಕೋಚಪಟ್ಟವನಲ್ಲ. ಪಕ್ಷಕ್ಕೆ ಹೊಸಬನಾಗಿದ್ದರೂ ಆತನ ಮುಂದಾಳತ್ವಕ್ಕೆ ಉಳಿದವರು ಮಾರುಹೋಗಿದ್ದರು. ಗ್ರಾಮದಲ್ಲಿಯೂ ಅವರದೊಂದು ಪ್ರತಿಷ್ಠಿತ ಮನೆತನ. ಅವರು ತಾಳುವ ನಿಲುಮೆಗಳಿಗೆ ಗ್ರಾಮಸ್ಥರು ಸಾಮಾನ್ಯವಾಗಿ ತಲೆಬಾಗುತ್ತಿದ್ದರು.

ರೈತ ಸಂಘದ ಹೋರಾಟಗಳಿಗೆ ಆಕರ್ಷಿತರಾಗಿ ಬಂದು ಇತ್ತೀಚಿಗೆ ಪಕ್ಷದ ಸದಸ್ಯತ್ವ ಪಡೆದಿದ್ದರು.

ಶಾಖೆಯ ಸಭೆಯಲ್ಲಿ ಪ್ರಸ್ತಾಪವಾಗುವ ಯಾವುದೇ ವಿಷಯದ ಬಗ್ಗೆ ಆತನೆ ಪ್ರಥಮ ಅಭಿಪ್ರಾಯ ನೀಡುತ್ತಿದ್ದನು. ಸೂಚಿತ ಕಾರ್ಯಕ್ರಮದ ಪರವಾಗಿ ಆತನ ಅಭಿಪ್ರಾಯ ಬಂದರೆ ಉಳಿದ ಸದಸ್ಯರು ಆತಂಕವಿಲ್ಲದೆ ಸಹಮತ ವ್ಯಕ್ತಪಡಿಸುತ್ತಿದ್ದರು. ಕಾರ್ಯಕ್ರಮದ ಪರವಾಗಿ ಆತನ ಅಭಿಪ್ರಾಯ ದೊರೆಯಿತೆಂದರೆ ಆ ಕಾರ್ಯಕ್ರಮ ಯಶಸ್ವಿಯಾದಂತೆ. ಆತನ ಅಭಿಪ್ರಾಯ ನಕಾರಾತ್ಮವಾಗಿ ಬಂದರೆ ಕಾರ್ಯಕ್ರಮ ನಡೆಸುವುದೇ ಅಸಾಧ್ಯ ಎಂದು ತೀರ್ಮಾನಕ್ಕೆ ಬರಲಾಗುತ್ತಿತ್ತು. ಶಾಖೆಯ ಈ ದೌರ್ಬಲ್ಯ ನನ್ನ ಕಣ್ಣಿಗೆ ಕಟ್ಟಿದಂತಾಯಿತು.

ಆದರೆ ಸಮಸ್ಯೆ ಅಷ್ಟಕ್ಕೇ ಸೀಮಿತವಾಗಿರಲಿಲ್ಲ, ಆತನು ಅಂದು ಸಭೆಯಲ್ಲಿ ತನ್ನ ಅಭಿಪ್ರಾಯ ಹೇಳಲು ಯಾಕೆ ಹಿಂದೇಟು

ಪುಟ 10 ನೋಡಿ

ಉಳಿಗಮಾನ್ಯ ಅರಸರ ಸೊಂಟಕ್ಕೆ ದುಡಿಯುವ ಜನತೆಯ ಒಗ್ಗಟ್ಟಿನ ಪೆಟ್ಟು

*ಬಳ್ಳಾರೀ ತಾಲೂಕಿನ ಕುರುಗೋಡು ಗ್ರಾಮ ವಿಧಾನಸಭಾ ಕ್ಷೇತ್ರವೂ ಹೌದು. ಅತ್ಯಂತ ಹಿಂದುಳಿದ ಆದರೆ ನೀರಾವರಿಗೊಳ ಪಡುತ್ತಾ ಮೇಲ್ಜಾತಿ ಭೂಮಾಲೀಕ- ಗೌಡರುಗಳನ್ನು ಬೆಳೆಸುತ್ತಾ, ಅವರ ದರ್ಪ-ದೌರ್ಜನ್ಯಗಳು ಮೆರೆಯುತ್ತಿರುವ ಪ್ರದೇಶ ಈ ಕುರುಗೋಡು. ಇಲ್ಲಿ ಅಸ್ಪೃಶ್ಯತೆಯ ಆಚರಣೆ - ಜಾತಿ ಭೇದಗಳು ಶೋಷಣೆ ಇನ್ನೂ ಬಿಗಿಯಾಗಿಯೇ ಇವೆ. ಮೇಲ್ಜಾತಿ ಲಿಂಗಾಯತ ಗೌಡರಿಗೆ 'ಧಣಿ ಧಣಿ' ಎಂದು ದಲಿತರು ದಮ್ಮಯ್ಯ ಹಾಕಬೇಕು. ಅವರು ಕರೆದರೆ ಕೂಲಿಕೆಲಸ ಇಲ್ಲವಾದರೆ ಉಪವಾಸ. ಗೌಡರ ಓಣಿ ಪ್ರವೇಶಿಸಬೇಕಾದರೆ ನಡು ಬಗ್ಗಿಸಿ ನಡೆಯಬೇಕು. ಹೋಟೆಲುಗಳಿಗೆ ಪ್ರವೇಶ ನಿಷಿದ್ಧ. ಇನ್ನು ದೇವಾಲಯಗಳಿಗೆ......? ಆದರ ಮಾತೇ ಇಲ್ಲ. ಹಾಗೆ ಮಾಡಿದರೆ ಗುಡಿಸಲು.... ಮೈ ಮೂಳೆಗಳು ಇರಬೇಕಲ್ಲ! ರಾಜಶೇಖರ ಗೌಡ ಇಂತಹ ಪಾಳ್ಯಕ್ಕೆ ನಾಯಕ. ಇಲ್ಲೆಲ್ಲಾ ಅವರದ್ದೇ ಆಧಿಪತ್ಯ. ಕೂಲಿ-ನಾಲಿಗೆ ಇಂತಹವರನ್ನೇ ಅವಲಂಬಿಸುವ ಸ್ಥಿತಿ ದಲಿತರಿಗೆ. ಇಂತಹ ಶೋಷಣೆ, ದಬ್ಬಾಳಿಕೆಗಳೆದುರು ಅಲ್ಲಿಯ ಜನತೆ ಸಿಪಿಐ(ಎಂ) ಮತ್ತು ಪ್ರಾಂತ ರೈತ ಸಂಘದ ನೇತೃತ್ವದಲ್ಲಿ ಸಂಘಟಿತರಾಗಲು ಮುಂದಾದಾಗ ಸಂಘಟನೆಯ ಮುಖಂಡರುಗಳ ಮೇಲೆ ತೀವ್ರವಾಗಿ ಹಲ್ಲೆಗಳನ್ನು ಆರಂಭಿಸಲಾಯಿತು. ಕೊಲೆ ನಡೆಸಿ ನಿರ್ನಾಮ ಮಾಡುವ ಬೆದರಿಕೆ ಹಾಕಲಾಯಿತು. ಇಂತಹ ದಾಳಿ ದಬ್ಬಾಳಿಕೆಗಳಿಗೆ ಬಗ್ಗದೇ ಸಂಘಟನೆ ಬೆಳೆಯುತೊಡಗಿತು. ಈ ಗೌಡರು ಗಳ ದೌರ್ಜನ್ಯಗಳಡಿಯಲ್ಲಿ ನಲುಗಿರುವ ತುಳಿತಕ್ಕೊಳಗಾದ ಜನಗಳಿಗೆ ಈಗೀಗ ಧ್ವನಿ ಬರತೊಡಗಿದೆ. ಆದಾಗ್ಯೂ ಈ ಪ್ರದೇಶದಲ್ಲಿ ಪಾಳೇಗಾರಿ ಶಕ್ತಿಗಳ ಹಿಡಿತ ಬಿಗಿಯಾಗಿದ್ದು ಸಂಘರ್ಷ ನಡೆಯುತ್ತಿದೆ. ಇಂತಹ ಉಸಿರುಗಟ್ಟಿಸುವ ವಾತಾವರಣದಲ್ಲಿ ಅಮಾನುಷೀಯ ಅಸ್ಪೃಶ್ಯತೆಯ ವಿರುದ್ಧ ದಲಿತರು ಬಂಡಾಯ ಸಾರಿದ ಒಂದು ಘಟನೆಯನ್ನು ಕೃಷಿಕೂಲಿಕಾರರ ಸಂಘದ ಸಂಚಾಲಕ **ಪಿ.ಆರ್.ವೆಂಕಟೇಶ್** ಇಲ್ಲಿ ವಿವರಿಸಿದ್ದಾರೆ.*

ಹಕ್ಕಿಗಳು ಎಲ್ಲೆಂದರಲ್ಲಿ ಗೂಡುಕಟ್ಟುತ್ತವೆ. ಮನೆಗಳಲ್ಲಿ, ಗುಡಿಗಳಲ್ಲಿ, ಗುಡಿಗಂಟೆಯ ಮೇಲೆ, ಗರ್ಭಗುಡಿಯಲ್ಲಿಯೂ. ಜೇಡಗಳಿಗಂತೂ ಇಂಥಹದ್ದೇ ಅನ್ನುವ ಜಾಗವೇ ಇಲ್ಲ. ಸ್ವಲ್ಪ ಮೂಲೆ ಸಿಕ್ಕರೆ ಸಾಕು ಬಲೆ ಹೆಣೆದು ಖಾಯಂ ಆಗಿಬಿಡುತ್ತವೆ. ಗುಡಿ ಪೂಜಾರಿಗಳಿಗಂತೂ ಇಂತಹ ಪ್ರಾಣಿಗಳ ಬಗ್ಗೆ ಎಲ್ಲಿಲ್ಲದ ಅನುಕಂಪ. “ದೇವರ ದಯೆ, ಪ್ರಾಣಿಗಳಿಗೂ ನೆರಳು ಇದೆ” ಎಂಬ ಅತಿ ಮಧುರ ವಾದ ನುಡಿಗಳು ಅವರ ಬಾಯಿಂದ ಹೊರಬೀಳುತ್ತವೆ. ಆದರೆ, ಜಾತಿ ಅಸಮಾನತೆಯ ಸಮಾಜದಲ್ಲಿ ಮೇಲುಕೀಳು ಭಾವನೆಗಳು ಮನುಷ್ಯರನ್ನು ಮನುಷ್ಯರಂತೆ ಕಾಣುವ ಬದಲು ಹುಳು ಹುಪ್ಪಟೆಗಳಿಗಿಂತ ಕೀಳಾಗಿ ಕಾಣುವ ಪರಿಪಾಠ ಇದೆ. ಇಂತಹ ಅವಮಾನವೀಯ ಪ್ರಸಂಗದ ವಿರುದ್ಧ ಕುರುಗೋಡಿನಲ್ಲಿ ಹೋರಾಟ ನಡೆಯಿತು.

ಏಳುಬೆಂಚಿ ಗ್ರಾಮದ ಕೃಷಿಕೂಲಿಕಾರರ ಹರಿಜನ ಕುಟುಂಬದ ಮದುವೆ ಕಾರ್ಯ ನಡೆಸಲು ಕುರುಗೋಡಿನಲ್ಲಿರುವ ಸಮುದಾಯ ಭವನವನ್ನು ನಂಬಿ ಬಂದರು. ಸದ್ರಿ ಸಮುದಾಯ ಭವನವು ಕುರುಗೋಡಿನಲ್ಲಿರುವ ದೊಡ್ಡ ಬಸಪ್ಪನ ಗುಡಿಯ ಕಾಂಪೌಂಡಿನೊಳಗೆ ಸೇರಿರುವುದರಿಂದ ದೇವಸ್ಥಾನದ ಟ್ರಸ್ಟಿಯ ಅಧಿಕಾರ ಇದರ ಮೇಲೂ ಬಂದಿದೆ. ಸಮುದಾಯ ಭವನ ಸಾರ್ವಜನಿಕರದ್ದಾಗಿದ್ದರೂ ಇದರ ಕೀಲಿಕೈ ಟ್ರಸ್ಟಿನವರ ಕೈಯಲ್ಲಿದೆ. ಏಳುಬೆಂಚಿ ಗ್ರಾಮಸ್ಥರು ಮದುವೆ ಕಾರ್ಯಕ್ಕಾಗಿ ಸಮುದಾಯ ಭವನ ಸಿಗದೆ, ದಾರಿಕಾಣದೆ ಪ್ರಾಂತ ಕೃಷಿ ಕೂಲಿಕಾರರ ಹಾಗೂ ಪ್ರಾಂತ ರೈತ ಸಂಘದ ಮುಖಂಡರನ್ನು ಭೇಟಿಯಾಗಿ ಮುಂದಿನ ದಾರಿ ಬಗ್ಗೆ ಚರ್ಚಿಸಿದರು.

ಸಂಘದ ಮುಖಂಡರು ಮತ್ತು ಗ್ರಾಮಸ್ಥರು ಸೇರಿ ಟ್ರಸ್ಟಿಯವರ ಹತ್ತಿರ ಹೋಗಿ ತಂಗಲು ಸಮುದಾಯಭವನ, ಅಡುಗೆ ಮತ್ತು ಊಟಕ್ಕೆ ಪ್ರಸಾದ ನಿಲಯಗಳನ್ನು ಕೊಡಬೇಕೆಂದು. ಇದಕ್ಕೆ ತಗಲುವ ಫೀಯನ್ನು ತೆಗೆದುಕೊಂಡು ರಶೀದಿಯನ್ನು ಕೊಡಬೇಕೆಂದು ಕೇಳಲಾಯಿತು. ಟ್ರಸ್ಟಿಯವರು ಪ್ರಸಾದ ನಿಲಯವನ್ನು ಕೊಡಲು ಅಧ್ಯಕ್ಷರ ಅಪ್ಪಣೆ ಬೇಕು, ಬೇಕಿದ್ದರೆ ಸಮುದಾಯಭವನ ಕೊಡುತ್ತೇವೆ, ನಾಳೆ ಬಂದು ಕೀ ತೆಗೆದುಕೊಳ್ಳಿ” ಎಂದು ತಿಳಿಸಿ “ಫೀ ನಾಳೆ ಕಟ್ಟಿರಿ” ಎಂದು ತಿಳಿಸಿದರು. ಫೀ ತೆಗೆದುಕೊಳ್ಳದೇ ಇರುವುದರಿಂದ ಅನುಮಾನಿಸಿ ರಶೀದಿ ಹರಿದುಕೊಡಿ ಎಂದು ಎಷ್ಟೇ ಒತ್ತಾಯಿಸಿದರೂ ರಶೀದಿ ಕೊಡದೆ “ನನ್ನ ಮಾತು ಎಂದರೆ ಒಂದೇ ಮಾತು. ಸುಳ್ಳಾಡಿದರೆ ನಾಲಿಗೆ ಕೊಯ್ಯಿರಿ” ಎಂದು ನಂಬಿಸಿದರು. ಇದನ್ನು ನಂಬಿ ಮರುದಿನ ಬೆಳಿಗ್ಗೆ ಮದುವೆಯ ಜನರೊಂದಿಗೆ ಎಲ್ಲಾ ಸಾಮಾನುಗಳನ್ನು ತಂದು ಭವನದ ಮುಂದೆ ಇಳಿಸಿ ಕೀ ತರಲು ಹೋದಾಗ....

ಆಸಾಮೀ ನಾಪತ್ತೆಯಾಗಿದ್ದ. ಮನೆಗೆ, ಆತನ ಇನ್ನೊಂದು ಮನೆಗೆ ಬಜಾರದ ಎಲ್ಲೆಡೆ ಹುಡುಕಿದರೂ ಸಿಕ್ಕದೇ ಯಾವುದೋ ನೆವವೊಡ್ಡಿ ಪರಾರಿಯಾಗಿದ್ದ. ಕೀ ಸಿಗಲಿಲ್ಲ, ಯಾರನ್ನೂ ಕೇಳಿದರೂ ಸರಿಯಾದ ಮಾಹಿತಿ ಸಿಗಲಿಲ್ಲ. ಕಂಗಾಲಾದ ಕುಟುಂಬದವರು ಸಂಘದ ನಾಯಕರನ್ನು ಭೇಟಿಯಾದರು.

ಪ್ರಾಂತ ಕೃಷಿ ಕೂಲಿಕಾರರ ಸಂಘ, ಪ್ರಾಂತ ರೈತ ಸಂಘ, ಡಿವೈಎಫ್‌ಐ, ಅಂಗನವಾಡಿ ನೌಕರರ ಸಂಘ, ದೇವದಾಸಿ ವಿಮೋಚನಾ ಸಂಘ, ಹಮಾಲಿಗಳ ಸಂಘ, ಎಸ್‌ಎಫ್‌ಐ ಮತ್ತು ಕೆಲವು ದಲಿತ ಮುಖಂಡರು ಸಭೆ ಸೇರಿ ಈ ಅವಮಾನವೀಯ ಪರಿಸ್ಥಿತಿಯ ವಿರುದ್ಧ ಹೋರಾಡಲು ತೀರ್ಮಾನಿಸಿ ಟ್ರಸ್ಟಿಯ ನಯವಂಚನೆಯ ನೀತಿಯನ್ನು ಖಂಡಿಸಿ - ಎಲ್ಲಾ ಕಾರ್ಯಕರ್ತರು ಸೇರಿ ಪೋಲೀಸ್ ಠಾಣೆಗೆ ದೂರು ನೀಡಿ, ಪ್ರಸಾದ ನಿಲಯದಲ್ಲಿ ಕಡ್ಡಾಯವಾಗಿ ಎಲ್ಲರಿಗೂ ಅವಕಾಶ ಕೊಡಬೇಕು ಹಾಗೂ ಈಗ ಸದ್ರಿ ಮದುವೆಯು ಅದೇ ನಿಲಯದಲ್ಲಿ ನಡೆಯಬೇಕೆಂಬ ಬೇಡಿಕೆಯನ್ನಿಟ್ಟು ಪೋಲೀಸ್ ಅಧಿಕಾರಿಗಳಿಗೆ ಹೋರಾಟದ ಮೂಲಕ ಒತ್ತಡವನ್ನು ತರಲಾಯಿತು. ಸಂಘಗಳ ಮನವಿಗೆ ತಕ್ಷಣ ಪೋಲೀಸ್ ಅಧಿಕಾರಿಗಳು ಟ್ರಸ್ಟೀಯವರಿಗೆ ತಿಳಿಸಿ ಈ ಅನ್ಯಾಯವನ್ನು ಕೂಡಲೇ ಸರಿಪಡಿಸಿ ಇಲ್ಲದಿದ್ದರೆ ಬೀಗ ಮುರಿದು ಮುನ್ನುಗ್ಗಬೇಕಾಗುತ್ತದೆ ಎಂದು ತಿಳಿಸಿ ಕೊನೆಗೆ ಪೋಲೀಸರ ಜೊತೆಗೆ ಬಂದು ಬೀಗ ಮುರಿದು ಪ್ರಸಾದ ನಿಲಯದಲ್ಲಿ ಮದುವೆ ಕಾರ್ಯ ನಡೆಯುವಂತೆ ಮಾಡಲಾಯಿತು. ಇದರಿಂದಾಗಿ ಅಸ್ಪೃಶ್ಯತೆಯ ಆಚರಣೆಗೆ ಕೊಟ್ಟ ಮೊದಲ ಪೆಟ್ಟು ಇದಾಗಿದೆ. ಇದು ಕೆಲವರಿಗೆ ಅಂದರೆ ಮನುಷ್ಯತ್ವವನ್ನು ಕಳೆದುಕೊಂಡಿರುವ ಜಾತಿಯ ಭೂತಗಳ ಕಣ್ಣು ಕೆಂಪಾಗಿಸಿದೆ. ಆದರೆ ಮದುವೆಯಲ್ಲಿ ಪಾಲ್ಗೊಂಡ ಹರಿಜನ ಕುಟುಂಬಗಳಲ್ಲಿ ಸಂಘದ ಬಗ್ಗೆ ಆತ್ಮವಿಶ್ವಾಸ ಮೂಡಿಸಿದೆ.

ಕುರುಗೋಡಿನಲ್ಲಿ ಕೃಷಿ ಕೂಲಿಕಾರರ ಮತ್ತು ರೈತರ ಹೋರಾಟ



ಕುರುಗೋಡು: ಬಳ್ಳಾರಿ ಜಿಲ್ಲೆಯ ಕುರುಗೋಡು ವಿಭಾಗದ ನಾಡ ಕಾರ್ಯಾಲಯದ ಎದುರು 6 ದಿನಗಳ ತನಕ ಕೃಷಿ ಕೂಲಿಕಾರರು ಸರದಿ ಉಪವಾಸ ಸತ್ಯಾಗ್ರಹವನ್ನು ನಡೆಸಿದರು. ಸತ್ಯಾಗ್ರಹದ ಪ್ರಾರಂಭದ ದಿನದಂದು ಕಂಬಾವುಟಗಳನ್ನು ಹಿಡಿದು ಮೆರವಣಿಗೆಯ ಮೂಲಕ ಸತ್ಯಾಗ್ರಹದಲ್ಲಿ ಪಾಲ್ಗೊಂಡರು.

ನ್ಯಾಯ ಬೆಲೆ ಅಂಗಡಿಗಳಲ್ಲಿ ದೊರಕುವ ಆಹಾರ ಸಾಮಾಗ್ರಿಗಳು ಕಳಪೆ ಗುಣ ಮಟ್ಟದಿಂದ ಕೂಡಿವೆ. ಇತ್ತೀಚೆಗೆ ಕೆಲವು ನ್ಯಾಯ ಬೆಲೆ ಅಂಗಡಿಗಳಲ್ಲಿ ವಿತರಿಸಿದ ಅಕ್ಕಿ, ಗೋಧಿಯನ್ನು ಸತ್ಯಾಗ್ರಹಿಗಳು ಸಾರ್ವಜನಿಕ ಪ್ರದರ್ಶನಕ್ಕೆ ಇಟ್ಟಿದ್ದರು. ಸಾಮಾನ್ಯವಾಗಿ ದನಗಳೂ ಸಹ ಮೂಸಿ ನೋಡದ ಅಕ್ಕಿಯನ್ನು ವಿತರಿಸಲಾಗಿದೆ.

ನ್ಯಾಯ ಬೆಲೆ ಅಂಗಡಿಗಳಲ್ಲಿ ವ್ಯವಸ್ಥಿತ ರೀತಿಯಲ್ಲಿ ಆಹಾರ ಧಾನ್ಯಗಳನ್ನು ವಿತರಿಸದೇ ಇರುವುದು, ಅವುಗಳ ಬೆಲೆ ಏರಿಸಿರುವುದು, ಸೀಮೆಎಣ್ಣೆಯಲ್ಲಿನ ಅವ್ಯವಹಾರ, ಹಳೇಯ ಯುನಿಟ್ ಲೆಕ್ಕಾಚಾರವನ್ನು ಈಗಲೂ ಮುಂದುವರೆಸುತ್ತಿರುವುದು, ಹಸಿರು ಕಾರ್ಡಗಳ ವಿತರಣೆಯಲ್ಲಿ ನಡೆದಿರುವ ಭ್ರಷ್ಟಾಚಾರ, ಅನ್ಯಾಯ, ಅಕ್ರಮಗಳ ಬಗ್ಗೆ ತನಿಖೆಯಾಗಿ ಶ್ರೀಮಂತರಿಗೆ, ಭೂ ಮಾಲಿಕರಿಗೆ ಕೊಟ್ಟಿರುವ ಹಸಿರು ಕಾರ್ಡುಗಳನ್ನು ತಕ್ಷಣ ವಾಪಸ್ ಪಡೆದು ಕೃಷಿ ಕೂಲಿಕಾರರಿಗೆ ಹಂಚಬೇಕು ಎನ್ನುವ ಬೇಡಿಕೆಗಳು ಸತ್ಯಾಗ್ರಹಿಗಳದ್ದು.

ಕುರುಗೋಡಿನ ಕಳಗಳ ಪೇಟೆಯಲ್ಲಿ ಅನೇಕ ವರ್ಷಗಳಿಂದ ವಾಸಿಸುತ್ತಿರುವ ಕೃಷಿ ಕೂಲಿಕಾರರ ಗುಡಿಸಲುಗಳನ್ನು ಖಾಯಂ ಮಾಡಿ ಪಟ್ಟಾ ನೀಡುವ ಸಲುವಾಗಿ ಗ್ರಾಮ ಪಂಚಾಯ್ತಿ ತೆರಿಗೆಯನ್ನು ಕಟ್ಟಿಸಿಕೊಳ್ಳಲು ತಕ್ಷಣ ಉಪಕ್ರಮಿಸಬೇಕು. ತೆರಿಗೆ ಹಣ ಎಷ್ಟಿದೆಯೋ ಅಷ್ಟನ್ನು ಮಾತ್ರ ಕಟ್ಟಿಸಿ ಕೊಳ್ಳಬೇಕು. ವಸತಿ ಜಾಗವಿಲ್ಲದ ಕೃಷಿ ಕೂಲಿಕಾರ ಬಡವರಿಗೆ ಜಾಗವನ್ನು ಕೊಡಬೇಕು.

ಗಲಭೆ ಪೀಡಿತ ಪ್ರದೇಶವಾದ ಕೋಳೂರಿನಲ್ಲಿ ತಕ್ಷಣ ಶಾಂತಿ ನೆಲಸುವಂತೆ ಮಾಡಬೇಕು. ಆ ಗ್ರಾಮದ ಹರಿಜನ ಕುಟುಂಬಗಳಿಗೆ ಮತ್ತು ಹಲ್ಲೆಗೊಳಗಾದ ಜನತೆಗೆ ರಕ್ಷಣೆ ಹಾಗೂ ಭದ್ರತೆಯನ್ನು ಒದಗಿಸಬೇಕು ಎಂಬ ಬೇಡಿಕೆಯೊಟ್ಟಿಗೆ ಈಗಾಗಲೇ ಕೂಲಿ ಕೆಲಸಗಳು ಮುಗಿದಿದ್ದು ಕೂಲಿಕಾರರ ಜೀವನ ನಿರ್ವಹಣೆ ಕಷ್ಟದ ಪರಿಸ್ಥಿತಿಗೆ ಸಿಕ್ಕಿಕೊಂಡಿದೆ. ಕಾರಣ ಕುರುಗೋಡಿನ ಎಲ್ಲಾ ರಸ್ತೆಗಳನ್ನು ಜಿಲ್ಲಾ ತಾಲೂಕು, ಗ್ರಾಮ ಪಂಚಾಯತ್‌ಗಳು ಸಮಗ್ರ ರಿಪೇರಿ ಕೆಲಸವನ್ನು "ಕೂಲಿಗಾಗಿ ಕಾಳು" ಯೋಜನೆಯಡಿಯಲ್ಲಿ ಪ್ರಾರಂಭಿಸಿ ಕೂಲಿಕಾರರಿಗೆ ಕೆಲಸ ಒದಗಿಸಬೇಕು. ಇಂಥಹ ಕೆಲಸಗಳಲ್ಲಿ ಹೇರಳವಾಗಿ ಯಂತ್ರಗಳನ್ನು ಬಳಸದೆ ಮಾನವ ಶ್ರಮಕ್ಕೆ ಹೆಚ್ಚಿನ ಆಧ್ಯತೆಯನ್ನು ನೀಡಬೇಕು ಎಂಬ ಕೃಷಿ ಕೂಲಿಕಾರರ ಬೇಡಿಕೆಗಳನ್ನು ಸತ್ಯಾಗ್ರಹಿಗಳು ಆಗ್ರಹಿಸಿದರು.

ಅಲ್ಲದೆ ರೈತರ ಬೇಡಿಕೆಗಳಿಗೆ ಸಂಬಂಧಿಸಿದ ಸಂಪೂರ್ಣ ವಿದ್ಯುತ್ ಸೌಲಭ್ಯ, ಅತಿವೃಷ್ಟ ಪರಿಹಾರ, ಕಳಪೆ ಬೀಜ ಕಂಪನಿಗಳ ವಿರುದ್ಧ ಕಠಿಣ ಕ್ರಮ ಮತ್ತು ಇಂತಹ ಬೀಜಗಳಿಂದ ಉಂಟಾದ ಫಲ ನಷ್ಟಕ್ಕೆ ಪರಿಹಾರ ಒತ್ತಾಯಿಸಲಾಯ್ತು.

6 ದಿನಗಳ ಸತ್ಯಾಗ್ರಹದಲ್ಲಿ ಪ್ರತಿದಿನ 35 ಕ್ಕೂ ಹೆಚ್ಚು ಕೃಷಿ ಕೂಲಿಕಾರರು ಭಾಗವಹಿಸಿದ್ದರು. ಪ್ರಾರಂಭದ ದಿನದಂದು ನೂರಕ್ಕೂ ಹೆಚ್ಚು ಕೂಲಿಕಾರರು ಭಾಗವಹಿಸಿದ್ದು ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘದ ರಾಜ್ಯ ಸಮಿತಿ ಸದಸ್ಯರಾದ ಪಿ.ಆರ್.ವೆಂಕಟೇಶ್ ಸರದಿ ಉಪವಾಸ ಸತ್ಯಾಗ್ರಹದ ಉದ್ಘಾಟನೆಯನ್ನು ಮಾಡಿದರು. ನಂತರ ಪ್ರಾಂತ ರೈತ ಸಂಘದ ಜಿಲ್ಲಾ ಸಮಿತಿ ಕಾರ್ಯ ದರ್ಶಿಗಳಾದ ಯು. ಬಸವರಾಜು ರವರು ಹೋರಾಟದ ಅನಿವಾರ್ಯತೆ ಮತ್ತು ಬಿ.ಜೆ.ಪಿ.ಯ ದುರಾಡಳಿತದ ವೈಖರಿಯನ್ನು ವಿವರಿಸಿದರು.

ಈ ಸರದಿ ಉಪವಾಸ ಸತ್ಯಾಗ್ರಹವು ಕುರುಗೋಡಿನ ಗ್ರಾಮದಲ್ಲಿ ಬಿಸಿ ಬಿಸಿ ಚರ್ಚೆಗೆ ಎಡೆಮಾಡಿತು. ಕೆಲವರು ಸತ್ಯಾಗ್ರಹದಲ್ಲಿ ಭಾಗವಹಿಸುವ ಜನರನ್ನು ತಡೆಯಲು ಯತ್ನಿಸಿದರೂ ಜನರು ಅವರನ್ನು ಧಿಕ್ಕರಿಸಿ, ಛೀಮಾರಿ ಹಾಕಿ ಸತ್ಯಾಗ್ರಹದಲ್ಲಿ ಸ್ವಯಂಸ್ಫೂರ್ತಿಯಿಂದ ಪಾಲ್ಗೊಂಡರು. ಕೆಲವರು ಸತ್ಯಾಗ್ರಹಕ್ಕಾಗಿ, ಜನತೆಯ ವಸತಿ ಜಾಗದ ಅರ್ಜಿಗಳಿಗಾಗಿ ತಗಲುವ ವೆಚ್ಚವನ್ನು ಜನರಿಂದಲೇ ಸಂಗ್ರಹಿಸಿದನ್ನು ಭ್ರಷ್ಟಾಚಾರದ ಹೆಸರನ್ನು ಕೊಟ್ಟು ಅಪಪ್ರಚಾರ ಮಾಡಿದರು. ಅದಕ್ಕೆ ಜನರು ಉತ್ತರ ಕೊಟ್ಟು ಭಾಗ್ಯ ಜೋತಿ ಜನತಾಮನೆ ಹಂಚಿಕೆಯಲ್ಲಿ ನಡೆದ ಅವ್ಯವಹಾರಗಳನ್ನು ವಿಕೃತ ಮನಸ್ಸುಗಳಿಗೆ ರಾಚುವಂತೆ ಎದುರಾಡಿ ಸತ್ಯಾಗ್ರಹದಲ್ಲಿ ಪಾಲ್ಗೊಂಡರು. 6ದಿನಗಳೂ ಕೆಂಬಾವುಟದ ಪ್ರದರ್ಶನ ದುಡಿಯುವ ಜನತೆಯ ಬೇಡಿಕೆಗಳ ಘೋಷಣೆ, ಕುರುಗೋಡಿನಲ್ಲಿ ಉಂಟಾದ ರಾಜಕೀಯ ತಳಮಳಗಳ ನಡುವೆ ಅಸಂತೃಪ್ತ ಕೃಷಿ ಕೂಲಿಕಾರರು ಹೋರಾಟದ ಹಾದಿ ಹಿಡಿದಿದ್ದಾರೆ. ಈ ಹೋರಾಟದಲ್ಲಿ ಕುರುಗೋಡು, ಕಲ್ಲು ಕಂಭಾ, ಮಾರುತಿ ಕ್ಯಾಂಪ್, ಬಸವಪುರ, ಬಾದನಹಟ್ಟಿ ಗ್ರಾಮಗಳ ಘಟಕಗಳು ಪಾಲ್ಗೊಂಡಿದ್ದವು.

6ನೇ ದಿನದಂದು ಬಳ್ಳಾರಿಯ ತಹಸಿಲ್ದಾರರು ಕುರುಗೋಡಿನ ವಾರ್ಡ ಕಾರ್ಯಲಯದಲ್ಲಿ ಸತ್ಯಾಗ್ರಹಿಗಳನ್ನು ಚರ್ಚೆಗೆ ಆಹ್ವಾನಿಸಿದರು. ಈ ಚರ್ಚೆಯಲ್ಲಿ ಕೆಲವು ಬೇಡಿಕೆಗಳು ಫಲಪ್ರದಗೊಂಡಿದ್ದು, 15 ದಿನಗಳಲ್ಲಿ ಸಮಸ್ಯೆಗಳನ್ನು ಬಗೆಹರಿಸದಿದ್ದಲ್ಲಿ ಪುನಃ ತೀವ್ರ ಸ್ವರೂಪದ ಚಳುವಳಿ ನಡೆಸಲಾಗುವುದೆಂದು ಸಂಘವು ಎಚ್ಚರಿಕೆಯನ್ನು ಕೊಟ್ಟಿದೆ.

ಕೊನೆಯ ದಿನದಂದು 300 ಜನ ಕೃಷಿ ಕೂಲಿಕಾರರು ಮತ್ತು ರೈತರು ಕೆಂಬಾವುಟವನ್ನು ಹಿಡಿದು ಕುರುಗೋಡಿನ ಪ್ರಮುಖ ಬೀದಿಗಳಲ್ಲಿ ಮೆರವಣಿಗೆಯ ಮೂಲಕ ನಾಡ ಕಛೇರಿ ಕಾರ್ಯಾಲಯದ ಆವರಣದಲ್ಲಿ ಬೃಹತ್ ಸಮಾವೇಶಗೊಂಡು ಸರದಿ ಉಪವಾಸ ಸತ್ಯಾಗ್ರಹವನ್ನು ಹಿಂತೆಗೆದು ಕೊಳ್ಳಲಾಯ್ತು. ಈ ಸಂದರ್ಭದಲ್ಲಿ ಕೃಷಿ ಕೂಲಿಕಾರರ ಸಂಘದ ವಿಭಾಗೀಯ ಸಮಿತಿ ಕಾರ್ಯದರ್ಶಿ ಹೆಚ್. ಎಂ. ವಿಶ್ವನಾಥ ಸ್ವಾಮಿ ಅಧಿಕಾರಿಗಳೊಟ್ಟಿಗೆ ನಡೆಸಿದ ಚರ್ಚೆಯನ್ನು ವಿವರಿಸಿದರು. ಪ್ರಾಂತ ರೈತ ಸಂಘದ ಮುಖಂಡರಾದ ಕೆ. ಗಾದಿಲಿಂಗಪ್ಪ, ವಿ.ಎಸ್. ಶಿವಶಂಕರ್. ಹಾಗೂ ಡಿ.ವೈ.ಎಫ್.ಐ. ನ ಎಸ್.ಪಿ. ಮಹಮದ್ ಖಾನ್, ಈರಮ್ಮ ಹೆಚ್. ದೊಡ್ಡ ಬಸಪ್ಪ ರೈತರ ಹಾಗೂ ಕೂಲಿಕಾರರ ಹೋರಾಟದ ಮಹತ್ವವನ್ನು ವಿವರಿಸಿ. ಮೇ 7 ರಂದು ಬೆಂಗಳೂರಿನಲ್ಲಿ ವಿಧಾನ ಸೌಧದ ಎದುರು ಕನಿಷ್ಠ ಕೂಲಿ ಕಾಯ್ದೆಗಾಗಿ ನಡೆಯುವ ಧರಣೆ ಸತ್ಯಾಗ್ರಹಕ್ಕೆ ಕರೆ ನೀಡಿದರು.

ಇಮಾಂಸಾಬ್ ಸ್ವಾಗತ ಮಾಡಿದರೆ ರಾಜಾಸಾಬ್ ವಂದನಾರ್ಪಣೆಯನ್ನು ಮಾಡಿದರು.

ಅಸ್ಪೃಶ್ಯತೆ ವಿರೋಧಿಸಿ ಧರಣೆ

ಏಪ್ರಿಲ್ 14 ರಂದು ಬಳ್ಳಾರಿಯಲ್ಲಿ ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘ ಮತ್ತು ಪ್ರಾಂತ ರೈತ ಸಂಘಗಳು ಜಂಟಿಯಾಗಿ ಭಾರತ ರತ್ನ ಡಾ|| ಬಿ.ಆರ್. ಅಂಬೇಡ್ಕರ್ ರವರ 108ನೇ ಜಯಂತಿಯನ್ನು ಅರ್ಥಪೂರ್ಣವಾಗಿ ಆಚರಿಸಿದವು.

ಗ್ರಾಮೀಣ ಪ್ರದೇಶದಲ್ಲಿರುವ ಜಾತಿ ಬೇಧ ಹಾಗೂ ಅಸ್ಪೃಶ್ಯತೆಯ ಆಚರಣೆಗಳನ್ನು ವಿರೋಧಿಸಿ ಜಿಲ್ಲಾಧಿಕಾರಿಗಳ ಕಛೇರಿಯ ಮುಂದೆ, 200 ಕ್ಕೂ ಹೆಚ್ಚು ಕೃಷಿ ಕೂಲಿಕಾರರು ಮಹಿಳೆಯರು, ರೈತರು ಭಾಗವಹಿಸಿ ಧರಣೆಯನ್ನು ನಡೆಸಿದರು. ಇಂಥಹ ಮಾನವ ವಿರೋಧಿ ಹಾಗೂ ಕ್ರೂರ ಪದ್ಧತಿಗಳ ವಿರುದ್ಧ ಬಳ್ಳಾರಿ ಜಿಲ್ಲೆಯಲ್ಲಿ ನಡೆದಿರುವ ದುಡಿಯುವ ಜನತೆಯ ಹೋರಾಟಗಳಲ್ಲಿ ಹಾಸುಹೊಕ್ಕಾಗಿ ಬೆರೆತಿವೆ. 1982-83 ರ ಸಾಲಿನಲ್ಲಿ ಹೂವಿನ ಹಡಗಲಿಯಲ್ಲಿ ಹೋಟೆಲ್‌ಗಳಲ್ಲಿ ಅಸ್ಪೃಶ್ಯತೆಯನ್ನು ವಿರೋಧಿಸಿ ನಡೆಸಿದ ಹೋರಾಟ, 1983-84 ನೇ ಸಾಲಿನಲ್ಲಿ ಸಿರುಗುಪ್ಪ ತಾಲೂಕಿನ ಶಾನವಾಸ ಪುರ ಗ್ರಾಮದಲ್ಲಿ ಹರಿಜನರ ಮದುವೆ ಮೆರವಣಿಗೆಯನ್ನು ತಡೆಯಲು ಮೇಲ್ಜಾತಿ ಭೂಮಾಲಿಕರು ನಡೆಸಲು ಪ್ರಯತ್ನಿಸಿದ ದಾಳಿಯ ವಿರುದ್ಧ, 1985-86 ರ ಸಾಲಿನಲ್ಲಿ ಬಡ ಲಂಬಾಣಿ ಮಹಿಳೆಯ ಮೇಲೆ ನಡೆಸಿದ ದೌರ್ಜನ್ಯದ ವಿರುದ್ಧ ಅದೇ ರೀತಿ 1990 ರಿಂದ 1999 ರವರೆಗೆ ನಡೆಸಿದ ಹಲವು ಹೋರಾಟಗಳು- ಹಗರಿಬೊಮ್ಮನ ಹಳ್ಳಿಯಲ್ಲಿ ಬೋವಿ ಬಡ ಮಹಿಳೆಯ ಮೇಲೆ ಬೋವಿ ಜನಾಂಗದ ಭೂಮಾಲಿಕ ಕಾಂಟ್ರಾಕ್ಟರ್ ನಡೆಸಿದ ದೌರ್ಜನ್ಯದ ವಿರುದ್ಧ ಹೋರಾಟ ನಡೆಸಿದಾಗ ಚಳುವಳಿಕಾ'ರ ಮೇಲೆ ಜಾತಿ ಬಣ್ಣ ಹಚ್ಚಿ ಇಲ್ಲದ ಗೊಂದಲಗಳನ್ನು ಹುಟ್ಟಿಸಿ ದಾಳಿ ನಡೆಸಲು ಪ್ರಯತ್ನಿಸಿದ ವಿರುದ್ಧ, ಬಳ್ಳಾರಿಯ ಬಿಸಲಹಳ್ಳಿ ಗ್ರಾಮದಲ್ಲಿ ಹರಿಜನ ಯುವಕ ಸವರ್ಣೀಯರ ನಲ್ಲಿಯ ನೀರು ಕುಡಿದಿದ್ದಕ್ಕೆ ನಡೆದ ಜಾತಿಜಗಳದಲ್ಲಿ ಮಧ್ಯಪ್ರವೇಶ ನಡೆಸಿದ್ದು, ಬಳ್ಳಾರಿಯ ಮುಷ್ಟಗಟ್ಟ, ತೆರೆಕರೆ, ಸೋಮಲಾಪುರ, ವದ್ದಟ್ಟಿ, ಬಸವಪುರ ಗ್ರಾಮಗಳಲ್ಲಿ ಹರಿಜನರ ಮೇಲೆ ನಡೆಯುತ್ತಿದ್ದ ದಬ್ಬಾಳಿಕೆ ಹಾಗೂ ಹಲ್ಲೆಯ ನಡುವೆ ಧೈರ್ಯದಿಂದ ನುಗ್ಗಿ ಈ ಎಲ್ಲಾ ಗ್ರಾಮಗಳಲ್ಲಿ ಶಾಂತಿ ನೆಲೆಸುವಂತೆ ಸಮರ್ಥವಾಗಿ ಹೋರಾಡಿದ್ದು ಇತ್ತೀಚೆಗೆ ಕುರುಗೋಡಿನ ದೊಡ್ಡಬಸಪ್ಪ ದೇವಸ್ಥಾನದಲ್ಲಿ ಹರಿಜನರ ಮದುವೆಯನ್ನು, ದೇವಸ್ಥಾನದ ಮದುವೆ ಕೋಣೆಯ (ಪ್ರಸಾದ ನಿಲಯ) ಬೀಗ ಮುರಿದು ಈ ಕಾರ್ಯಕ್ರಮ ನೆರವೇರಿಸಿದ್ದು. ಈ ಎಲ್ಲಾ ಹೋರಾಟಗಳನ್ನು ಈ ಸಂದರ್ಭದಲ್ಲಿ ಸ್ಮರಿಸಿಕೊಳ್ಳುವುದರೊಟ್ಟಿಗೆ ಇಂಥಹ ಹೋರಾಟವನ್ನು ಮುಂದುವರೆಸುವ ಭಾಗವಾಗಿ ಧರಣೆ ಕಾರ್ಯಕ್ರಮವನ್ನು ನಡೆಸಲಾಯ್ತು. ಈ ಹೋರಾಟಗಳಲ್ಲಿ ಕಂಡು ಬಂದ ಮುಖ್ಯ ಅಂಶವೆಂದರೆ ಈ ಎಲ್ಲಾ ಸಂದರ್ಭಗಳಲ್ಲಿ ದಲಿತ ಮುಖಂಡರೆನಿಸಿ ಕೊಂಡವರ್‍ಯಾರೂ ಭಾಗವಹಿಸದೇ ಇದ್ದದ್ದು - ಅಲ್ಲದೆ ಕೆಲವು ಕಡೆ ಆಯಾ ಗ್ರಾಮದ ಭೂಮಾಲಿಕರಿಗೆ ಸಹಾಯ ಮಾಡಿ ದಲಿತ ವಿರೋಧಿತನವನ್ನು ಪ್ರತಿನಿಧಿಸಿದ್ದು ಚಳುವಳಿ ನಿರತ ಜನತೆಗೆ ತಿಳಿದ ವಿಷಯವಾಗಿದೆ.

ಅಲ್ಲದೆ ಹರಿಜನರ, ದಲಿತರ ವಿರೋಧಿ ಜಾತಿಯವರೆಂದು ಸಂಘಟನೆಯ ಕಾರ್ಯಕರ್ತರನ್ನು ಆರೋಪಿಸಿ ಕೂಲಿ ಕಾರರ ಹಾಗೂ ರೈತ ಸಂಘಟನೆಯನ್ನು ಒಡೆಯಲು ಯತ್ನಿಸುವ ದಲಿತ ಮುಖಂಡರುಗಳ ಕುತಂತ್ರ ಕೂಲಿ ಕಾರರಿಗೆ ಸ್ಪಷ್ಟವಾಗಿ ತಿಳಿದಿದೆ.

ಈ ಸಂದರ್ಭದಲ್ಲಿ ಹೋರಾಟನಿರತ ಜನತೆಯನ್ನು ಉದ್ದೇಶಿಸಿ ಮಾತನಾಡಿದ ಪ್ರಾಂತ ಕೃಷಿ ಕೂಲಿಕಾರರ ಸಂಘದ ರಾಜ್ಯ ಸಂಚಾಲಕರಾದ ಜಿ.ಎನ್. ನಾಗರಾಜ್‌ರವರು ಬಳ್ಳಾರಿ ಜಿಲ್ಲೆ ನೆಲದಲ್ಲಿ ನಡೆದ ದಾಸಪಂಥ ಹಾಗೂ ಶರಣ ಚಳುವಳಿಗಳ ಐತಿಹಾಸಿಕ ಮಹತ್ವವನ್ನು ತಿಳಿಸುತ್ತಾ ಇಂಥಹ ಚಳುವಳಿಕಾರರ ಆಶಯಗಳನ್ನು ನಮ್ಮ ಆದರ್ಶಗಳನ್ನಾಗಿಸಿಕೊಂಡು ಅವರ ಹೋರಾಟ ಗಳನ್ನು ಮುಂದವರೆಸುವ ಉತ್ತರಾಧಿಕಾರಿ ಗಳಾಗಬೇಕೆಂದು ಕರೆ ನೀಡಿದರು. ಇದೇ ಸಂದರ್ಭದಲ್ಲಿ ಪ್ರಾಂತ ರೈತ ಸಂಘದ ರಾಜ್ಯ ಸಹಕಾರ್ಯದರ್ಶಿ ಯು. ಬಸವರಾಜರವರು ಧರಣೆಯನ್ನು ಉದ್ದೇಶಿಸಿ ಹಾಗೂ ಜಿಲ್ಲಾಧಿಕಾರಿಗಳಿಗೆ ಸಲ್ಲಿಸುವ ಮನವಿಯ ಮುಖ್ಯಾಂಶಗಳನ್ನು ವಿವರಿಸಿದರು.

ಈ ಧರಣೆಯಲ್ಲಿ ಪಾಲ್ಗೊಂಡಿದ್ದ ಅಂಗನವಾಡಿ ನೌಕರರ ಸಂಘದ ಮುಖಂಡರಾದ ಕೆ. ನಾಗರತ್ನ, ಸಿ.ಐ.ಟಿ.ಯು ಮುಖಂಡರಾದ ಪ್ರಸನ್ನ ಕುಮಾರ್, ಎಸ್.ಎಫ್.ಐ. ಮುಖಂಡರಾದ ಉದೇದಪ್ಪ ನವರು ಬೆಂಬಲಿಸಿ ಮಾತನಾಡಿದರು.

.... ಕಣ್ಣಂಚಿನಲ್ಲಿ ನೀರಾಡಿತ್ತು

ಪುಟ 9 ರಿಂದ

ಹಾಕುತ್ತಿದ್ದಾನೆ ಎಂಬುದು ಇನ್ನುಳಿದವರ ಆತಂಕಕ್ಕೆ ಕಾರಣವಾಗಿತ್ತು. ಆತ ಪಕ್ಷದ ಸದಸ್ಯರೆಂದು ಹೇಳಿಕೊಂಡು ಯಾರ್‍ಯಾರನ್ನೋ ನ್ನ ಮನೆಯೊಳಗೆ ಸೇರಿಸಿಕೊಳ್ಳಲು, ಅವರಿಗೆ ಮನೆಯೊಳಗೆ ಊಟ ಹಾಕಲು ನನಗೆ ಸಾಧ್ಯವಿಲ್ಲ" ಎಂದಾಗ ಸದಸ್ಯರೆಲ್ಲರು ತಬ್ಬಿಬ್ಬಾದರು.

ಆತನು ಎತ್ತಿದ ಆಕ್ಷೇಪ ಎಲ್ಲರಿಗೂ ಅರ್ಥವಾಗಿತ್ತು. ಸಿಪಿಐ(ಎಂ) ಪಕ್ಷದ ಗ್ರಾಮೀಣ ಸದಸ್ಯರಲ್ಲಿ ಕೆಲವರು ಸಾಮಾಜಿಕವಾಗಿ ದಲಿತರು, ಶೂದ್ರರೂ ಆಗಿದ್ದಾರೆ ಎಂಬುದು ಆತನಿಗೆ ಗೊತ್ತಿತ್ತು. ಅವರನ್ನು ತನ್ನ ಮನೆಯೊಳಗೆ ಕರೆದು ಕೊಂಡು ಬಂದು ಅವರೊಂದಿಗೆ ಕುಳಿತುಕೊಂಡು ಊಟಮಾಡುವುದು ಆತನಿಗೆ ಒಪ್ಪಿಗೆಯಾಗದ ವಿಷಯ. ಆದ್ದರಿಂದ ಶಾಖೆಯ ಸಭೆಯಲ್ಲಿ ಚರ್ಚೆಯಾಗುತ್ತಿರುವ ಸೂಚನೆಗೆ ಆತನ ಸಹಮತವಿರಲಿಲ್ಲ.

ನಾನು ತಿಳಿಸಿ ಹೇಳಲು ಪ್ರಯತ್ನಿಸಿದೆ. ಕಳೆದ ಎರಡು ವರ್ಷಗಳಿಂದ ಪಕ್ಷದ ಒಳಗಡೆ ನಡೆಯುತ್ತಿರುವ ತಿದ್ದುಪಡಿ ಚಳುವಳಿಯಲ್ಲಿ ಪಕ್ಷವು ತೆಗೆದುಕೊಂಡಿರುವ ಕೆಲವು ಧೃಡ ನಿರ್ಧಾರಗಳ ಬಗ್ಗೆ ಆತನ ಗಮನ ಸೆಳೆದೆ. ನಮ್ಮ ಪಕ್ಷವು ನಮ್ಮ ಸಮಾಜದಲ್ಲಿರುವ ಎಲ್ಲ ವಿಧದ ಅಸಮಾನತೆಗಳನ್ನು ಹೊಡೆದು ಹಾಕಲು ಹೋರಾಡುತ್ತದೆ. ವರ್ಗರಹಿತ, ಜಾತಿರಹಿತ ಸಮಾಜ ನಿರ್ಮಾಣಕ್ಕಾಗಿ ಶ್ರಮಿಸಲು ಪ್ರತಿಜ್ಞಾಬದ್ಧರಾದ ನಾವೇ ನಮ್ಮ ಖಾಸಗಿ ಜೀವನದಲ್ಲಿ ಅಸ್ಪೃಶ್ಯತೆ ಜಾತಿಭೇದ ಮಾಡಲು ಸಾಧ್ಯವೆ? ಇಂತಹ ವಿಷಯಗಳಲ್ಲಿ ಕಮ್ಯುನಿಸ್ಟರು ಇತರರಿಗೆ ಮಾದರಿಯಾಗಿರುವುದು ನಮ್ಮ ಪರಂಪರೆಯಾಗಿದೆ.

ನಮ್ಮ ಪಕ್ಷದ ಸದಸ್ಯರು ಅಸ್ಪೃಶ್ಯತೆಯನ್ನು ಯಾವುದೇ ರೀತಿಯಲ್ಲಿ ಆಚರಿಸಿದ್ದು ಕಂಡು ಬಂದರೆ ಅವರನ್ನು ನಿರ್ದಾಕ್ಷಿಣ್ಯವಾಗಿ ಪಕ್ಷದಿಂದ ವಜಾಮಾಡಬೇಕೆಂದು ಪಕ್ಷ ಹೇಳುತ್ತದೆ.... ನಾನು ವಿವರಿಸುತ್ತಾ ಹೋದೆ. ಆದರೆ ಅದ್ಯಾವುದೂ ಆತನ ಮೇಲೆ ಪರಿಣಾಮ ಬೀರಲಿಲ್ಲ. ಬಸವಣ್ಣನ ಕಾಲದ ಶರಣರು ಅಸ್ಪೃಶ್ಯತೆಯ ವಿರುದ್ಧ ಮಾಡಿದ ಚಾರಿತ್ರಿಕ ಹೋರಾಟವನ್ನು ನೆನಪಿಸಿದರೂ ಆತನು ಒಪ್ಪಿಕೊಳ್ಳಲು ಸಿದ್ಧನಾಗಲಿಲ್ಲ. ಆತನನ್ನು ಪಕ್ಷದಿಂದ ವಜಾಮಾಡುವ ಸೂಚನೆಯನ್ನು ಕಾರ್ಯದರ್ಶಿ ಮಂಡಿಸಿಯೇ ಬಿಟ್ಟರು.

ಉಳಿದ ಸದಸ್ಯರು ಸರ್ವಾನುಮತದ ಸಮ್ಮತ್ರ ನೀಡುವ ಮೂಲಕ ಶಾಖೆಯನ್ನು ಬಹುದಿನಗಳಿಂದ ಕಾಡುತ್ತಿದ್ದ ದೌರ್ಬಲ್ಯವನ್ನು ಹೊಡೆದೋಡಿಸುವಲ್ಲಿ ಯಶಸ್ವಿಯಾದರು.

ಆತ ಸಭೆಯಿಂದ ಹೊರನಡೆಯುತ್ತಿದ್ದಂತೆ ಸಭೆಯಲ್ಲಿ ಭಾಗವಹಿಸಿದ ಸದಸ್ಯರಿಗಾಗಿ ಚಹ ಸಿದ್ಧವಾಗಿತ್ತು, ಎಲ್ಲರೂ ಚಹ ಸೇವಿಸಿ ಸದಸ್ಯನೊಬ್ಬನನ್ನು ಕಳೆದುಕೊಂಡ ಆತಂಕದಿಂದ ಚೇತರಿಸಿಕೊಳ್ಳಲು ಪ್ರಯತ್ನ ಪಡುತ್ತಿದ್ದರು. ಆಗ ಸದಸ್ಯನೊಬ್ಬನು ತಾನು ಚಹ ಸೇವಿಸಿದ ಬಟ್ಟಲನ್ನು ತೊಳೆಯಲು ನೀರು ಕೇಳಿದನು. ಮನೆಯ ಯಜಮಾನ ಶಾಖೆಯ ಕಾರ್ಯದರ್ಶಿ ಓಡಿ ಬಂದು ಆತನ ಕೈಯಲಿದ್ದ ಖಾಲಿ ಬಟ್ಟಲನ್ನು ಕಸಿದುಕೊಂಡು ಇನ್ನುಳಿದ ಬಟ್ಟಲುಗಳೊಂದಿಗೆ ಒಳನಡೆದ "ಇಲ್ಲಿಯ ವರೆಗೆ ನಮ್ಮ ಮನೆಯಲ್ಲಿ ಹೀಗೆ ನಡೆಯುತ್ತಿತ್ತು. ಕೆಳಜಾತಿಯವರಿಗೆ ಕುಡಿಯಲು, ತಿನ್ನಲು ಕೊಟ್ಟರೆ ಅವರು ಬಳಸಿದ ಬಟ್ಟಲುಗಳನ್ನು ಅವರೇ ನೀರು ಹಾಕಿ ತೊಳೆದು ಕೊಡುತ್ತಿದ್ದರು. ಅನಂತರ ಮತ್ತೆ ಮನೆಯೊಳಗೆ ಅವುಗಳನ್ನು ತೊಳೆದು ಮಡಿಮಾಡಲಾಗುತ್ತಿತ್ತು. ಆದರೆ ಇಂದು ನನಗೆ ನನ್ನ ತಪ್ಪಿನ ಅರಿವಾಗಿದೆ. ಕಮ್ಯುನಿಸ್ಟ್ ಪಕ್ಷದ ಸದಸ್ಯನಾಗಿ ನಾನು ಇನ್ನು ಮುಂದೆ ಹೀಗೆ ಮಾಡುವುದಿಲ್ಲ. ನನ್ನ ಮನೆಯೊಳಗೆ ಯಾರು ಬೇಕಾದರೂ ಬರಬಹುದು. ಅವರಿಗೆ ಊಟ ಬಡಿಸಿದ ತಟ್ಟೆಗಳನ್ನು ಅವರಿಂದಲೇ ತೊಳೆಯಿಸುವುದನ್ನು ನಿಲ್ಲಿಸಿ ನಾವೇ ತೊಳೆಯುವುದನ್ನು ಆರಂಭಿಸುತ್ತೇವೆ. ಕಣ್ಣು ಕಾಣದೆ ಇದ್ದ ಕುರುಡನೊಬ್ಬನಿಗೆ ದೃಷ್ಟಿ ಬಂದಷ್ಟು ನನಗೆ ಇಂದು ಆನಂದವಾಗಿದೆ. ನನಗೆ ಇದಕ್ಕಾಗಿ ನನ್ನ ಸಮಾಜದಿಂದ ಯಾವುದೇ ಕಿರುಕುಳ ಎದುರಾದರೂ ನಾನು ಅದನ್ನು ಧೈರ್ಯದಿಂದ ಎದುರಿಸುತ್ತೇನೆ" ಎಂದು ಅವರು ಹೇಳಿದಾಗ ಎಲ್ಲರ ಕಣ್ಣಂಚಿನಲ್ಲಿ ನೀರಾಡತೊಡಗಿತ್ತು.

ಎಲ್ಲ ಧರ್ಮಗಳು ಐಕ್ಯತೆಯ ಸಂದೇಶ ಸಾರುತ್ತವೆ

ಕ್ಯಾ. ಲಕ್ಷ್ಮಿ ಸೆಹಗಲ್



ಬಿಜೆಪಿ, ಆರೆಸ್ಸೆಸ್, ವಿಹೆಚ್‌ಪಿ, ಭಜರಂಗದಳದಂತಹ ಕೋಮುವಾದಿ ಸಂಘಟನೆಗಳು ದೇಶಾದ್ಯಂತ ಜನರ ನಡುವೆ ಕೋಮುವಾದದ ಕಿಡಿಯನ್ನು ಹಚ್ಚುತ್ತಿದ್ದು ದೇಶದ ಜಾತ್ಯಾತೀತತೆಗೆ ಸವಾಲೊಡ್ಡಿದೆ. ಇಂತಹ ಅಪಾಯದ ವಿರುದ್ಧ ಜನತೆ ಒಟ್ಟಾಗಿರಬೇಕೆಂದು ವೀರವನಿತೆ ಕ್ಯಾಪ್ಟನ್ ಲಕ್ಷ್ಮಿ ಸೆಹಗಲ್ ಎಚ್ಚರಿಸಿದರು.

ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆಯ ಬೆಂಗಳೂರು ಜಿಲ್ಲಾ ಸಮಿತಿಯು ಇತ್ತೀಚಿಗೆ ಸಂಘಟಿಸಿದ 'ಮಹಿಳೆ ಮತ್ತು ಕೋಮುವಾದ' ಎನ್ನುವ ವಿಚಾರ ಸಂಕಿರಣವನ್ನುದ್ದೇಶಿಸಿ ಅವರು ಮಾತನಾಡುತ್ತಿದ್ದರು.

ವಿಚಾರಸಂಕಿರಣದ ಸಂಘಟಕರನ್ನು ಅಭಿನಂದಿಸಿ ಮಾತನಾಡಿದ ಲಕ್ಷ್ಮಿ ಸೆಹಗಲ್ ಮಹಿಳಾ ನಾಯಕತ್ವಕ್ಕೆ ಹಾಗೂ ಹೋರಾಟಕ್ಕೆ ಅತ್ಯಂತ ಮಹತ್ವ ನೀಡಿದ್ದ ಸುಭಾಶ್ ಚಂದ್ರ ಬೋಸ್‌ರವರ ಸಂಪೂರ್ಣ ಸ್ವರಾಜ್ಯದ ಕರೆಗೆ ಓಗೊಟ್ಟು ಅವರು ಕಟ್ಟಿದ್ದ ಐಎನ್‌ಎ ಭಾಗವಾದ ಝಾನ್ಸಿರಾಣಿ ರೆಜಿಮೆಂಟಿನ ಮಹಿಳಾ ತುಕಡಿಗೆ ಕ್ಯಾಪ್ಟನ್ ಆಗಿ ನೇಮಕಗೊಂಡು ದೇಶ-ವಿದೇಶಗಳನ್ನು ಸುತ್ತಿ ಸ್ವಾತಂತ್ರ್ಯ ಚಳುವಳಿಗೆ ಯೋಧರನ್ನು ಸಂಘಟಿಸಿ ಹೋರಾಟ ನಡೆಸಿದ ಅನುಭವಗಳನ್ನು ಕಿಕ್ಕಿರಿದು ತುಂಬಿದ್ದ ಸಭಿಕರೊಂದಿಗೆ ಹಂಚಿಕೊಳ್ಳುತ್ತಾ ಸುಭಾಷ್‌ಚಂದ್ರ ಬೋಸರಾದಿಯಾಗಿ ನಾವೆಲ್ಲರೂ ದೇಶದ ವಿಮೋಚನೆ ಹಾಗೂ ಕೋಮು ಸೌಹಾರ್ದತೆಗಾಗಿ ಸೆಣೆಸಾಡಿದೆವೆಂದರು.

ಸ್ವಾತಂತ್ರ್ಯ ಹೋರಾಟದಲ್ಲಿ ನಾವೆಲ್ಲರೂ ಒಟ್ಟಾಗಿದ್ದೆವು. ಜಾತಿ ಮತ ಧರ್ಮಗಳ ಭೇದವಿರಲಿಲ್ಲ. ಎಲ್ಲರಿಗೂ ಅವರವರ ಧರ್ಮಗಳನ್ನು ಆಚರಿಸಲು ಅವಕಾಶವಿದ್ದಿತ್ತು. ಆದರೆ ಇಂದಿನ ಸ್ವತಂತ್ರ ಭಾರತದಲ್ಲಿ ಹಲವಾರು ಜಾತಿ ಪಂಗಡಗಳ ಆಧಾರದಲ್ಲಿ ಗಲಭೆಗಳನ್ನು ಹುಟ್ಟು ಹಾಕುತ್ತಾ ಕೋಮುವಾದಕ್ಕೆ ದಾರಿ ಮಾಡಿ ಕೊಡಲಾಗುತ್ತಿದೆ. ಇಂತಹ ಕೋಮುಗಲಭೆ ಗಳಲ್ಲಿ ಮಹಿಳೆ ಮತ್ತು ಮಕ್ಕಳು ನೇರವಾಗಿ ಹಾಗೂ ಪರೋಕ್ಷವಾದ ದೌರ್ಜನ್ಯಗಳಿಗೆ ತುತ್ತಾಗುತ್ತಿದ್ದಾರೆ ಎಂದರು. ಕಾನ್ಪುರದ ಕೋಮುಗಲಭೆಯೊಂದರಲ್ಲಿ ನಿರಾಶ್ರಿತಳಾದ ಮುಸ್ಲಿಂ ಮಹಿಳೆಗೆ ಹಿಂದೂ ಧರ್ಮೀಯಳಾದ ಮಹಿಳೆಯೊಬ್ಬಳು ರಕ್ಷಣೆ ನೀಡಿ ಮಾನವೀಯತೆ ಮೆರೆದ ಉದಾಹರಣೆಯನ್ನು ಹೃದಯಂಗಮವಾಗಿ ಸಭಿಕರ ಕಣ್ಮುಂದೆ ಬಿಡಿಸಿಟ್ಟರು.

ತನ್ನ ಕೋಣೆಯೊಳಗೆ ಮುಸ್ಲಿಂ ಮಹಿಳೆಯನ್ನು ಬಚ್ಚಿಟ್ಟ ಬ್ರಾಹ್ಮಣ ಹೆಂಗಸು ಮತೀಯವಾದಿಗಳ ಒತ್ತಡಕ್ಕೆ ಮಣಿಯದೆ ತನ್ನ ಮಗು, ದೇವರು ಹಾಗೂ ಭಗವದ್ಗೀತೆಯ ಮೇಲೆ ಪ್ರಮಾಣ ಮಾಡಿ ತಾನು ಮುಸ್ಲಿಂ ಮಹಿಳೆಯನ್ನು ಬಚ್ಚಿಟ್ಟಿಲ್ಲವೆಂದು ಹೇಳಿ ಆಕೆಗೆ ರಕ್ಷಣೆ ನೀಡಿದಳು. ಯಾವ ಧರ್ಮ, ದೇವರು ಮನುಷ್ಯರನ್ನು ಕೊಲ್ಲುವುದನ್ನು ಸಮರ್ಥಿಸುವುದಿಲ್ಲ. ಮನುಷ್ಯರನ್ನು ಕಾಪಾಡುವ ಸಂದೇಶವನ್ನೇ ಸಾರುತ್ತವೆ, ಹಾಗಾಗಿ ನಾನು ಮಾಡಿದ ಪ್ರಮಾಣ ಒಬ್ಬ ಅಸಹಾಯಕ ಮಹಿಳೆಯನ್ನು ರಕ್ಷಿಸಲು ಕಾರಣವಾಯಿತು ಎಂದ ಆ ಮಹಿಳೆಯ ಜಾತ್ಯಾತೀತತೆಯನ್ನು ಉದಾಹರಣೆಯಾಗಿ ನೀಡಿದ ಕ್ಯಾಪ್ಟನ್ ಲಕ್ಷ್ಮಿ, ಇಂದಿಗೂ ಮಹಿಳೆಯರು ಹಾಗೂ ಜನ ಪರಸ್ಪರ ವಿಶ್ವಾಸದಿಂದಲೇ ಬದುಕುತ್ತಿದ್ದಾರೆ ಮತೀಯವಾದಿಗಳು ಇದನ್ನು ಸಹಿಸದಾಗಿದ್ದಾರೆ ಎನ್ನುತ್ತಾ ಕೋಮುವಾದವನ್ನು ಹಿಮ್ಮೆಟ್ಟಿಸಲು ಎಲ್ಲ ಜನ ಒಟ್ಟಾಗಬೇಕೆಂದು ಕರೆ ನೀಡಿದರು.

'ಸುಧಾ' ಪತ್ರಿಕೆಯ ಹಿರಿಯ ಸಂಪಾದಕರಾದ ರಂಜಾನ್ ದರ್ಗಾ ಮಾತನಾಡುತ್ತಾ ನಮ್ಮ ದೇಶದ ಸಾಮಾನ್ಯ ಜನ ಕೋಮುವಾದಿಗಳಾಗಿದ್ದಿದ್ದರೆ ದೇಶ ಈ ಹೊತ್ತಿಗೆ ಸರ್ವನಾಶವಾಗಿರುತ್ತಿತ್ತು, ನಾವೆಲ್ಲರು ಈ ಮಟ್ಟದ ಸಹಬಾಳ್ವೆಯಿಂದಿರಲು ಸಾಧ್ಯವಾಗುತ್ತಿರಲಿಲ್ಲ, ಸ್ವಾರ್ಥಪರ, ಸ್ವಹಿತಾಸಕ್ತಿಯುಳ್ಳ ರಾಜಕಾರಣಿಗಳು ಹಾಗೂ ಮತಾಂಧರು ಕೋಮುಗಲಭೆಗಳನ್ನು ಹುಟ್ಟು ಹಾಕುತ್ತಿದ್ದು ಜನಸಾಮಾನ್ಯರ ಮೇಲೆ ದೌರ್ಜನ್ಯಗಳು ನಡೆಯುತ್ತಿವೆ ಎಂದರು. ಮನಸ್ಸು -ಮನಸ್ಸುಗಳ ಮಧ್ಯೆ ಕೋಮುವಾದದ ವಿಷಬೀಜವನ್ನು ಬಿತ್ತುತ್ತಾ ಮಹಿಳೆಯರು, ಮಕ್ಕಳು, ಮುಗ್ಧರನ್ನು ಬಲಿತೆಗೆದುಕೊಳ್ಳುತ್ತಿರುವುದನ್ನು ನೆನಪಿಸಿಕೊಂಡು ಭಾವುಕರಾಗಿ ಕಣ್ಣೀರು ಮಿಡಿದ ದರ್ಗಾ ಕೋಮುವಾದದ ವಿಷಜ್ವಾಲೆ ಯಾರನ್ನೂ ಬಿಡದೆ ನಂದಿಸುತ್ತದೆ ಇದನ್ನು ಬೆಳೆಯಲು ಬಿಡಬಾರದೆಂದು ತಿಳಿಸುತ್ತಾ ಕೋಮುಸೌಹಾರ್ದತೆಯನ್ನು ಕಾಪಾಡಲು ಮಹಿಳೆಯರು ನೀಡುವ ಕೊಡುಗೆಯನ್ನು ಉದಾಹರಣೆಗಳ ಸಮೇತ ವಿವರಿಸಿದರು.

ಶಾಂತಿಗೆ ಹೆಸರಾಗಿದ್ದ ಭಟ್ಕಳ ನಗರ ಕೋಮು ಘರ್ಷಣೆಯಿಂದ ಒಂದು ವರ್ಷಕಾಲ ಹತ್ತಿ ಉರಿದ ಬಗೆಯನ್ನು ನೆನೆದ ದರ್ಗಾ ಧಾರ್ಮಿಕ ಅಸಹಿಷ್ಣುಗಳು ಹಬ್ಬಿಸಿದ ಸುಳ್ಳು ಸುದ್ದಿಗಳು ಪ್ರಚೋದನೆಯನ್ನು ಪಡೆದು ಸಾಮಾನ್ಯ ಜನತೆ ನರಳಿದ್ದನ್ನು ಪ್ರತ್ಯಕ್ಷ ನೋಡಿದ್ದ ನೆನಪಾಗಿ ಮರುಗಿದರು. ನಾವೆಲ್ಲರು ಕೋಮುವಾದವನ್ನು ಸರ್ವನಾಶಮಾಡುವ ಪ್ರತಿಜ್ಞೆಗೈಯೋಣ ಎಂದರು. ಎ.ಐ.ಜೆ.ಎಂ.ಎಸ್.ನ ರಾಜ್ಯ ಅಧ್ಯಕ್ಷರಾದ ಕೆ.ಎಸ್. ವಿಮಲಾ ಮಾತನಾಡುತ್ತಾ ಎಲ್ಲೊ ಒಂದು ಕಡೆ ಕೋಮುಗಲಭೆ ನಡೆಯುತ್ತಿದೆ ನಾವು ಸುರಕ್ಷಿತವಾಗಿದ್ದೇವೆಂದು ಮಹಿಳೆಯರು ಭಾವಿಸಿಕೊಳ್ಳುತ್ತಾರೆ, ಆದರೆ ಕೋಮುವಾದದ ವಿಷ ಜ್ವಾಲೆ ಎಲ್ಲೆಲ್ಲೂ ಹರಡಬಹುದು. ಉದಾಸೀನದಿಂದ ಇರದೆ ಎಚ್ಚರದಿಂದಿದ್ದು ಹಿಮ್ಮೆಟ್ಟಿಸಬೇಕೆಂದು ಕರೆ ನೀಡಿದರು.

ಮಕ್ಕಳು ಮಹಿಳೆಯರ ಮೇಲೆ ನೇರ ಪರಿಣಾಮ ಬೀರುತ್ತಿರುವ ಕೋಮುವಾದ ಸತಿಸಹಗಮನ ಪದ್ಧತಿಯನ್ನು ಮತ್ತೆ ಜಾರಿಗೆ ತರಲು ಮುಂದಾಗಿದೆ. ಕ್ರಿಶ್ಚಿಯನ್ ಸನ್ಯಾಸಿನಿಯರ ಮೇಲೆ ಅತ್ಯಾಚಾರ ಎಸೆದು ಸಮರ್ಥಿಸಿಕೊಳ್ಳುವಷ್ಟು ಹೀನ ಮಟ್ಟಕ್ಕೆ ಇಳಿದಿದೆ ಹೀಗಾಗಿ ಮತೀಯ ಶಕ್ತಿಗಳ ವಿರುದ್ಧ ಹೋರಾಡುವ ಪ್ರತಿಜ್ಞೆಯನ್ನು ನಾವಿಂದು ಸ್ವೀಕರಿಸಬೇಕೆಂದರು.

ಮತ್ತೊಬ್ಬ ಅತಿಥಿ ಜೆ.ಎಂ.ಎಸ್. ರಾಜ್ಯ ಉಪಾಧ್ಯಕ್ಷೆ ಎಸ್. ಸತ್ಯಾ ಮಾತಾಡುತ್ತಾ ತಮ್ಮ ಮನೆಯ ಅಕ್ಕ ಪಕ್ಕಕ್ಕಿರುವ ದರ್ಗಾ ಹಾಗೂ ದೇವಾಲಯಗಳು ನೋಡಲು ಹತ್ತಿರವಾಗಿವೆಯಷ್ಟೇ ಮನಸ್ಸುಗಳು ಬಹಳ ದೂರ ದೂರದಲ್ಲಿವೆಯೆಂದು ಉದಾಹರಿಸಿದರು. ದೇವಾಲಯದ ಪಕ್ಕದಲ್ಲಿ ಪ್ರತಿದಿನ ಸೇರುವ ಆರ್.ಎಸ್.ಎಸ್. ಶಾಖೆ ಮುಸ್ಲಿಂ ಮಕ್ಕಳ ವಿರುದ್ಧ ಹಿಂದೂ ಮಕ್ಕಳನ್ನು ಎತ್ತಿಕಟ್ಟುವ ಮೂಲಕ ಮುಸ್ಲಿಂ ಮಕ್ಕಳಲ್ಲೂ ಭಯದ ಛಾಯೆಯನ್ನು ಮೂಡಿಸುತ್ತಿದೆ. ಮಕ್ಕಳ ಆರೋಗ್ಯವಂತ ಮನಸ್ಸುಗಳಲ್ಲಿ ವಿಷ ಹಿಂಡುವ ಪ್ರಯತ್ನಗಳು ನಡೆಯುತ್ತಿವೆಯೆನ್ನುತ್ತಾ ಆರೋಗ್ಯವಂತ ಮನಸ್ಸು ಹಾಗೂ ಸಮಾಜವನ್ನು ಸೃಷ್ಟಿಸಲು ನಾವೆಲ್ಲರೂ ಹೋರಾಡೋಣವೆಂದರು.

ವಿಚಾರ ಸಂಕಿರಣಕ್ಕೆ ಸ್ವಾಗತವನ್ನು ಮಧುರಾ, ಪ್ರಸ್ತಾವನೆಯನ್ನು ಎನ್. ಪ್ರಭಾ ಮಾಡಿದರೆ ಕಾರ್ಯಕ್ರಮದ ನಿರೂಪಣೆಯನ್ನು ಕೆ.ಎಸ್. ಶಾರದಾ ನೆರವೇರಿಸಿದರು. ವಿ.ಎನ್. ಯಶೋದ ವಂದನಾರ್ಪಣೆ ಮಾಡಿದರು

ವರದಿ: ಎನ್. ಪ್ರಭಾ

ಲೋಕಸಂಚಾರ

ಶರತ್ ಚಂದ್ರ

ಚೀನಿ ಪ್ರಧಾನಿ ಅಮೆರಿಕ ಭೇಟಿ WTO ಬಗ್ಗೆ ಒಪ್ಪಂದಕ್ಕೆ ಬರಲು ವಿಫಲ

ಚೀನಿ ಪ್ರಧಾನಿ ಝೂ ರೊಂಗ್‌ಜಿ ಯವರ ಒಂಬತ್ತು ದಿನಗಳ ಅಮೆರಿಕನ್ ಭೇಟಿ ಕೊನೆಗೊಂಡಿದ್ದರೂ, ನಿರೀಕ್ಷಿತ ಮುಖ್ಯ ಘಟನೆಯಾದ ಚೀನಾಕ್ಕೆ WTO (ವಿಶ್ವ ವಾಣಿಜ್ಯ ಸಂಘಟನೆ) ದ ಸದಸ್ಯತ್ವ ಕೊಡುವ ಬಗ್ಗೆ ಒಪ್ಪಂದ ಆಗಿಲ್ಲ. ಕಳೆದ ಕೆಲವು ತಿಂಗಳುಗಳಿಂದ ಆಗಲೇ ಅಮೆರಿಕ ಚೀನಾ-ವಿರೋಧಿ ವಾತಾವರಣ ಸೃಷ್ಟಿಸಿದ್ದು ಈ ಬಗ್ಗೆ ಒಪ್ಪಂದ ಕಷ್ಟವೇ ಎಂಬ ಪರಿಸ್ಥಿತಿ ಇತ್ತು. ಚೀನಿ ಪ್ರಧಾನಿಯೊಬ್ಬರು ಅಮೆರಿಕಕ್ಕೆ ಭೇಟಿ ನೀಡುತ್ತಿರುವುದು 15 ವರ್ಷಗಳ ನಂತರ. ಚೀನಾದ ಮೇಲೆ ಮಾನವ ಹಕ್ಕುಗಳ 'ಉಲ್ಲಂಘನೆ'ಯ ಆರೋಪ ಹೊರಿಸುವುದು, ಚೀನಾದ ವಿಜ್ಞಾನಿಗಳು ಅಮೆರಿಕದ ಅಣ್ವಸ್ತ್ರ ರಹಸ್ಯಗಳನ್ನು ಕದ್ದಿದ್ದಾರೆ ಎಂಬ ಆರೋಪ, ಕೊಸೊವೊ ಬಿಕ್ಕಟ್ಟಿನ ಬಗ್ಗೆ ತೀವ್ರ ಭಿನ್ನಭಿಪ್ರಾಯ-ಇಲ್ಲೂ ಅನುಕೂಲಕರ ವಾತಾವರಣವನ್ನೇನೂ ನಿರ್ಮಿಸಿರಲಿಲ್ಲ. 60ರ ದಶಕದಿಂದ ಚೀನಾದ ಮೇಲೆ ಒಂದಲ್ಲ ಒಂದು ರೂಪದಲ್ಲಿ ವಾಣಿಜ್ಯ ದಿಗ್ಬಂಧನ ಹೊರಿಸಿದೆ ಅಮೆರಿಕ. ಇದರಿಂದಾಗಿ ಚೀನಾದ ಆರ್ಥಿಕ ಬೆಳವಣಿಗೆ ಅಂತರ್ರಾಷ್ಟ್ರೀಯ ವ್ಯಾಪಾರದ ಮೇಲೆ ತೀವ್ರ ಪರಿಣಾಮ ಬೀರಿದೆ- ಅಭಿವೃದ್ಧ ಬಂಡವಾಳಶಾಹಿ ದೇಶಗಳ ಜತೆ ಮಾತ್ರವಲ್ಲ- ಇತರ ಎಲ್ಲಾ ದೇಶಗಳ ಜತೆ ದ್ವಿಪಕ್ಷೀಯ ವಾಣಿಜ್ಯ ಒಪ್ಪಂದಕ್ಕೆ ಬರಲಾಗಿ , WTO ದ ಸದಸ್ಯತ್ವ ಸಿಕ್ಕಿದರೆ ಚೀನಾದ ಆರ್ಥಿಕ ವಾಣಿಜ್ಯ ಬೆಳವಣಿಗೆಗೆ ಸಹಕಾರಿಯಾಗುವುದು ಎಂಬ ಆಶಯ. ಈಗ ಚೀನಾವನ್ನು ಅಂತರ್ರಾಷ್ಟ್ರೀಯ ವ್ಯಾಪಾರದಿಂದ ಹೆಚ್ಚು ಕಡಿಮೆ ಹೊರಗಿಡಲಾಗಿದೆ. ಚೀನಾ WTO ಸದಸ್ಯತ್ವ ಪಡೆಯುವುದರ ಬಗ್ಗೆ ಅತ್ಯಂತ ಹೆಚ್ಚಿನ ಮಹತ್ವ ನೀಡಿದೆ. ಆ ಬಗ್ಗೆ ಒಪ್ಪಂದ ಈ ಭೇಟಿಯಲ್ಲಿ ಸಾಧ್ಯವಾಗದಿದ್ದರೂ ವರ್ಷದ ಕೊನೆಯ ಹೊತ್ತಿಗೆ ಈ ಒಪ್ಪಂದಕ್ಕೆ ಬರಲು ಸಾಧ್ಯವಾಗುವಂತೆ ವೇಳಾಪಟ್ಟಿ ಹಾಕಿಕೊಳ್ಳಲಾಗಿದೆ.

ನಿಲ್ಲದ ನಾಟೋ ಬಾಂಬ್ ದಾಳಿ ಮಣಿಯದ ಯುಗೋಸ್ಲಾವಿಯ

ಯುಗೋಸ್ಲಾವಿಯದ ಮೇಲೆ ನಾಟೋ ಬರ್ಬರ ಬಾಂಬ್ ದಾಳಿ ನಾಲ್ಕನೇ ವಾರಕ್ಕೆ ಕಾಲಿಟ್ಟರೂ, ಯುಗೋಸ್ಲಾವಿಯ ಅದಕ್ಕೆ ಮಣಿಯುವ ಸೂಚನೆಗಳಿಲ್ಲ. ನಾಟೋ ಬಾಂಬ್ ದಾಳಿಯನ್ನು ಇನ್ನಷ್ಟು ತೀವ್ರಗೊಳಿಸುತ್ತಿದ್ದರೂ ಮುಂದೇನು ಎಂಬ ಪ್ರಶ್ನೆ ಅದರ ಮುಂದಿದೆ. ಇತ್ತೀಚಿಗೆ ಕೊಸೊವೊ ನಿರಾಶ್ರಿತರ ಮೇಲೆ ನೇರ ಬಾಂಬ್ ಬಿದ್ದು ಸಾವುನೋವಾದದ್ದು, ಒಂದು ನಾಗರಿಕ ಟ್ರೇನ್ ಮೇಲೆ ಬಾಂಬ್ ದಾಳಿ, ನಿರಾಶ್ರಿತರ ಪ್ರವಾಹದಿಂದ ನೆರೆಯ ಮಸಿಡೊನಿಯಾ ಅಲ್ಬೇನಿಯಗಳು ಕಂಗಾಲಾಗಿರುವುದು- ಇವೆಲ್ಲ ನಾಟೋ ಅಮೆರಿಕಗಳ ರಾಜಕೀಯ ಮುಜುಗರಕ್ಕೆ ಕಾರಣವಾಗಿದೆ. ಈ ನಡುವೆ ವಿಶ್ವಸಂಸ್ಥೆ ಮಹಾಕಾರ್ಯದರ್ಶಿ, ಯೆಮನ್ ಅಧ್ಯಕ್ಷರು ಕೆಲವು ಶಾಂತಿ ಪ್ರಸ್ತಾವಗಳನ್ನು ಆರಂಭಿಸಿದ್ದಾರೆ. ಆದರೆ ಈ ಎಲ್ಲಾ ಪ್ರಸ್ತಾವಗಳಲ್ಲಿ ನಾಟೋದ ಮಿಲಿಟರಿ ತುಕಡಿಗಳು ಕೊಸೊವೊದಲ್ಲಿ ನೆಲೆಗೊಳಿಸುವ ಅಂಶ ಯುಗೋಸ್ಲಾವಿಯಾಕ್ಕೆ ಒಪ್ಪಿಗೆ ಇಲ್ಲ.

ಈ ನಡುವೆ ರಶ್ಯಾ ನಾಟೋದ ಬಾಂಬ್‌ದಾಳಿ ವಿರುದ್ಧ ರಾಯಭಾರ ದಾಳಿ ಆರಂಭಿಸಿದೆ. ರಶ್ಯಾದ ಮಾಜಿ ಪ್ರಧಾನಿ ಚೆರ್ನೊಮೆರ್ಡಿನ್‌ರನ್ನು ಅಧ್ಯಕ್ಷ ಯೆಲ್ಸಿನ್ ಶಾಂತಿ ಮಾತುಕತೆಗೆ ವಿಶೇಷವಾಗಿ ನೇಮಿಸಿದ್ದು, ಅವರು ಯುಗೋಸ್ಲಾವಿಯಾ ಪಶ್ಚಿಮ ಯುರೋಪಿನ ಪ್ರಮುಖ ದೇಶಗಳ ನಡುವೆ ಓಡಾಡುತ್ತಿದ್ದಾರೆ. ಅಂತರ್ರಾಷ್ಟ್ರೀಯ ಕೋರ್ಟು ಮುಂದೆ ನಾಟೋ ಅಂತರ್ರಾಷ್ಟ್ರೀಯ ಕಾನೂನುಗಳನ್ನು ಉಲ್ಲಂಘಿಸಿರುವ ಬಗ್ಗೆ ದೂರು ಕೊಡಲು ಯೋಜಿಸಿದೆ. ಈ ನಡುವೆ ಯುಗೋಸ್ಲಾವಿಯನ್ ಪಾರ್ಲಿಮೆಂಟ್ ರಶ್ಯ-ಬೆಲರಸ್ ಒಕ್ಕೂಟವನ್ನು ಸೇರುವ ಬಯಕೆ ವ್ಯಕ್ತಪಡಿಸಿದೆ. ರಶ್ಯದ ಪಾರ್ಲಿಮೆಂಟು ಯುಗೋಸ್ಲಾವಿಯಾ ಹೇಳಿಕೆಯನ್ನು ಮನ್ನಿಸಿ ನಿರ್ಣಯವನ್ನು ಅಂಗೀಕರಿಸಿ ಅದನ್ನು ರಶ್ಯ-ಬೆಲರಸ್ ಒಕ್ಕೂಟದಲ್ಲಿ ಸೇರಿಸುವ ಬಗ್ಗೆ ರಶ್ಯ-ಬೆಲರಸ್ ಜಂಟಿ ಪಾರ್ಲಿಮೆಂಟು ನಿರ್ಣಯಿಸಬೇಕೆಂದು ಹೇಳಿದೆ. ರಶ್ಯಾ-ಬೆಲರಸ್ ಒಕ್ಕೂಟ ಒಪ್ಪಂದ ಮೂರು ವರ್ಷಗಳ ಹಿಂದೆ ಆಗಿದ್ದರೂ, ಪೂರ್ತಿ ಜಾರಿಯಾಗಿಲ್ಲ. ಆದರೆ ಈ ಒಪ್ಪಂದದ ಪ್ರಕಾರ ಒಂದು ದೇಶದ ಮೇಲೆ ದಾಳಿಯಾದರೆ, ಇನ್ನೊಂದು ದೇಶ ಸಹಾಯಕ್ಕೆ ಧಾವಿಸಬೇಕು. ಯುಗೋಸ್ಲಾವಿಯಾದ ಜತೆ ಇಂತಹ ಒಪ್ಪಂದ ಆದರೆ ರಶ್ಯಾ ಯುದ್ಧದಲ್ಲಿ ಪ್ರವೇಶಿಸಿದಂತೆ ಎಂದು ವೀಕ್ಷಕರು ಅಭಿಪ್ರಾಯ ಪಟ್ಟಿದ್ದಾರೆ. ನಾಟೋಗೆ ಯುದ್ಧ ನಿಲ್ಲಿಸುವಂತೆ ಬೆದರಿಕೆ ಹಾಕಲು ರಶ್ಯ ಕ್ರಮ ಕೈಗೊಂಡಿದೆ ಎಂದು ವೀಕ್ಷಕರ ಅಭಿಪ್ರಾಯ.

ನಾಟೋದ ಮುಂದೆ ಈಗ ಭೂಪಡೆಗಳನ್ನು ಕೊಸೊವೊ ಕಳಿಸದೆ ಬೇರೆ ದಾರಿ ಕಾಣುತ್ತಿಲ್ಲ. ಇಲ್ಲವೆ ಶಾಂತಿ ಒಪ್ಪಂದ ಮಾಡಿಕೊಂಡು ಬಾಂಬ್ ದಾಳಿ ನಿಲ್ಲಿಸಬೇಕು. ಇದು ನಾಟೋಕ್ಕೆ ಮುಖಭಂಗವಾದಂತೆ. ಕೊಸೊವೊ ನಿರಾಶ್ರಿತರಿಗಾಗಿ ತಾನು ಬಾಂಬ್‌ದಾಳಿ ಆರಂಭಿಸಿದ್ದು ಎಂಬ ನೆವ ಬಯಲಾಗಿ ನಿರಾಶ್ರಿತರು ಕೊಸೊವೊಗೆ ಹೋಗುವುದು ಸಾಧ್ಯವಾಗದಿದ್ದರೆ ನಾಟೋಗೆ ತೀವ್ರ ಮುಖಭಂಗ ಕಾದಿದೆ. ಅಲ್ಲದೆ ಮಿಲಿಟರಿ ವಿಜಯವಿಲ್ಲದೆ, ನಾಟೋ ಪಡೆಗಳನ್ನು ನೆಲೆಗೊಳಿಸುವ ಮೂಲ ಉದ್ದೇಶವೂ ಫಲಿಸುವಂತಿಲ್ಲ ಹೀಗೆ ನಾಟೋ ತಾನೇ ಸೃಷ್ಟಿಸಿರುವ ಇಕ್ಕಟ್ಟಿನ ಪರಿಸ್ಥಿತಿಯಲ್ಲಿ ಸಿಕ್ಕಿಹಾಕಿಕೊಂಡಿದೆ



ಬೆನಜಿರ್ ಪತಿಗೆ ಐದು ವರ್ಷ ಶಿಕ್ಷೆ

ಪಾಕಿಸ್ತಾನದ ಮಾಜಿ ಪ್ರಧಾನಿ ಬೆನಜೀರ್ ಮತ್ತು ಆಕೆಯ ಪತಿ ಝರ್‌ದಾರಿ ಮೇಲೆ ಹಾಕಲಾಗಿದ್ದ ಭಾರಿ ಪ್ರಮಾಣದ ಭ್ರಷ್ಟಾಚಾರ ಅಪಾದನೆಗಳು ರುಜುವಾತಾಗಿದ್ದು, ಇಬ್ಬರಿಗೂ ಹೈಕೋರ್ಟು ಐದು ವರ್ಷಗಳ ಶಿಕ್ಷೆ ವಿಧಿಸಿದೆ. ಅವರು ಸುಪ್ರೀಂ ಕೋರ್ಟಿಗೆ ಅಪೀಲು ಹೋಗುವ ಸಾಧ್ಯತೆ ಇದೆ. ಈ ತೀರ್ಪು ಆಕೆಯ ರಾಜಕೀಯ ಜೀವನಕ್ಕೆ ಅಪಾಯವಾಗಲಿದೆ. ಸ್ವಿಸ್ ಬ್ಯಾಂಕ್‌ಗಳಲ್ಲಿ ಭಾರಿ ಹಣ ಇಟ್ಟಿರುವುದು, ಇಂಗ್ಲೆಂಡಿನಲ್ಲಿ ಭಾರಿ ಆಸ್ತಿಪಾಸ್ತಿ ಮಾಡಿರುವುದು - ಇವೆಲ್ಲಾ ಲಂಚದ ಹಣ ಎನ್ನುವುದು ಸಾಬೀತಾದ ಆಪಾದನೆಗಳಲ್ಲಿ ಸೇರಿವೆ.

ವಿಯೇಟ್ನಾಮ್ ಕಮ್ಯುನಿಸ್ಟ್ ಪಕ್ಷಕ್ಕೆ ಒಂದು ಲಕ್ಷ ಸದಸ್ಯರ ಸೇರ್ಪಡೆ

ಕಮ್ಯುನಿಸ್ಟ್ ದೇಶಗಳಲ್ಲೂ ಕಮ್ಯುನಿಸ್ಟ್ ಪಕ್ಷದ ಸದಸ್ಯರೆಲ್ಲಾ ಹಿಂದೆ ವಿಮೋಚನಾ ಹೋರಾಟದಲ್ಲಿ ಭಾಗವಹಿಸಿದವರೇ. ಹೊಸಬರು ಸೇರುತ್ತಿಲ್ಲ, ಹೊಸ ಪೀಳಿಗೆ ಕಮ್ಯುನಿಸ್ಟ್ ಪಕ್ಷವನ್ನು ನೆಚ್ಚಿಕೊಂಡಿಲ್ಲ ಎಂದೆಲ್ಲಾ ಸಾಮ್ರಾಜ್ಯ ಶಾಹಿ ಮಾಧ್ಯಮ ಪ್ರಚಾರ ಮಾಡುತ್ತಿರುತ್ತದೆ. ಆದರೆ ಅದಕ್ಕೆ ವ್ಯತಿರಿಕ್ತವಾಗಿ ವಿಯೇಟ್ನಾಮ್ ಕಮ್ಯುನಿಸ್ಟ್ ಪಕ್ಷಕ್ಕೆ ಕಳೆದ ವರ್ಷ ಸೇರಿದ ಒಂದು ಲಕ್ಷ ಸದಸ್ಯರಲ್ಲಿ ಶೇಕಡಾ 50ಕ್ಕೂ ಹೆಚ್ಚು ಸದಸ್ಯರು 30 ವರ್ಷಕ್ಕಿಂತ ಕೆಳಗಿನವರು. ಶೇಕಡಾ 30 ರಷ್ಟು ಮಹಿಳೆಯರು ಶೇಕಡಾ 12 ರಷ್ಟು ಅಲ್ಪಸಂಖ್ಯಾತ ಜನಾಂಗೀಯ ಗುಂಪುಗಳಿಂದ ಬಂದವರು. ಹೋಚಿಮಿನ್ ಯೂತ್ ಲೀಗ್ ವಿಯೇಟ್ನಾಮಿನ ಪ್ರಮುಖ ಯುವ ಸಂಘಟನೆ. ಹೊಸ ಸದಸ್ಯರಲ್ಲಿ ಅರ್ಧದಷ್ಟು ಈ ಯುವ ಸಂಘಟನೆ ಶಿಫಾರಸು ಮಾಡಿದವರು. ಆಳುವ ಕಮ್ಯುನಿಸ್ಟ್ ಪಕ್ಷಗಳು ಜನರಲ್ಲಿ ನೆಲ ಕಳೆದುಕೊಳ್ಳುತ್ತಿವೆ ಎಂಬ ಪ್ರಚಾರ ಸುಳ್ಳು ಎಂದು ಇದರಿಂದ ಗೊತ್ತಾಗುತ್ತದೆ.

ದಕ್ಷಿಣ ಕೊರಿಯಾದಲ್ಲಿ ಇನ್ಶೂರೆನ್ಸ್‌ಗಾಗಿ ಬೆರಳು ಕಡಿದುಕೊಂಡ

ದಕ್ಷಿಣ ಕೊರಿಯದಲ್ಲಿ ಒಬ್ಬ ರಿಟ್ರೆಂಚ್ ಆಗಿರುವ ಕಾರ್ಮಿಕ ಇನ್ಶೂರೆನ್ಸ್ ಹಣ ಗಳಿಸಲಿಕ್ಕಾಗಿ ತನ್ನ ಬೆರಳೇ ಕಡಿದುಕೊಂಡ ಪ್ರಕರಣ ಬೆಳಕಿಗೆ ಬಂದಿದೆ. ಆತ ಸ್ವಲ್ಪ ಸಮಯದ ಹಿಂದೆ ಹತ್ತುಲಕ್ಷ ಡಾಲರಿನಷ್ಟು ಬೆಲೆ ಬಾಳುವ ಇನ್ಶೋರೆನ್ಸ್ ಮಾಡಿದ್ದ ಅಂಗವಿಕಲನಾದರೆ ಮಾತ್ರ ಈ ಹಣಸಿಗುವದು. ತೀವ್ರ ಆರ್ಥಿಕ ಬಿಕ್ಕಟ್ಟು, ಭಾರಿ ಪ್ರಮಾಣದಲ್ಲಿ ಕಾರ್ಮಿಕರ ರಿಟ್ರೆಂಚ್ಮೆಂಟ್ ಎದುರಿಸುತ್ತಿರುವ ದಕ್ಷಿಣ ಕೊರಿಯಾದಲ್ಲಿ ಇಂತಹ ಹಲವಾರು ಪ್ರಕರಣಗಳ ವರದಿಯಾಗುತ್ತಿವೆ.

ಮೆಕ್ಸಿಕೊದಲ್ಲಿ ವಿದ್ಯುತ್, ತೈಲದಲ್ಲಿ ರಾಷ್ಟ್ರೀಯ ಏಕಸ್ವಾಮ್ಯ ಮುರಿಯಲು ಸಂವಿಧಾನ ತಿದ್ದುಪಡಿ

ಮೆಕ್ಸಿಕೊದಲ್ಲಿ ಸಂವಿಧಾನದ ಪ್ರಕಾರ ತೈಲ, ವಿದ್ಯುತ್ ಜನರೇಷನ್ ರಾಷ್ಟ್ರೀಯ ಸಂಪನ್ಮೂಲ ಈ ಕ್ಷೇತ್ರಗಳಲ್ಲಿ ವಿದೇಶಿ ಕಂಪನಿಗಳ ಪ್ರವೇಶಿಸುವಂತಿಲ್ಲ. ಅಮೆರಿಕದ ಒತ್ತಡದಿಂದ ಮೆಕ್ಸಿಕೊ ಸರ್ಕಾರ ಸಂವಿಧಾನ ತಿದ್ದುಪಡಿಗೆ ಹೊರಟಿದೆ. ತೈಲ ಕ್ಷೇತ್ರದಲ್ಲಿ ಅಮೆರಿಕನ್ ಕಂಪನಿಗಳ ಪ್ರವೇಶಕ್ಕೆ ಅನುವು ಮಾಡಿಕೊಡುವದು ಅದರ ಮುಖ್ಯ ಉದ್ದೇಶವಾದರೂ ಸದ್ಯಕ್ಕೆ ವಿದ್ಯುತ್ ಕ್ಷೇತ್ರಕ್ಕೆ ಮಾತ್ರ ಈ ತಿದ್ದುಪಡಿ ಸೀಮಿತವಾಗಿದೆ. ಸರ್ಕಾರದ ಈ ನಿರ್ಧಾರಕ್ಕೆ ತೀವ್ರ ವಿರೋಧ ಕಂಡು ಬಂದಿದೆ.

ಜಾತಿ ವ್ಯವಸ್ಥೆಯ ಮೂಲಬೇರುಗಳೂ ಅವುಗಳ ನಿರ್ಮೂಲನವೂ

ಜಿ.ಎನ್.ನಾಗರಾಜ್

ಜಾತಿ ಪದ್ಧತಿ, ಜಾತಿ ವ್ಯವಸ್ಥೆ ಎಂಬ ಮಾತುಗಳು ಬರುವಾಗೆಲ್ಲಾ ಅದೊಂದು ಸಾಮಾಜಿಕ ಅನಿಷ್ಟ, ಭಾರತಕ್ಕೇ ವಿಶಿಷ್ಟವಾಗಿರುವ ಸಾಮಾಜಿಕ ಪದ್ಧತಿ ಎಂದು ಅದನ್ನು ವರ್ಣಿಸಲಾಗುತ್ತದೆ. ಹಾಗೆಯೆ ಮಾರ್ಕ್ಸ್‌ವಾದಿಗಳು ಕೇವಲ ವರ್ಗ ವಿಭಜನೆ ಹಾಗೂ ವರ್ಗ ಸಂಘರ್ಷದ ಬಗ್ಗೆ ಮಾತನಾಡುತ್ತಾ ಜಾತಿ ಎಂಬ ವಾಸ್ತವವನ್ನು ಪರಿಗಣಿಸುವುದೇ ಇಲ್ಲ, ಆದುದರಿಂದ ಜಾತಿವ್ಯವಸ್ಥೆ ಆಧಾರಿತವಾದ ಭಾರತಕ್ಕೆ ಕಮ್ಯುನಿಸಂ ಅಥವಾ ಮಾರ್ಕ್ಸ್‌ವಾದ ಸೂಕ್ತವಲ್ಲ ಎಂಬ ವಾದಗಳನ್ನು ಸಮಾಜವಾದಿಗಳು ಹಾಗೂ ಇತರ ಕೆಲವು ಬುದ್ಧಿ ಜೀವಿಗಳು, ಸಮಾಜ ವಿಜ್ಞಾನಿಗಳು ಹೂಡುತ್ತಾ ಬಂದಿದ್ದಾರೆ.

ಕಮ್ಯುನಿಸ್ಟ್ ಚಳುವಳು ಮತ್ತು ಜಾತಿವ್ಯವಸ್ಥೆ

ಆದರೆ ಅದೇ ಸಂದರ್ಭದಲ್ಲಿ ಭಾರತದಲ್ಲಿ ಕಮ್ಯುನಿಸ್ಟ್ ಚಳುವಳಿ ಬೆಳೆಯುತ್ತಾ ಬಂದಿದೆ, ಭಾರತದಲ್ಲಿ ಒಂದು ಗಣನೀಯ ರಾಜಕೀಯ ಶಕ್ತಿಯನ್ನು ಗಳಿಸಿದೆ. ಮತ್ತು ಅದಕ್ಕೂ ಮಿಗಿಲಾದ ಪಾತ್ರವನ್ನು ನಿರ್ವಹಿಸುತ್ತಾ ದೇಶದ ಚರಿತ್ರೆಯ ಅನೇಕ ತಿರುವುಗಳಲ್ಲಿ ನಿರ್ಣಾಯಕ ಪಾತ್ರವನ್ನು ಹಾಗೂ ಕಮ್ಯುನಿಸ್ಟ್ ಚಳುವಳಿ ಸಮಾಜದ ಜಾತಿ ಬದ್ಧತೆಯನ್ನು ಸೀಳುತ್ತಾ ಬೆಳೆಯುತ್ತಿರುವುದಕ್ಕೆ ಭಾರತದ ಜಾತಿ ವ್ಯವಸ್ಥೆಯ ಮೂಲ ಬೇರುಗಳನ್ನು ಶೋಧಿಸುವಲ್ಲಿ ಅದನ್ನು ತುಂಡರಿಸುವ ಪ್ರಯತ್ನದಲ್ಲಿ ಯಶಸ್ಸನ್ನು ಕಂಡದ್ದೇ ಆಗಿದೆ. ಹಾಗಾದರೆ ಜಾತಿ ವ್ಯವಸ್ಥೆ ಹಾಗೂ ಅಸ್ಪೃಶ್ಯತೆಯ ಮೂಲ ಬೇರುಗಳು ಎಲ್ಲಿವೆ ಹಾಗೂ ಅವುಗಳನ್ನು ಬುಡಸಹಿತ ಕಿತ್ತೆಸೆಯುವುದು ಹೇಗೆ ಎಂಬ ಪ್ರಶ್ನೆ ಧೀರ್ಘವಾದ ಉತ್ತರವನ್ನು, ವಾದ-ವಿವಾದಗಳನ್ನು ಬಯಸುತ್ತದೆ. ಅಂತಹ ಪ್ರಯತ್ನಕ್ಕೆ ಇಲ್ಲಿ ಅವಕಾಶ ವಿಲ್ಲವೆಂಬುದರಿಂದ ಕೇವಲ ಸಾರಾಂಶ ರೂಪವಾದ ಉತ್ತರವನ್ನು ಇಲ್ಲಿ ನೀಡಬಯಸುತ್ತೇನೆ. ಹೆಚ್ಚಿನ ಚರ್ಚೆಗೆ ಮುಂದೆ ಇನ್ನೂ ಹಲವು ಅವಕಾಶಗಳಿವೆ.

ಜಾತಿ ವ್ಯವಸ್ಥೆಯ ಬಗ್ಗೆ ಭಾರತದಲ್ಲಿ ಕಮ್ಯುನಿಸ್ಟ್ ಚಳುವಳಿಯ ಆದ್ಯ ನೇತಾರರಾದ ಇ.ಎಂ.ಎಸ್. ನಂಬೂದರಿಪಾದ್, ಬಿ.ಟಿ.ರಣದಿವೆಯವರು, ಮಾರ್ಕ್ಸ್‌ವಾದಿ ಇತಿಹಾಸಕಾರರು, ಸಮಾಜಶಾಸ್ತ್ರಜ್ಞರಾದ ಡಿ.ಡಿ. ಕೋಸಾಂಬಿ, ಇರ್ಫಾನ್‌ಹಬೀಬ್, ಆರ್.ಎಸ್. ಶರ್ಮ, ರೋಮಿಲಾಥಾಪರ್, ಎ.ಆರ್. ದೇಸಾಯಿಯವರು ತಮ್ಮ ಹಲವು ಲೇಖನಗಳಲ್ಲಿ ವಿಚಾರಮಂಡಿಸಿದ್ದಾರೆ. ಇತ್ತೀಚೆಗೆ ಸೀತಾರಾಂ ಯೆಚೂರಿಯವರು ಬರೆದ ಒಂದು ಪುಟ್ಟ ಪುಸ್ತಿಕೆಯೂ ಪ್ರಕಟವಾಗಿದೆ. ಇವುಗಳನ್ನು ಆಸಕ್ತರು ಅಭ್ಯಾಸ ಮಾಡಬಹುದು. ಈ ವಿಶ್ಲೇಷಣೆಗಳ ಸಾರವನ್ನು ಇಲ್ಲಿ ನಿಮ್ಮ ಮುಂದಿಡಲಾಗಿದೆ.

ಜಾತಿ ವ್ಯವಸ್ಥೆಯ ವರ್ಗರೂಪ

ವಿಶ್ವಾದ್ಯಂತ ಹಲವು ಸಾವಿರ ವರ್ಷಗಳ ಹಿಂದೆ ಒಡೆದು ಗಿರಿಜನ ಬುಡಕಟ್ಟುಗಳ ಸಮಾನತೆಯ ಜನಜೀವನವನ್ನು ಒಡೆದು ಶೋಷಿತ ಸಮಾಜ ಅಥವಾ ವರ್ಗ ವಿಭಜಿತವಾದ ಸಮಾಜಗಳು ಉದ್ಭವಿಸಿದಂತೆ ಭಾರತದಲ್ಲಿಯೂ ಪ್ರಮುಖ ಪ್ರದೇಶಗಳಲ್ಲಿ ಮುಖ್ಯವಾಗಿ ಕೃಷಿ, ಪಶುಸಂಗೋಪನೆಯಲ್ಲಿ ತೊಡಗಿದ್ದ ನದೀ ಬಯಲುಗಳಲ್ಲಿ ಸಮಾಜ ಶೋಷಕ - ಶೋಷಿತ ವರ್ಗಗಳಾಗಿ ವಿಭಜನೆಗೊಂಡಿತು. ವರ್ಗ ವಿಭಜನೆ ಯುರೋಪಿನಲ್ಲಿ ಗುಲಾಮಪದ್ಧತಿಯ ರೂಪ ಪಡೆಯಿತು. ಇಡೀ ಸಮುದಾಯದ ಆಸ್ತಿಯಾಗಿದ್ದ ಪ್ರಾಕೃತಿಕ ಸಂಪನ್ಮೂಲಗಳನ್ನು ಕೆಲವೇ ಜನ ಒಡೆಯರು ಆಕ್ರಮಿಸಿಕೊಂಡು ಉಳಿದೆಲ್ಲಾ ಜನ ಸಮುದಾಯವನ್ನು ತಮ್ಮ ಆಡಿಯಾಳಾಗಿ, ದುಡಿಯುವ ಗುಲಾಮರನ್ನಾಗಿ ಮಾಡಿಕೊಂಡು ತಮ್ಮ ಕ್ರೂರ ಶೋಷಣೆಗೆ ಒಳಪಡಿಸಿದರು. ಇದೇ ಗುಲಾಮರು-ಗುಲಾಮರ ಒಡೆಯರಾಗಿ ವಿಭಜಿತವಾದ ರೋಮನ್ ಸಾಮ್ರಾಜ್ಯದಲ್ಲಿ ಈಜಿಪ್ಟ್‌ನಲ್ಲಿ ರೂಪುಗೊಂಡ ಮೊದಲ ವರ್ಗ ಸಮಾಜ.

ಭಾರತದ ನದೀ ಬಯಲುಗಳಲ್ಲಿಯೂ ಕೂಡ ಪ್ರಾಕೃತಿಕ ಸಂಪನ್ಮೂಲಗಳನ್ನೆಲ್ಲಾ ತನ್ನದಾಗಿ ಮಾಡಿಕೊಂಡ ಕೆಲವರು ಉಳಿದವರನ್ನೆಲ್ಲಾ ಶೋಷಿಸುವ ವರ್ಣಾಶ್ರಮ ಧರ್ಮವಾಗಿ ಆರಂಭವಾಯಿತು. ಇದರಲ್ಲಿ ಮೂರು 'ದ್ವಿಜ' ವರ್ಣಗಳು ಬ್ರಾಹ್ಮಣ- ಕ್ಷತ್ರಿಯ-ವೈಶ್ಯರು ಶೂದ್ರವರ್ಣವನ್ನು ಶೋಷಿಸುವ ವ್ಯವಸ್ಥೆಯಾಯಿತು. ಮೂರು ದ್ವಿಜ ವರ್ಣಗಳು ಭಾರತದ ರಾಜಕೀಯ ಸಾಮಾಜಿಕ, ಧಾರ್ಮಿಕ, ಸಾಂಸ್ಕೃತಿಕ ಸಂಸ್ಥೆಗಳನ್ನು ಸೃಷ್ಟಿಸಿ ಅವುಗಳ ಮೇಲೆ ತಮ್ಮ ಯಾಜಮಾನ್ಯವನ್ನು ಸ್ಥಾಪಿಸಿದರು. ಇದು ಋಗ್ವೇದ ಇತರ ವೇದ, ಉಪನಿಷತ್ತುಗಳಲ್ಲಿ ಚಿತ್ರಿತವಾದ ಸಮಾಜ ವ್ಯವಸ್ಥೆ. ರಾಮಾಯಣ, ಮಹಾಭಾರತಗಳಲ್ಲಿ, ಇತರ ಪುರಾಣ ಸಾಹಿತ್ಯಗಳಲ್ಲಿ ಇರುವಂತೆ ನದಿ ಬಯಲುಗಳಿಂದ ವಿಸ್ತಾರವಾದ ಭಾರತಕ್ಕೆ ಈ ವರ್ಣಾಶ್ರಮವೆಂಬ ವರ್ಗ ವ್ಯವಸ್ಥೆ ಹಬ್ಬಿ ಹೆಚ್ಚು ಹೆಚ್ಚು ಗಿರಿಜನ ಪಂಗಡಗಳನ್ನು ಒಳಗೊಳ್ಳುತ್ತಾ ಹೋದಂತೆ ವರ್ಣಾಶ್ರಮದ ಮೂಲಸಿದ್ಧಾಂತದ ರಚನೆಯಡಿಯಲ್ಲಿಯೇ ವಿಸ್ತರಿಸುತ್ತಾ ಜಾತಿ - ಉಪಜಾತಿಗಳ ವ್ಯವಸ್ಥೆಯಾಗಿ ರೂಪುಗೊಂಡಿತು. ಈ ಪ್ರಕ್ರಿಯೆಯಲ್ಲಿಯೇ ಚಾತುರ್ವರ್ಣ್ಯದ ಹೊರಗೆ ಪಂಚಮ ವರ್ಣ ಅಸ್ಪೃಶ್ಯ ಜಾತಿ ಉಪಜಾತಿಗಳ ಸೇರ್ಪಡೆಯಾಯಿತು. ಬಯಲು ಪ್ರದೇಶದಲ್ಲಿ ಜಾತಿವ್ಯವಸ್ಥೆ ಆಧಾರಿತ ಸಮಾಜ-ಅದರ ಕೃಷಿ, ಪಶುಪಾಲನೆ ವ್ಯವಸ್ಥಿತವಾಗಿ ಕೆಲವೇ ಮೇಲು ಜಾತಿಗಳ ಕೈ ಸೇರಿದ ಮೇಲೆ ಆ ಸಮಯದಲ್ಲಿ ಕಾಡು, ಬೆಟ್ಟಗಳಲ್ಲಿ ಸಂಚರಿಸುತ್ತಾ ಗಿರಿಜನ ಬುಡಕಟ್ಟುಗಳಾಗಿದ್ದ ಪಂಗಡಗಳು - ನಾಗರೀಕತೆಯ ಅಂಚಿನಲ್ಲಿದ್ದ ಪಂಗಡಗಳು ಬಯಲು ಪ್ರದೇಶದ ಈ ನಾಗರೀಕ ಸಮಾಜಗಳಿಗೆ ಸೇರ್ಪಡೆ ಯಾದಾಗ ಅವರನ್ನು ಪ್ರಾಕೃತಿಕ ಸಂಪನ್ಮೂಲಗಳಿಂದ ಎಲ್ಲ ರೀತಿಯಿಂದಲೂ ವಂಚಿಸಲೆಂದೇ ಅಸ್ಪೃಶ್ಯತೆಯನ್ನು ಆರೋಪಿಸಲಾಯಿತು. ಅತ್ಯಂತ ಕ್ರೂರ ದಬ್ಬಾಳಿಕೆ, ಶೋಷಣೆಗೆ ಒಳಗು ಮಾಡಲಾಯಿತು.

ಯುರೋಪಿನಲ್ಲಿ ಈಜಿಪ್ಟಿನಲ್ಲಿ ನೇರವಾದ, ಬಹಿರಂಗವಾದ, ಕ್ರೂರವಾದ ಮಾರ್ಗಗಳಿಂದ ಗುಲಾಮ ಸಮಾಜ ಸೃಷ್ಟಿಯಾದರೆ ಭಾರತದಲ್ಲಿ ಧಾರ್ಮಿಕ ಗ್ರಂಥಗಳ, ಸ್ಮೃತಿ, ಪುರಾಣಗಳ ಮೂಲಕ ಈ ವ್ಯವಸ್ಥೆ ದೇವರದೇ ನಿರ್ಮಾಣ ಎನ್ನುವ ನಂಬಿಕೆಯನ್ನು ಮೂಡಿಸುವುದರ ಮೂಲಕ ಜಾತಿ ವ್ಯವಸ್ಥೆ ನಿರ್ಮಾಣವಾಯಿತು. ಉಪ ನಿಷತ್ತುಗಳಲ್ಲಿ ಆರಂಭವಾದ ಕರ್ಮಸಿದ್ಧಾಂತ ಜನ್ಮ ಸಿದ್ಧಾಂತಗಳು ಮುಂದೆ ಭಗವದ್ಗೀತೆ, ಗೌತಮ ಧರ್ಮ ಶಾಸ್ತ್ರ, ಯಾಜ್ಞವಲ್ಕ್ಯನ ಸ್ಮೃತಿ, ಮನುಸ್ಮೃತಿಗಳ ಮೂಲಕ ಬಿಗಿಯಾದ ಸಡಿಲಿಸಲಾಗದ ವ್ಯವಸ್ಥೆಯಾಗಿ ರೂಪುಗೊಂಡಿತು. ಮುಂದೆ ಶಂಕರಾಚಾರ್ಯರು ಬ್ರಹ್ಮಸೂತ್ರಕ್ಕೆ ಬರೆದ ಭಾಷ್ಯ ಮುಂತಾದವುಗಳ ಮೂಲಕ ಜಾತಿ ವ್ಯವಸ್ಥೆಯ ವಿರುದ್ಧ ಜೈನ, ಬೌದ್ಧ ಧರ್ಮಗಳು ಹಾಕಿದ ಸವಾಲನ್ನು ಎದುರಿಸಲಾಯಿತು.


ಮನುಸ್ಮೃತಿ ಮತ್ತು ಜಾತಿ ಪದ್ಧತಿ

ಈ ಎಲ್ಲಾ ಧಾರ್ಮಿಕ ಗ್ರಂಥಗಳ ಬಿಗಿ ಹಿಡಿತದ ಉದಾಹರಣೆಯಾಗಿ ಹೆಚ್ಚು ಪ್ರಚಲಿತವಾಗಿರುವ ಮನುಸ್ಮೃತಿಯನ್ನು ನೋಡಬಹುದು. ಜಾತಿ ವ್ಯವಸ್ಥೆ ಸಾಮಾಜಿಕ, ಧಾರ್ಮಿಕ ರಾಜಕೀಯ, ಆರ್ಥಿಕ ಆಯಾಮಗಳನ್ನೊಳಗೊಂಡ ಸಮಗ್ರ ಸಮಾಜ ರಚನೆ ಎಂಬುದು ಮನುಸ್ಮೃತಿಯ ವಿವಿಧ ಶ್ಲೋಕಗಳಿಂದ ಹೊರಪಡುತ್ತದೆ.

ವೈಶೇಷ್ಯಾತ್ಪ್ರಕೃತಿ
ಶ್ರೈಷ್ಠಾತ್ ನಿಯಮಸ್ಯ ಚಧಾರಣಾತ್
ಸಂಸ್ಕಾರಸ್ಯ ವಿಶೇಷಾಶ್ಚ ವರ್ಣಾನಾಂಬ್ರಾಹ್ಮಣಃಪ್ರಭುಃ

ಪ್ರಕೃತಿಯಲ್ಲಿ ಶ್ರೇಷ್ಠ ಸಂಸ್ಕಾರ, ನಿಯಮಗಳ ಸಾಕಾರರೂಪ ಬ್ರಾಹ್ಮಣನೇ ವರ್ಣ ವ್ಯವಸ್ಥೆಯ ಪ್ರಭು ಎಂದು ಬ್ರಾಹ್ಮಣನಿಗೆ ಇಡೀ ಜಾತಿ ವ್ಯವಸ್ಥೆಯ ಧಾರ್ಮಿಕ ಪ್ರಭುತ್ವವನ್ನು ನೀಡುವ ಮನುಸ್ಮೃತಿ ಇತರ ಜಾತಿಗಳ ಕರ್ತವ್ಯವನ್ನು ವಿಧಿಸುತ್ತದೆ.

(ಮುಂದುವರಿಯುವುದು)



ಮಹಿಸಿದೆ. ಪ. ಬಂಗಾಳ, ಕೇರಳ, ತ್ರಿಪುರಾಗಳಲ್ಲಿ ಹಾಗೂ ದೇಶದ ಕೆಲವು ಜಿಲ್ಲೆಗಳಲ್ಲಿ ನಿರಂತರ ಜನ ಬೆಂಬಲವನ್ನು ಪಡೆದಿದೆ. ಆಯಾ ಪ್ರದೇಶಗಳ ಸಾಮಾಜಿಕ ಆರ್ಥಿಕ ವಾಸ್ತವವನ್ನು-ಜಾತಿ ವ್ಯವಸ್ಥೆ, ಅಸ್ಪೃಶ್ಯತೆ ಒಡ್ಡಿದ ಸವಾಲನ್ನು ಎದುರಿಸದೆ ಈ ಜನ ಬೆಂಬಲ ಸಾಧ್ಯವೆ? ಭಾರತದಲ್ಲಿ ಕಮ್ಯುನಿಸ್ಟ್ ಚಳುವಳಿ ಇನ್ನೂ ಹೆಚ್ಚು ವ್ಯಾಪಕವಾಗಿ ಹಾಗೂ ಆಳವಾಗಿ ಬೆಳೆಯ ಬೇಕೆಂಬುದೂ ಕೂಡ ಸತ್ಯ. ಅದಕ್ಕಾಗಿ ಜಾತಿ ವಿಭಜಿತ ಸಮಾಜದ, ಅಸ್ಪೃಶ್ಯತೆಯ ಶಾಪ ಕಾಡುತ್ತಿರುವ ಮಾನವ ಸಮುದಾಯದ ಸವಾಲನ್ನು ನೇರವಾಗಿ ಮುಖಾಮುಖಿ ಯಾಗಿ ಎದುರಿಸ ಬೇಕೆನ್ನುವುದೂ ನಿಜ. ಅದೇ ವೇಳೆಗೆ ಜಾತಿ ಭೇದ ಹಾಗೂ ಅಸ್ಪೃಶ್ಯತೆಯ ವಿರುದ್ಧ ಭಾರತದಲ್ಲಿ ಕಮ್ಯುನಿಸ್ಟ್ ಚಳುವಳಿ ಹೋರಾಟದಲ್ಲಿ ಇಲ್ಲಿಯವರೆಗೆ ಗಳಿಸಿದ ಯಶಸ್ಸನ್ನು ಬೇರೆಯಾವ ರಾಜಕೀಯ ಶಕ್ತಿಯೂ ಸಾಮಾಜಿಕ, ರಾಜಕೀಯ ಸಿದ್ಧಾಂತಗಳೂ ಗಳಿಸಲೂ ಸಾಧ್ಯವಾಗಿಲ್ಲ ಎಂಬುದೂ ವಾಸ್ತವ ಸತ್ಯ. ಕೋಟಿ ಕೋಟಿ ಜನರಲ್ಲಿ ಅಸ್ಪೃಶ್ಯತೆಯ ಭಯಂಕರತೆಯನ್ನು ನಿರ್ಮೂಲನ ಮಾಡಿದ, ಜಾತಿ ಭೇದಗಳನ್ನು ಪರಿಗಣಿಸದೆ ಎಲ್ಲ ಮಾನವ ಒಂದೇ ಎಂಬ ಭಾವನೆಯನ್ನು ಭಾರತದ ಹಳ್ಳಿಗಳ ವಾಸ್ತವ ನೆಲದಲ್ಲಿ ಬೇರೂರುವಂತೆ ಮಾಡುತ್ತಿರುವ ಹೆಮ್ಮೆ ನಮ್ಮದಾಗಿದೆ. ನಮ್ಮ ಚಳುವಳಿಯ ವಿರುದ್ಧ ಈ ವಿಷಯದಲ್ಲಿ ಟೀಕೆ ಮಾಡುತ್ತಿದ್ದ ಹಲವು ಸಿದ್ಧಾಂತಗಳು, ರಾಜಕೀಯ ಶಕ್ತಿಗಳು ತಮ್ಮ ಸಿದ್ಧಾಂತವನ್ನೇ ಬಿಟ್ಟು ಪಲಾಯನ ಮಾಡಿದ್ದಾರೆ. ಜಾತಿ ವಿನಾಶವನ್ನು ಮರೆತು ಜಾತಿ ಪೋಷಣೆಯನ್ನು ಕೈಗೊಂಡಿದ್ದಾರೆ ಎಂಬುದು ಇಂದು ಭಾರತದಲ್ಲಿ ಎಲ್ಲೆಡೆ ಕಾಣುವ, ನಮ್ಮೆಲ್ಲರನ್ನೂ ಕಾಡುವ ದೃಶ್ಯ.

ಈ ಹಿನ್ನೆಲೆಯಲ್ಲಿ ಮಾರ್ಕ್ಸ್‌ವಾದದ ಈ ಯಶಸ್ಸಿಗೆ

ಅಸ್ಪೃಶ್ಯತೆ: ಮನುಸ್ಮೃತಿ

ನಾಲ್ಕು ವರ್ಣಗಳಿಗೂ ದೂರವಾದ ಅಂತ್ಯಜರ ಪರಿಸ್ಥಿತಿ ಇನ್ನೂ ಭೀಕರ ಎನ್ನುವುದರಲ್ಲಿ ಆಶ್ಚರ್ಯವಂಟೇ!

ಮನುಸ್ಮೃತಿಯ ಪ್ರಕಾರ ನಿಷಾದರಿಗೆ ಮೀನು, ಆಯೋಗರಿಗೆ ಕೆತ್ತನೆ, ಮೇದ, ಆಂಧ್ರ, ಚುಂಚು, ಮದ್ಗು ಇವರಿಗೆ ಕಾಡುಪ್ರಾಣಿಗಳ ಬೇಟೆ ವೃತ್ತಿಯ ಕ್ಷತ್ರ, ಉಗ್ರ, ಪುಕ್ಕಸ ಇವರಿಗೆ ಬಿಲದಲ್ಲಿರುವ ಉಡ ಮೊದಲಾದ ಪ್ರಾಣಿಗಳನ್ನು ತಿಂದು ಬದುಕಬೇಕು. ಜೊತೆಗೆ

ಚಂಡಾಲ ಶ್ವಪಚಾನಾಂತು ಬಹಿಗ್ರಾಃ ಮಾತ್ಪ್ರತಿ ಶ್ರಯಃ
ಅಪಪಾತ್ರಾಶ್ಚಕರ್ತವ್ಯಾ ಧನಮೇ ಷಾಂಶ್ವಗರ್ದಭಮ್
ವಾಸಾಂಸಿ ಮೃತ ಚೇಲಾನಿ ಭಿನ್ನ ಭಾಂಡೇಷು
ಭೋಜನಮ್

ಚಾಂಡಾಲ, ಶ್ವಪಚರುಗಳು ಊರಹೊರಗೆ ಮಾತ್ರ ಆಶ್ರಯ ಪಡೆಯಬೇಕು. ಅವರ ಸಂಪತ್ತೆಲ್ಲಾ ನಾಯಿ ಕತ್ತೆಗಳು ಮಾತ್ರ. ಬಟ್ಟೆ ಹೆಣಗಳಿಗೆ ಹಾಕಿದ ಬಟ್ಟೆ.

ಇನ್ನು ಅವರಿಗೆ ಆಹಾರ ನೀಡ ಬೇಕಾದರೆ ಕೂಲಿಯವರ ಮೂಲಕ ಒಡೆದು ಬೇಡವಾದ ಪಾತ್ರೆಯಲ್ಲಿ ನೀಡಬೇಕು.

ರಾತ್ರೌ ನವಿಚರೇಯುಸ್ತೇ ಗ್ರಾಮೇಷು ನಗರೇಷು ಚ
ದಿವಾ ಚರೇಯುಃ ಕಾರ್ಯಾರ್ಥಂ ಚಿಹ್ನಿತಾ ರಾಜಶಾಸನೈ
ಅಬಾಂಧವಂ ಶವಂ ಚೈವ ನಿಹನರೆಯುರಿತಿ ಸ್ಥಿತಿಃ

ಹಳ್ಳಿ ಪಟ್ಟಣಗಳಲ್ಲಿ ರಾತ್ರಿ ಕಾಲದಲ್ಲಿ ಸಂಚರಿಸಲೇಬಾರದು (ಅಂದರೆ ಅಲ್ಲಿ ಉಳಿದು ಕೊಳ್ಳುವುದಕ್ಕೆ ಅವಕಾಶವಿಲ್ಲ) ಹಗಲು ಹೊತ್ತಿನಲ್ಲಿ ಯಾರ ಮೈ ಮೇಲೆ ಗುರುತು ಮಾಡುವ ಮೂಲಕ ರಾಜನು ಅನುಮತಿ ನೀಡಿದ್ದಾನೋ ಅವರು ಮಾತ್ರ ನಿರ್ಗತಿಕರ ಶವ ಸಂಸ್ಕಾರ ಮಾಡುವುದಕ್ಕಾಗಿ ಒಳಬರಬಹುದು. ಗಲ್ಲಿಗೆ ಹಾಕುವುದು ವಧಿತರ ಚಾಪೆ ಬಟ್ಟೆ ಬರೆ ಉಪಯೋಗಿಸುವುದರಿಂದ ಇವರ ಜೀವನ.

ಇದು ಅಸ್ಪೃಶ್ಯರಿಗೆ ವಿಧಿಸಿದ ಜೀವನ. ಇಂತಹ ಪ್ರಾಣಿಗಳಿಂತಲೂ ಕೀಳಾದ ಜೀವನವನ್ನು ವಿಧಿಸುವ ಮೂಲಕ ಅತ್ಯಂತ ಕೀಳು ಆದರೆ ನಗರ ಪಟ್ಟಣ, ಹಳ್ಳಿಗಳಲ್ಲಿನ ಜೀವನಕ್ಕೆ ಅತಿ ಅವಶ್ಯವಾದ ಕೆಲಸಗಳಿಗೆ ಅವರನ್ನು ಸೀಮಿತಗೊಳಿಸುವ ಮೂಲಕ ಈ ಕೆಲಸಗಳನ್ನು ಮಾಡಲು ಅತ್ಯಂತ ಜನ ಕಾಯುತ್ತಾ ಕುಳಿತುಕೊಳ್ಳುವಂತೆ ಹಾಗೂ ಅಗ್ಗದಲ್ಲಿ-ಕೇವಲ ಬಿಸಾಕುವ ಆಹಾರಕ್ಕಾಗಿಯೇ ಈ ಕೆಲಸಗಳನ್ನು ಮಾಡಲು ಸಿದ್ಧರಾಗುವಂತೆ ವ್ಯವಸ್ಥೇ ಮಾಡಿದೆ.



ಇ.ಎಂ.ಎಸ್. ಭವನ ನಿಧಿ

ಹಿಂದಿನ ಮೊತ್ತ ರೂ.	10,46,141-50
ಸಿಪಿಐ(ಎಂ) ಬೆಂಗಳೂರು ಜಿಲ್ಲಾ ಸಮಿತಿಯಿಂದ	
ಲೀಲಾ	100
ಸ್ವರೂಪ	30
ಅನಂತ್	50
ಲಕ್ಷ್ಮಿ	200
ಬಸಮ್ಮ	100
ಕೆ. ಶ್ರೀನಿವಾಸ್	1200
ಕೆ.ಎಸ್.ಶಾರದಾ	1000
ಜೂಲಿಯಾನಾ ವಿನ್ಸಂಟ್	135
ಶ್ರೀಧರ ಮೂರ್ತಿ	100
ಮಧುರ ದೇವಿ	50
ಜಯಲಕ್ಷ್ಮಿ	10
ವಿ.ಎಂ.ಪಿ. ನಂಬಿಸನ್	250
ಎಂ.ಎನ್.ವಿಠಲ	250
ಆದಿ ನಾರಾಯಣ	125
ಎನ್. ಮುರುಗೇಶ್	75
ಕೆ. ಮೂರ್ತಿ	75
ಐ. ಮುತ್ತ	75
ಶಿವ	75
ಎಸ್.ಸುಬ್ರಮಣಿ	75
ಎನ್. ಕೃಷ್ಣ	75
ಮಣಿ	75
ಸಿ. ರಾಜು	75
ಅರ್ಜುನ	75
ಮುರುಗೇಶ್	75
ನಾಗರಾಜ್	75
ಸೇತು	75
ಚಂದ್ರಶೇಖರ್	75
ವಿನಾಯಗಂ	50
ಶ್ರೀಮತಿ	1000
ಸುನಂದ	200
ರವಿಕುಮಾರ್	100
ಡಿ. ರಾಧಾ	100
ಮೋನಪ್ಪ	400
ಹೆಚ್. ಎನ್. ನಂಜರಾಜು	300
ರಘುಪಾಲ್	100
ನರಸಿಂಹಯ್ಯ	70
ಉಮೇಶ್ ಉಚ್ಚಿಲ್	100
ಎನ್. ಎಲ್. ರಾಜಪ್ಪನ್	100
ಟಿ. ರಾಜನ್	200
ಎಂ.ಎ. ಅಂತೋಣಿ	250
ಮೋಹನ್	100
ಎನ್. ವಿ. ಸುಬ್ಬಯ್ಯ	400
ಒ.ವಿ. ಕೃಷ್ಣಮೂರ್ತಿ	50
ಸದಾಶಿವ ಹೋಟೆಲ್	100
ಗೋಪಿನಾಥ್	100
ಪರಮೇಶ್ವರ	50
ಎಸ್. ಬಾಬು	50
ಮೇಲಾಯುಧನ್	100
ಭಾಸ್ಕರ ಬಂಗೇರ	100
ಆಲ್ವಾ ವರ್ಕರ್ಸ್ ಯೂನಿಯನ್	5000
ಒಟ್ಟು	10,57,486-50

Reg. No. 17015/64 KRNM/BGS-405 MAG(2) PRB DECR 319-79/79 AIKYARANGA WEEKLY
ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ), ಕರ್ನಾಟಕ ರಾಜ್ಯ ಸಮಿತಿಯ ಪರವಾಗಿ ಮುದ್ರಣ ಮತ್ತು ಪ್ರಕಾಶನ: ಎಸ್.ಸೂರ್ಯನಾರಾಯಣ ರಾವ್
ಸಂಪಾದಕರು: ಜಿ.ಎನ್ ನಾಗರಾಜ್, ಸಂಪಾದಕೀಯ ಕಛೇರಿ: ನಂ.12, 18ನೇ ಅಡ್ಡ ರಸ್ತೆ, ಸಂಪಂಗಿರಾಮನಗರ, ಬೆಂಗಳೂರು-27 ಫೋನ್ ನಂ.2236462,
ಮುದ್ರಣ: ಹನಿ ಪ್ರಿಂಟರ್ಸ್, ಕ್ವೀನ್ ರಸ್ತೆ, ಬೆಂಗಳೂರು-1
Printed & Published by Communist Party of India (Marxist), Karnataka State Committee. Editor G.N. NAGARAJ